ಕ್ರ ಸಂ	ವಿದ್ಯಾರ್ಥಿಯ ಹೆಸರು	ಕೃಷಿ ಸಂಶೋಧನಾ ವಿಜ್ಞಾನಿ ಶಿಸ್ತು
1	ಮಿ. ಲೋಕೇಶ್ ಕುಮಾರ	ಸಸ್ಯ ರೋಗಶಾಸ್ತ್ರ
2	ಮಿ. ಮಹೇಶ ಹೆಚ್. ಎಸ್.	ಸಸ್ಯ ರೋಗಶಾಸ್ತ್ರ
3	ಮಿ. ಶ್ರೀ ಅನಂತ ಕುರೆಲ್ಲ	ಸಸ್ಯ ರೋಗಶಾಸ್ತ್ರ

2.10.14 ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಅರ್ಹ ವಿದ್ಯಾರ್ಥಿಗಳ ಪಟ್ಟಿ

ಕ್ರ. ಸಂ.	ವಿದ್ಯಾರ್ಥಿಯ ಹೆಸರು	ವಿಭಾಗಗಳು	ಕ್ರ. ಸಂ.	ವಿದ್ಯಾರ್ಥಿಯ ಹೆಸರು	ವಿಭಾಗಗಳು
1	ಮಿಸ್. ಕುಲಸುಂಬಿ ಎ.ಕೆ.	ತರಕಾರಿಬೀಜ ವಿಜ್ಞಾನ ಮತ್ತು ತಂತ್ರಜ್ಞಾನ	33	ಮಿಸ್. ಐಶ್ವರ್ಯ ವಿ. ಪಾಟೀಲ	ಆಹಾರ ವಿಜ್ಞಾನ ಮತ್ತು ಪೋಷಣೆ
2	ಮಿಸ್. ವೀಣಾ ಬುಶೆಟ್ಟಿ	ಕೃಷಿ ವಿಸ್ತರಣಾ ಶಿಕ್ಷಣ	34	ಮಿಸ್. ವಿನುತಾ ಆರ್. ಯಡಗೌಡ	ಆಹಾರ ವಿಜ್ಞಾನ ಮತ್ತು ಪೋಷಣೆ
3	ಮಿಸ್. ರೂಪಾ ಹೆಚ.ಎಸ್.	ಕೃಷಿ ಕೀಟಶಾಸ್ತ್ರ	35	ಮಿಸ್. ರಾಜೇಶ್ವರಿ ಎಫ್. ಕುರುಬೆಟ್ಟ	ಆಹಾರ ವಿಜ್ಞಾನ ಮತ್ತು ಪೋಷಣೆ
4	ಮಿ. ಗೌತಮ್ ಹೊಸಮನಿ	ಕೃಷಿ ಕೀಟಶಾಸ್ತ್ರ	36	ಮಿಸ್. ಮೇಘನಾ ಎಸ್. ಕೆಲಗೇರಿ	ಕುಟುಂಬ ಸಂಪನ್ಮೂಲ ನಿರ್ವಹಣೆ
5	ಮಿಸ್. ನೀನೂ ಅಗಸ್ಟಿನ್	ಕೃಷಿ ಕೀಟಶಾಸ್ತ್ರ	37	ಮಿ. ಅಮಿತ್. ಜಿ	ಕೃಷಿ ಹವಾಮಾನ ಶಾಸ್ತ್ರ
6	ಮಿ. ಹೊನ್ನಕೇರಪ್ಪ ಎಸ್. ಬಳ್ಳಾರಿ	ಕೃಷಿ ಕೀಟಶಾಸ್ತ್ರ	38	ಮಿ. ಮಹೇಶ್ ಹರೋಲಿ	ಕೃಷಿ ಹವಾಮಾನ ಶಾಸ್ತ್ರ
7	ಮಿ. ಅಮೊಲ್. ಎಮ್. ಪಾಟೀಲ	ಕೃಷಿ ಕೀಟಶಾಸ್ತ್ರ	39	ಮಿಸ್. ಚೇತನಾ ಬನಸೋಡೆ	ಮಣ್ಣು ವಿಜ್ಞಾನ
8	ಮಿ. ಆನಂದ್ ಹರ್ಷನ	ಕೃಷಿ ಕೀಟಶಾಸ್ತ್ರ	40	ಮಿಸ್. ಕವಿತಾ ಪಾಂಡು ಜಾಧವ್	ಮಣ್ಣು ವಿಜ್ಞಾನ
9	ಮಿ. ನಂದೀಶ್ ಜೆ.ಎಸ್.	ಕೃಷಿ ಕೀಟಶಾಸ್ತ್ರ	41	ಮಿಸ್. ಅಮೃತಾ ಎಸ್. ಅಜೇಯನ	ಮಣ್ಣು ವಿಜ್ಞಾನ
10	ಮಿಸ್. ಲಲಿತ ಹನಬರ	ಕೃಷಿ ಕೀಟಶಾಸ್ತ್ರ	42	ಮಿಸ್. ಪ್ರತಿಭಾ ಕೆ.ಎಸ್.	ಮಣ್ಣು ವಿಜ್ಞಾನ
11	ಮಿಸ್. ಉಷಾ ಬಿ.ಆರ್.	ಕೃಷಿ ಕೀಟಶಾಸ್ತ್ರ	43	ಮಿಸ್. ಜ್ಯೋಸಲ್ನ ಟಿ	ಮಣ್ಣು ವಿಜ್ಞಾನ
12	ಮಿಸ್. ಶೋಭಾ ಹೆಚ್. ಪಾಟೀಲ	ಕೃಷಿ ಕೀಟಶಾಸ್ತ್ರ	44	ಮಿಸ್. ದೀಪಾ ಕಲ್ಲಪ್ಪನವರ	ಮಣ್ಣು ವಿಜ್ಞಾನ
13	ಮಿಸ್. ಪ್ರಿಯಾ ಹೆಗಡೆ	ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನ	45	ಮಿಸ್. ರಾಗಿನಿ ಪಾಟೀಲ	ಮಣ್ಣು ವಿಜ್ಞಾನ
14	ಮಿಸ್. ಫಾತಿಮಾ ನದಾಫ	ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನ	46	ಮಿಸ್. ಉಮ್ಮೆಸಲ್ಮ ಆರ್. ಸನದಿ	ಮಣ್ಣು ವಿಜ್ಞಾನ
15	ಮಿಸ್. ಕೃತಿಕಾ ಚಂದ್ರ	ಮಾನವ ಅಭಿವೃದ್ಧಿ ಮತ್ತು ಕುಟುಂಬ ಅಧ್ಯಯನ	47	ಮಿ. ಹರ್ಷ ಬಿ.ಆರ್.	ಮಣ್ಣು ವಿಜ್ಞಾನ
16	ಮಿ. ಷಹಬಾಜ್ ನೂರಿ	ಕೃಷಿ ಅರಣ್ಯ	48	ಮಿಸ್. ಸುಜಾತ ಹೆಚ್.ಟಿ.	ಬೇಸಾಯಶಾಸ್ತ್ರ
17	ಮಿ. ವಿನಾಯಕ ಪೈ.	ಕೃಷಿ ಅರಣ್ಯ	49	ಮಿ. ಗುರುಬಸವರಾಜ	ಬೇಸಾಯಶಾಸ್ತ್ರ
18	ಮಿಸ್. ಪಲ್ಲವಿ ಬನವಾಸಿ	ಕೃಷಿ ಅರಣ್ಯ	50	ಮಿ. ಪ್ರದೇಶ ಜೆನಾ	ಬೇಸಾಯಶಾಸ್ತ್ರ
19	ಮಿ. ಅರ್ಜುನ ರಾಮಚಂದ್ರನ	ಕೃಷಿ ಅರಣ್ಯ	51	ಮಿಸ್. ನೆಹಾ ಜೋಷಿ	ಬೇಸಾಯಶಾಸ್ತ್ರ
20	ಮಿಸ್. ಶ್ವೇತಾ ವಿ.ಆರ್..	ಕೃಷಿ ಅರಣ್ಯ	52	ಮಿ. ಹರ್ಷವರ್ಧನ ಗೌಡ	ತೋಟಗಾರಿಕೆ
21	ಮಿಸ್.ಕೃಷ್ಣಾಕುಮಾರಿ	ಕೃಷಿ ಅರಣ್ಯ	53	ಮಿ. ಇಮ್ರಾನ್ ಅಲಿ	ತರಕಾರಿ ವಿಜ್ಞಾನ
22	ಮಿ. ರೌನಾಕ್ ಕೀರ್ತಿ	ಕೃಷಿ ಅರಣ್ಯ	54	ಮಿ. ರಾಘವೇಂದ್ರ ಆರ್. ಹದೋರ	ತರಕಾರಿ ವಿಜ್ಞಾನ
23	ಮಿಸ್. ರೇಖಾ ರಾಹಿ	ಕೃಷಿ ಅರಣ್ಯ	55	ಮಿ. ಅರ್ಜುನ ಪರಬ	ಹಣ್ಣು ವಿಜ್ಞಾನ
24	ಮಿಸ್. ಗಾಯತ್ರಿ ಎಮ್.	ಜೈವಿಕ ತಂತ್ರಜ್ಞಾನ	56	ಮಿಸ್. ಪವಿತ್ರ ಎನ್.ಎಲ್.	ಕೃಷಿ ಸಂಖ್ಯಾಶಾಸ್ತ್ರ
25	ಮಿ. ಮಂಗೇಶ್ ಜಾಧವ್	ಜೈವಿಕ ತಂತ್ರಜ್ಞಾನ	57	ಮಿಸ್. ಶ್ವೇತಾ ಕೆ.ಎಸ್.	ಕೃಷಿ ಸಂಖ್ಯಾಶಾಸ್ತ್ರ
26	ಮಿಸ್. ಪೂಜಾ ಎಸ್.ಕೆ.	ಜೈವಿಕ ತಂತ್ರಜ್ಞಾನ	58	ಮಿಸ್. ನಾಗರತ್ನ ಕುರಬೆಟ್ಟ	ಗೃಹವಿಜ್ಞಾನ ವಿಸ್ತರಣೆ ಮತ್ತು ಸಂವಹನ ನಿರ್ವಹಣೆ
27	ಮಿಸ್. ಪುಷ್ಪೆಷ್ ಜೋಷಿ	ಜೈವಿಕ ತಂತ್ರಜ್ಞಾನ	59	ಮಿ. ಶಶಿಕರಣ್	ಗೃಹವಿಜ್ಞಾನ ವಿಸ್ತರಣೆ ಮತ್ತು ಸಂವಹನ ನಿರ್ವಹಣೆ
28	ಮಿಸ್. ರಂಜಿತಾ ಕೆ.ಎಮ್.	ಜೈವಿಕ ತಂತ್ರಜ್ಞಾನ	60	ಮಿ. ಸಂಗಮೇಶ ಅಂಗಡಿ	ಕೃಷಿ ಆರ್ಥಶಾಸ್ತ್ರ
29	ಮಿ. ಸಂದೀಪ ಕದಮ್	ಜೈವಿಕ ತಂತ್ರಜ್ಞಾನ	61	ಮಿ. ನವೀನ ಕುಮಾರ ನಾಯ್ಕ	ಕೃಷಿ ಆರ್ಥಶಾಸ್ತ್ರ
30	ಮಿಸ್. ಸೋನಮ್ ಆಂಗಮೊ	ಜೈವಿಕ ತಂತ್ರಜ್ಞಾನ	62	ಮಿಸ್. ಗೌರಿ ಸೌದತ್ತಿ	ಕೃಷಿ ಆರ್ಥಶಾಸ್ತ್ರ
31	ಮಿ. ಪ್ರಸೆಂಜಿತ್ ದೆಬ್‌ನಾಥ	ಜೈವಿಕ ತಂತ್ರಜ್ಞಾನ	63	ಮಿ. ಮಂಜುನಾಥ ಪಾಳೇದ	ಕೃಷಿ ಆರ್ಥಶಾಸ್ತ್ರ
32	ಮಿಸ್. ವಿದ್ಯಾ ಸಂಗಮ್ಮನವರ	ಉಡುಪು ಮತ್ತು ವಸ್ತ್ರ ವಿನ್ಯಾಸ			

ಸಂಶೋಧನೆ

3

ಸಂಶೋಧನೆ

3.1 2018–19 ರಲ್ಲಿ ಬಿಡುಗಡೆಗೆ ಅಂಗೀಕರಿಸಲಾದ ವಿವಿಧ ಬೆಳೆಗಳ ಹೊಸ ತಳಿ/ಹೈಬ್ರಿಡ್‌ಗಳು

1	**ಶೇಂಗಾ ಡಿ.ಹೆಚ್.–256:** ಅಧಿಕ ಇಳುವರಿ (25–30 ಕ್ವಿ./ಹೆ.) ಸ್ಪ್ಯಾನಿಶ್‌ಗೆಜ್ಜೆ ಶೇಂಗಾ ತಳಿಯ ಅವಧಿ 105 ರಿಂದ 110 ದಿನಗಳು, ಮುಂಗಾರು ಮತ್ತು ಹಿಂಗಾರು/ ಬೇಸಿಗೆ ಕಾಲದಲ್ಲೂ ಬೆಳೆಯಲು ಸೂಕ್ತ. ವಲಯ 3, 8, 9 ಹಾಗೂ 10 ಗಳಿಗೆ ಶಿಫಾರಸ್ಸು ಮಾಡಲಾಗಿದೆ.
2	**ಸೋಯಾಅವರೆ ಡಿ.ಎಸ್.ಬಿ.–31:** ಅಧಿಕ ಇಳುವರಿ (25–30 ಕ್ವಿ./ಹೆ.), ಅಲ್ಪಾವಧಿ (80–85 ದಿನಗಳು) ತುಕ್ಕು ರೋಗ ನಿರೋಧಕ ಶಕ್ತಿ ಹೊಂದಿದ 4 ಕಾಳಿನ ಕಾಯಿಗಳನ್ನು (25 % ರವರೆಗೆ) ಹೊಂದಿರುವ ತಳಿ. ವಲಯ 3 ಮತ್ತು 8 ಶಿಫಾರಸ್ಸು ಮಾಡಲಾಗಿದೆ.
3	**ನೇಪಿಯರ್ ಸಜ್ಜೆ ಡಿ.ಹೆಚ್.ಎನ್. –15:** ಅಧಿಕ ಇಳುವರಿ (2.5–3.00 ಟನ್/ಹೆ.), ಈ ತಳಿಯು ರುಚಿಕರ, ಸಸಾರಜನಕದ ಪ್ರಮಾಣ ಶೇ.8–9 % ಹಾಗೂ ಹೆಚ್ಚು ತಾಪಮಾನವಿರುವ ಪ್ರದೇಶಗಳಿಗೆ ಸೂಕ್ತವಾಗಿದೆ. ವಲಯ 8ಕ್ಕೆ ಸೂಕ್ತ.
4	**ಗೋವಿನಜೋಳ : ಬಿ.ಆರ್.ಎಮ್.ಹೆಚ್.–1:** ಅಧಿಕ ಇಳುವರಿ (70–72 ಕ್ವಿ./ಹೆ.), ಉರಿಜಿಂಗಿ ರೋಗಕ್ಕೆ ಮಧ್ಯಮ ನಿರೋಧಕ ಶಕ್ತಿ ಮತ್ತು ಕಿತ್ತಳೆ ಬಣ್ಣದ ಕಾಳುಗಳು ಹೊಂದಿದೆ. ವಲಯ 3 ಮತ್ತು 8 ಸೂಕ್ತವಾಗಿದೆ.
5	**ಹೈಬ್ರಿಡ್ ಸಜ್ಜೆ: ವಿ.ಪಿ.ಎಮ್.ಹೆಚ್.–7:** ಅಧಿಕ ಇಳುವರಿ (30–32 ಕ್ವಿ./ಹೆ.), ಬದಲಾದ ವಾತಾವರಣಕ್ಕೆ ತಕ್ಕಂತೆ ತಡವಾದ ಬಿತ್ತನೆಗೆ, ಅಂತರ ಬೆಳೆ ಪದ್ಧತಿಗೆ ಮತ್ತು ಬಹು ಬೆಳೆಪದ್ಧತಿಗೆ ಸೂಕ್ತವಾದ ತಳಿ. ವಲಯ 3 ಕ್ಕೆ ಸೂಕ್ತ.
6	**ಕಡಲೆ : ಡಿ.ಬಿ.ಜಿ.ವಿ.–204:** ಅಧಿಕ ಇಳುವರಿ (18–20 ಕ್ವಿ./ಹೆ.), ಯಾಂತ್ರೀಕೃತ ಕೊಯ್ಲಿಗೆ ಸೂಕ್ತವಾದ ತಳಿ. ಚಿನ್ನದ ಕಂದು ಬಣ್ಣದ ಮಧ್ಯಮ ಗಾತ್ರದ ಕಾಳುಗಳನ್ನು ಹೊಂದಿದೆ. ಸೊರಗು ಮತ್ತು ಒಣ ಬೇರು ಕೊಳೆ ರೋಗಕ್ಕೆ ಮಧ್ಯಮ ಸಹಿಷ್ಣುತೆ ಹೊಂದಿದೆ. ವಲಯ 3 ಮತ್ತು 8 ಸೂಕ್ತವಾಗಿದೆ.
7	**ಕಬ್ಬು : ಎಸ್.ಎನ್.ಕೆ.–09211:** ಅಧಿಕ ಇಳುವರಿ (130–140 ಟ./ಹೆ.), 8 ರಿಂದ 10 ತಿಂಗಳಲ್ಲಿ ಮಾಗುವುದು. ತಡವಾಗಿ ಹೂ ಬಿಡುವ ಮುಳ್ಳುಗಳಿಲ್ಲದ ತಳಿಯಾಗಿದ್ದು ಬೇಗನೆ ಕೊಯ್ಲು ಮಾಡಬಹುದಾಗಿದೆ. ಕಬ್ಬು ಮಧ್ಯಮ ದಪ್ಪದ ಗಾತ್ರದ್ದಾಗಿದ್ದು ತಿಳಿ ಗುಲಾಬಿ ಹಳದಿ ಬಣ್ಣವನ್ನು ಹೊಂದಿದೆ. ರವದಿಯನ್ನು ಸುಲಭವಾಗಿ ಸುಲಿಯಬಹುದಾಗಿದೆ. ವಲಯ 3 ಮತ್ತು 8 ಸೂಕ್ತವಾಗಿದೆ.

3.2 "ಸುಧಾರಿತ ಬೇಸಾಯ ಕ್ರಮಗಳು" ಪುಸ್ತಕದಲ್ಲಿ ಸೇರಿಸಲು 2018–19 ರಲ್ಲಿ ಅಂಗೀಕರಿಸಿದ ಹೊಸ ತಂತ್ರಜ್ಞಾನಗಳು

ಅ. ಸಂ.	ತಂತ್ರಜ್ಞಾನಗಳು
1	**ಸಾಲು ಕೃಷಿ ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿ:** ಸಾಲು ಕೃಷಿ ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿಯನ್ನು ವಲಯ 3 ರಲ್ಲಿ ಮುಂಗಾರು ಬೆಳೆಗಳಾದ ಗೋವಿನಜೋಳ, ಸೂರ್ಯಕಾಂತಿ, ಮೆಣಸಿನಕಾಯಿ + ಈರುಳ್ಳಿ, ಮೆಣಸಿನಕಾಯಿ + ಬೆಳ್ಳುಳ್ಳಿ, ಮೆಣಸಿನಕಾಯಿ + ಶೇಂಗಾ, ಮೆಣಸಿನಕಾಯಿ + ಅರಿಶಿಣ ತೊಗರಿ + ಹೆಸರು ಮತ್ತು ತೊಗರಿ + ಉದ್ದು, ಹಿಂಗಾರಿನಲ್ಲಿ ಗೋದಿ, ಕಡಲೆ, ಶೇಂಗಾ ಮತ್ತು ಅವರೆ ಬೆಳೆಗಳಲ್ಲಿ ಸೂಕ್ತವಾಗಿ ಅಳವಡಿಸಬಹುದು. ಈ ಪದ್ಧತಿಯಲ್ಲಿ ಶೇ. 40 ರಷ್ಟು ನೀರನ್ನು ಉಳಿತಾಯ ಮಾಡುವುದಲ್ಲದೇ ಶೇ. 20–30 ರಷ್ಟು ಹೆಚ್ಚಿನ ಇಳುವರಿಯನ್ನು ಪಡೆಯಬಹುದು.
2	**ಸಾವಯವ ಕೃಷಿ ಪದ್ಧತಿಯಲ್ಲಿ ವಿವಿಧ ಬೆಳೆ ಮತ್ತು ಬೆಳೆ ಪದ್ಧತಿಗಳ ಉತ್ಪಾದನಾ ತಂತ್ರಜ್ಞಾನಗಳು:** ಆರು ವರ್ಷಗಳ ದೀರ್ಘ ಸಂಶೋಧನೆಯಿಂದ ಕಂಡು ಬಂದಿರುವುದೇನೆಂದರೆ, ಪ್ರತಿಶತ 100 ಸಾವಯವದಲ್ಲಿ ಅಲಸಂದಿ, ಬಿಳಿಜೋಳ, ಮತ್ತು ಕಡಲೆ ಬೆಳೆಗಳು, ಪ್ರತಿಶತ 75 ಸಾವಯವ + 25 ರಾಸಾಯನಿಕದಲ್ಲಿ ಕುಸಬೆ, ತೊಗರಿ ಮತ್ತು ಶೇಂಗಾ, ಪ್ರತಿಶತ 50 ಸಾವಯವ + 50 ರಾಸಾಯನಿಕದಲ್ಲಿ ಗೋವಿನಜೋಳ ಹಾಗೂ 75 ಪ್ರತಿಶತ ಸಾವಯವ + ಎರೆಜಲ + ಗೋಮೂತ್ರ ಸಿಂಪರಣೆಯಲ್ಲಿ ಹೆಸರು ಮತ್ತು ಶಿಫಾರಸ್ಸು ಮಾಡಿದ ಪದ್ಧತಿಯಲ್ಲಿ (ಆರ್ ಪಿ ಪಿ) ಹತ್ತಿ ಹೆಚ್ಚಿನ ಇಳುವರಿ ನೀಡಿದ ಯಶಸ್ವಿ ಬೆಳೆಗಳಾಗಿವೆ. ಯಾವುದೇ ತರಹದ ಪೋಷಕಾಂಶ ನಿರ್ವಹಣೆಯಲ್ಲಿಯೂ ಸಹ ಶೇಂಗಾ + ಹತ್ತಿ (2:1) ಅಂತರ ಬೆಳೆ ಪದ್ಧತಿ ಹೆಚ್ಚು ಲಾಭದಾಯಕ. (ರೂ. 74725/ಹೆ. ನಿವ್ವಳ ಲಾಭ) ನಂತರದ್ದು ಗೋವಿನಜೋಳ–ಕಡಲೆ ಸರದಿಬೆಳೆ (ರೂ. 59,608/ಹೆ. ನಿವ್ವಳ ಲಾಭ) ಹಾಗೂ ಹೆಸರು–ಜೋಳ (ರೂ. 46,251/ಹೆ ನಿವ್ವಳ ಲಾಭ) ಅಖಂಡ ತೊಗರಿ ಬೆಳೆ (ರೂ. 48966/ಹೆ. ನಿವ್ವಳ ಲಾಭ).
3	**ಮಳೆಯಾಶ್ರಿತ ತೊಗರಿ ಬೆಳೆಯಲ್ಲಿ ಸಾವಯವ ಗೊಬ್ಬರಗಳನ್ನು ಪಟ್ಟಿ ಪದ್ಧತಿಯಲ್ಲಿ ಹಾಕುವುದು:** ಬಿತ್ತನೆಯ ಸಾಲಿನಲ್ಲಿ ಎಕರೆಗೆ 1.6 ಟನ್ ತಿಪ್ಪೆಗೊಬ್ಬರ ಅಥವಾ 0.8 ಟನ್ ಎರೆಗೊಬ್ಬರ ಹಾಕುವುದರಿಂದ ಸಾವಯವ ಗೊಬ್ಬರಗಳ ಉಳಿತಾಯದೊಂದಿಗೆ ಅಧಿಕ ಇಳುವರಿ ಪಡೆಯಬಹುದು.

4	**ಕೊಟ್ಟಿಗೆ ಗೊಬ್ಬರದ ಜೊತೆಗೆ ಪೌಷ್ಟೀಕರಿಸಿದ ಕಬ್ಬಿಣ ಸಲ್ಫೇಟ್ ಮತ್ತು ಸತುವಿನ ಸಲ್ಫೇಟ್‌ನ್ನು ಹಿಂಗಾರಿ ಜೋಳದಲ್ಲಿ ಬಳಸುವುದು:** ಕೊಟ್ಟಿಗೆ ಗೊಬ್ಬರದ ಜೊತೆಗೆ ಪೌಷ್ಟೀಕರಿಸಿದ ಕಬ್ಬಿಣ ಸಲ್ಫೇಟ್ (ಪ್ರತಿ ಎಕರೆಗೆ 1.5 ಕೆಜಿ ಕಬ್ಬಿಣದ ಸಲ್ಫೇಟ್ ಮತ್ತು 20 ಕೆಜಿ ಕೊಟ್ಟಿಗೆ ಗೊಬ್ಬರ) ಮತ್ತು ಸತುವಿನ ಸಲ್ಫೇಟ್ (ಪ್ರತಿ ಎಕರೆಗೆ 1.5 ಕೆಜಿ ಸತುವಿನ ಸಲ್ಫೇಟ್ ಮತ್ತು 20 ಕೆಜಿ ಕೊಟ್ಟಿಗೆ ಗೊಬ್ಬರ) ಗಳನ್ನು ಶಿಫಾರಸ್ಸು ಮಾಡಿದ ಗೊಬ್ಬರಗಳೊಂದಿಗೆ ಸೇರಿಸಿ ಬಿತ್ತುವ ಸಮಯದಲ್ಲಿ ಮಣ್ಣಿಗೆ ಸೇರಿಸಬೇಕು. ಇದರಿಂದ ಇಳುವರಿ ಜೊತೆಗೆ ಕಾಳು ಮತ್ತು ಮೇವಿನಲ್ಲಿ ಕಬ್ಬಿಣ ಹಾಗೂ ಸತುವಿನ ಪ್ರಮಾಣ ಹೆಚ್ಚಾಗುವುದು.
5	**ನೀರಾವರಿ ಗೋವಿನ ಜೋಳದಲ್ಲಿ ಕಳೆ ನಿಯಂತ್ರಣ:** ಪ್ರತಿ ಎಕರೆಗೆ ಟೋಪ್ರಾಮೆಜೋನ್ + ಅಟ್ರಾಜಿನ್ (ಪೂರ್ವಮಿಶ್ರಿತ) 310 ಗ್ರಾಂ. ಅಥವಾ ಟೆಂಬೂಟ್ರಿಯಾನ್ 48 ಗ್ರಾಂ + ಅಟ್ರಾಜಿನ್ 0.4 ಕಿ.ಗ್ರಾಂ (ಟ್ಯಾಂಕ್ ಮಿಶ್ರಣ) ವನ್ನು ಗೋವಿನಜೋಳ ಬೆಳೆಯಲ್ಲಿ ಬಿತ್ತಿದ ನಂತರ ಕಳೆಗಳು 2–3 ಎಲೆಗಳ ಹಂತದಲ್ಲಿರುವಾಗ ಸಿಂಪರಣೆ ಮಾಡುವುದರಿಂದ ಕಳೆಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು.
6	**ಸೋಯಾಅವರೆ ಮತ್ತು ನವಣೆಯ ಅಂತರ ಬೆಳೆ ಪದ್ಧತಿ (4:2):** ನಾಲ್ಕು ಸಾಲು ಸೋಯಾಅವರೆ ಮತ್ತು ಎರಡು ಸಾಲು ನವಣೆ ಯನ್ನು 30 ಸೆಂ.ಮೀ. ಅಂತರದ ಸಾಲಿನಲ್ಲಿ ಬೆಳೆಯುವುದು ಹೆಚ್ಚು ಲಾಭದಾಯಕ.
7	**ನೀರಾವರಿ ಗೋವಿನಜೋಳದಲ್ಲಿ ಸಾವಯವ ಗೊಬ್ಬರದ ಜೊತೆಗೆ ಪೌಷ್ಟೀಕರಿಸಿದ ಕಬ್ಬಿಣ ಸಲ್ಫೇಟ್ ಮತ್ತು ಸತುವಿನ ಸಲ್ಫೇಟ್‌ನ್ನು ಬಳಸುವುದು:** ತಲಾ 6 ಕಿ.ಗ್ರಾಂ. ಸತುವಿನ ಸಲ್ಫೇಟ್ ಮತ್ತು ಕಬ್ಬಿಣದ ಸಲ್ಫೇಟ್‌ನ್ನು 50 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರದಲ್ಲಿ ಮಿಶ್ರಣ ಮಾಡಿ 15 ದಿನಗಳ ವರೆಗೆ ನೆರಳಿನಲ್ಲಿ ಪೌಷ್ಟೀಕರಿಸಿ ನಂತರ ಬಿತ್ತನೆ ಸಮಯದಲ್ಲಿ ಮಣ್ಣಿನಲ್ಲಿ ಬೆರೆಸಬೇಕು. ತದನಂತರ, ತಲಾ ಶೇ. 0.5 ಸತುವಿನ ಸಲ್ಫೇಟ್ ಮತ್ತು ಕಬ್ಬಿಣದ ಸಲ್ಫೇಟ್ ದ್ರಾವಣವನ್ನು ತಯಾರಿಸಿ ಅದಕ್ಕೆ ಶೇಕಡಾ 1.0 ಸುಣ್ಣದ ತಿಳಿನೀರನ್ನು ಸೇರಿಸಿ ಬಿತ್ತಿದ 30–40 ದಿನಗಳಲ್ಲಿ ಬೆಳೆಗೆ ಸಿಂಪರಣೆ ಮಾಡಬೇಕು. ಇದರಿಂದ ಬೆಳೆಯ ಇಳುವರಿ ಮತ್ತು ಕಾಳಿನಲ್ಲಿ ಸತು ಮತ್ತು ಕಬ್ಬಿಣದ ಅಂಶ ಹೆಚ್ಚಾಗುವುದು.
8	**ಸಮಗ್ರ ಕೃಷಿ ಪದ್ಧತಿಯಲ್ಲಿ ನೂತನ ಘಟಕಗಳು ಮತ್ತು ತಾಂತ್ರಿಕತೆಗಳ ಅಳವಡಿಕೆ:** ಉತ್ತರದ ಒಣ ವಲಯ–3 ರ ಮಳೆಯಾಶ್ರಿತ ಗದಗ ಜಿಲ್ಲೆಯ ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ ಸಮಗ್ರ ಕೃಷಿ ಪದ್ಧತಿ: **ಬೆಳೆ ಪದ್ಧತಿ (73%):** ಶೇಂಗಾ – ಹಿಂಗಾರಿ ಜೋಳ; ಸಂಕರಣ ಗೋವಿನಜೋಳ – ಕಡಲೆ; ಬಿಟಿ ಹತ್ತಿ **ತೋಟಗಾರಿಕೆ (26%):** ಪೌಷ್ಟಿಕ ತರಕಾರಿಗಳ ಕೈತೋಟ; ಹೊಲದ ಸ್ವಲ್ಪ ಕ್ಷೇತ್ರದಲ್ಲಿ ಅಧಿಕ ಲಾಭ ತರುವ ತರಕಾರಿ ಅಥವಾ ಹೂವು ಬೆಳೆಯುವದು. **ಮೇವಿನ ಬೆಳೆ** (1%) : ಬಹುವಾರ್ಷಿಕ ಹುಲ್ಲು; ಗೋವಿನಜೋಳ; ಜೋಳ, **ಹೈನುಗಾರಿಕೆ :** ಆಕಳುಗಳು / ಎಮ್ಮೆಗಳು **ಮೌಲ್ಯ ವೃದ್ಧೀಕರಣ :** ಬೆಣ್ಣೆ ತಯಾರಿಸುವದು; ಜೈವಿಕ ಕಾಂಪೋಸ್ಟ್ ತಯಾರಿಕೆ; ಎರೆಹುಳು ಗೊಬ್ಬರ ತಯಾರಿಕೆ.
9	**ನೀರಾವರಿ ಗೋದಿಯಲ್ಲಿ ದ್ರವ ರೂಪದ ಜೈವಿಕ ಗೊಬ್ಬರ (ಅಝೋಸ್ಪಿರಿಲ್ಲಂ ಮತ್ತು ರಂಜಕ ಕರಗಿಸುವ ಜೀವಾಣು) ಗಳಿಂದ ಬಿಜೋಪಚಾರ:** ಎಕರೆಗೆ ಬೇಕಾಗುವ ಬಿತ್ತನೆ ಬೀಜವನ್ನು 1.2 ಕಿ.ಗ್ರಾಂ ಅಝೋಸ್ಪಿರಿಲಂ ಅಥವಾ ದ್ರವ ರೂಪದ 240 ಮಿ.ಲೀ. ಅಝೋಸ್ಪಿರಿಲಂ ಹಾಗೂ 240 ಮಿ.ಲೀ. ದ್ರವ ರೂಪದ ರಂಜಕ ಕರಗಿಸುವ ಜೀವಾಣುಗಳಿಂದ ಉಪಚರಿಸಿ ಬಿತ್ತನೆ ಮಾಡಬೇಕು.
10	**ಮಳೆಯಾಶ್ರಿತ ಗೋದಿಯಲ್ಲಿ ದ್ರವ ರೂಪದ ಜೈವಿಕ ಗೊಬ್ಬರ (ಅಝೋಸ್ಪಿರಿಲ್ಲಂ ಮತ್ತು ರಂಜಕ ಕರಗಿಸುವ ಜೀವಾಣು) ಗಳಿಂದ ಬಿಜೋಪಚಾರ:** ಎಕರೆಗೆ ಬೇಕಾಗುವ ಬಿತ್ತನೆ ಬೀಜವನ್ನು ದ್ರವ ರೂಪದ 80 ಮಿ.ಲೀ. ಅಝೋಸ್ಪಿರಿಲಂ ಹಾಗೂ 80 ಮಿ.ಲೀ. ದ್ರವ ರೂಪದ ರಂಜಕ ಕರಗಿಸುವ ಜೀವಾಣುಗಳಿಂದ ಉಪಚರಿಸಿ ಬಿತ್ತನೆ ಮಾಡಬೇಕು.
11	**ಮಡಕೆ ಬೆಳೆಯಲ್ಲಿ ಸಾವಯವ ಗೊಬ್ಬರದ ಜೊತೆಗೆ ಪೌಷ್ಟೀಕರಿಸಿದ ಸತುವಿನ ಸಲ್ಫೇಟ್‌ನ್ನು ಬಳಸುವುದು:** ಸತುವಿನ ಸಲ್ಫೇಟನ್ನು ಎರೆಹುಳು ಗೊಬ್ಬರದೊಂದಿಗೆ 1:1 ಪ್ರಮಾಣದಲ್ಲಿ ಮಿಶ್ರಣ ಮಾಡಿ, 15 ದಿನಗಳ ವರೆಗೆ ಕೂಡಿಡಬೇಕು ಮತ್ತು ಬಿತ್ತುವಾಗ ರಾಸಾಯನಿಕ ಗೊಬ್ಬರಗಳೊಂದಿಗೆ ಮಣ್ಣಿಗೆ ಹಾಕಬೇಕು.
12	**ಈರುಳ್ಳಿಯಲ್ಲಿ ಬಿತ್ತನೆಯ ಅಂತರ:** ಒಣ ಬೇಸಾಯದಲ್ಲಿ ಈರುಳ್ಳಿಯನ್ನು 45 ಸೆಂ. ಮೀ. ಅಂತರದ ಸಾಲುಗಳಲ್ಲಿ ಕುರಿಗೆಯಿಂದ ಬಿತ್ತುವುದು ಸೂಕ್ತ.
13	**ಕಡಲೆಯಲ್ಲಿ ಬಿತ್ತನೆಯ ಅಂತರ:** ಒಣ ಬೇಸಾಯದಲ್ಲಿ ಕಡಲೆಯನ್ನು 45 ಸೆಂ. ಮೀ. ಅಂತರದ ಸಾಲುಗಳಲ್ಲಿ ಕುರಿಗೆಯಿಂದ ಬಿತ್ತುವುದು ಸೂಕ್ತ.
14	**ಸಜ್ಜೆಯಲ್ಲಿ ಕಬ್ಬಿಣದ ಸಲ್ಫೇಟ್ (ಶೇ.0.75) ನಿಂದ ಬಿತ್ತಿದ 25–30 ದಿನಗಳ ನಂತರ ಸಿಂಪರಣೆ :** ಸಜ್ಜೆ ಬಿತ್ತದ 25 ರಿಂದ 30 ದಿನಗಳ ನಂತರ ಶೇ 0.75 ರ ಕಬ್ಬಿಣದ ಸಲ್ಫೇಟನ್ನು ಸುಣ್ಣದ ನೀರಿನಲ್ಲಿ (7.5 ಗ್ರಾಂ ಕಬ್ಬಿಣದ ಸಲ್ಫೇಟ ಮತ್ತು 2.0 ಗ್ರಾಂ ಸುಣ್ಣವನ್ನು ಪ್ರತಿ ಲೀಟರ್ ನೀರಿನಲ್ಲಿ) ಬೆರಸಿ ಸಿಂಪರಣೆ ಮಾಡಬೇಕು.
15	**ಒಣ ಪ್ರದೇಶದ ಎಲ್ಲ ಬೆಳೆಗಳಿಗೆ ಕಬ್ಬಿಣ ಮತ್ತು ಸತು ಪೋಷಕಾಂಶಗಳನ್ನು ಒದಗಿಸುವ ಅವಶ್ಯಕತೆ:** ಕಬ್ಬಿಣದ ಕೊರತೆ ಇರುವ ಗದಗ, ಕೊಪ್ಪಳ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಮಳೆಯಾಶ್ರಯದಲ್ಲಿ ಬೆಳೆಯುವ ಎಲ್ಲ ಬೆಳೆಗಳಿಗೆ ಪ್ರತಿ ಎಕರೆಗೆ 4 ಕಿ.ಗ್ರಾಂ ಕಬ್ಬಿಣದ ಸಲ್ಫೇಟನ್ನು ಮತ್ತು ನೀರಾವರಿಯಲ್ಲಿ ಬೆಳೆಯುವ ಎಲ್ಲ ಬೆಳೆಗಳಿಗೆ ಪ್ರತಿ ಎಕರೆಗೆ 10 ಕಿ.ಗ್ರಾಂ ಕಬ್ಬಿಣದ ಸಲ್ಫೇಟನ್ನು 1:1 ಪ್ರಮಾಣದಲ್ಲಿ ಎರೆಹುಳು ಗೊಬ್ಬರ ಅಥವಾ ಚೆನ್ನಾಗಿ ಕಳೆತ ಸಾವಯವ ಗೊಬ್ಬರದೊಂದಿಗೆ ಮಿಶ್ರಣ ಮಾಡಿ, 15 ದಿನ ಕೂಡಿಟ್ಟು, ನಂತರ ನೆರಳಲ್ಲಿ ಒಣಗಿಸಿ ಬಿತ್ತನೆ ಸಮಯದಲ್ಲಿ ಸಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರಗಳ ಜೊತೆಗೆ ಪೂರೈಸುವುದು. ಅದೇ ರೀತಿಯಾಗಿ ಸತುವಿನ ಕೊರತೆ ಇರುವ ಪ್ರದೇಶಗಳಲ್ಲಿ ಮಳೆಯಾಶ್ರಯದಲ್ಲಿ ಬೆಳೆಯುವ ಎಲ್ಲ ಬೆಳೆಗಳಿಗೆ ಪ್ರತಿ ಎಕರೆಗೆ 4 ಕಿ.ಗ್ರಾಂ ಸತುವಿನ ಸಲ್ಫೇಟನ್ನು ಮತ್ತು ನೀರಾವರಿಯಲ್ಲಿ ಬೆಳೆಯುವ ಎಲ್ಲ ಬೆಳೆಗಳಿಗೆ ಪ್ರತಿ ಎಕರೆಗೆ 10 ಕಿ.ಗ್ರಾಂ ಸತುವಿನ ಸಲ್ಫೇಟನ್ನು 1:1 ಪ್ರಮಾಣದಲ್ಲಿ ಎರೆಹುಳು ಗೊಬ್ಬರ ಅಥವಾ ಚೆನ್ನಾಗಿ ಕಳೆತ ಸಾವಯವ ಗೊಬ್ಬರದೊಂದಿಗೆ ಮಿಶ್ರಣ ಮಾಡಿ, 15 ದಿನ ಕೂಡಿಟ್ಟು, ನಂತರ ನೆರಳಲ್ಲಿ ಒಣಗಿಸಿ ಬಿತ್ತನೆ ಸಮಯದಲ್ಲಿ ಸಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರಗಳ ಜೊತೆಗೆ ಪೂರೈಸುವುದು.
16	**ತೊಗರಿಯಲ್ಲಿ ಬ್ರೋಪ್ಲಾನಿಲೈಡ್ 30% ಎಸ್.ಸಿ. ಕೀಟನಾಶಕದಿಂದ ಕಾಯಿ ಕೊರೆಯುವ ಕೀಟಗಳ ನಿರ್ವಹಣೆ:** 0.06 ಮಿ.ಲೀ. ಬ್ರೋಫ್ಲಾನಿಲೈಡ್ 30 ಎಸ್.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
17	**ತೊಗರಿಯಲ್ಲಿ ಬಾರ್ಕ ಬಿಟಿ ಜೈವಿಕ ಕೀಟನಾಶಕದಿಂದ ಕಾಯಿ ಕೊರೆಯುವ (*ಹೆಲಿಕೊವರ್ಪಾ*) ಕೀಟದ ನಿರ್ವಹಣೆ:** 1.40 ಗ್ರಾಂ/ಲೀ. ಬಿಟಿ ಜೈವಿಕ ಕೀಟನಾಶಕದ ಸಿಂಪರಣೆಯಿಂದ ತೊಗರಿಯಲ್ಲಿ ಕಾಯಿ ಕೊರೆಯುವ (ಹೆಲಿಕೊವರ್ಪಾ) ಕೀಟದ ನಿರ್ವಹಣೆಯನ್ನು ಮಾಡಬಹುದು.

18	**ಕಡಲೆಯಲ್ಲಿ ಕ್ಲೋರಫೆನಾಪೈರ್ 24 % ಎಸ್.ಸಿ. ದಿಂದ ಕಾಯಿ ಕೊರೆಯುವ (*ಹೆಲಿಕೊವರ್ಪಾ*) ಕೀಟದ ನಿರ್ವಹಣೆ:** 2.00 ಮಿ.ಲೀ. ಕ್ಲೋರಫೆನಾಪೈರ್ 24% ಎಸ್.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆಯಿಂದ ಕಡಲೆಯಲ್ಲಿ ಕಾಯಿ ಕೊರೆಯುವ (*ಹೆಲಿಕೊವರ್ಪಾ*) ಕೀಟದ ನಿರ್ವಹಣೆಯನ್ನು ಮಾಡಬಹುದು.
19	**ಹತ್ತಿಯಲ್ಲಿ ಗುಲಾಬಿ ಕಾಯಿಕೊರಕದ ನಿರ್ವಹಣೆಗಾಗಿ ವಿಶೇಷ ಕ್ರಮಗಳು:** 100 ದಿನಗಳ ಅವಧಿಗಿಂತ ಮುಂಚಿನ ಬೆಳೆಯಲ್ಲಿ 2.ಮಿ.ಲೀ ಪ್ರೊಫೆನೋಫಾಸ್ 50 ಇ.ಸಿ. ಅಥವಾ 1.0 ಗ್ರಾಂ ಥಯೋಡಿಕರ್ಬ್ 75ಡಬ್ಲ್ಯೂಪಿ ಅಥವಾ 1.0 ಮಿ.ಲೀ ಸ್ಪೈನೆಟೋರಾಮ್ 12 % ಎಸ್.ಸಿ ಅಥವಾ 2.0 ಮಿ.ಲೀ ಕ್ವಿನಾಲ್‌ಫಾಸ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
20	**ಸೌತೆಕಾಯಿಯಲ್ಲಿ ಜಿಗಿಹುಳು ಮತ್ತು ಬಿಳಿ ನೊಣಗಳ ನಿರ್ವಹಣೆ:** ಕೀಟಬಾಧೆ ಕಂಡು ಬಂದಾಗ ಅಫಿಡೊಪೈರೊಪೆನ್ 50 ಗ್ರಾಂ/ಎಲ್ ಡಿ.ಸಿ. ಯನ್ನು 2 ಮಿಲಿ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
21	**ಗೋವಿನಜೋಳದಲ್ಲಿ ಉರಿಜಿಂಗಿ ರೋಗ ಮತ್ತು ತುಕ್ಕು ರೋಗದ ನಿರ್ವಹಣೆ:** ಸಂಯುಕ್ತ ಶಿಲೀಂಧ್ರನಾಶಕ (ಅಜೋಕ್ಸಿಸ್ಟ್ರೋಬಿನ್ 18.2% + ಡೈಫೈನ್‌ಕೊನಾಜೋಲ್ 11.4%) ವನ್ನು ರೋಗ ಕಂಡ ತಕ್ಷಣ 1 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ 35 ಮತ್ತು 50 ದಿನಗಳಿಗೆ ಸಿಂಪರಣೆ ಮಾಡುವುದರಿಂದ ಗೋವಿನಜೋಳದ ಉರಿಜಿಂಗೆ ಮತ್ತು ತುಕ್ಕು ರೋಗವನ್ನು ಕಡಿಮೆ ಮಾಡಬಹುದು **ಹಾಗೂ** ಶೇ. 17.20 ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು.
22	**ಸಂರಕ್ಷಿತ ಸೌತೆಕಾಯಿ ಕೃಷಿಯಲ್ಲಿ ಜೈವಿಕ ರೋಗನಾಶಕಗಳನ್ನು ಬಳಸಿ ರೋಗಗಳ ನಿರ್ವಹಣೆ:** ಬೂಜು ತುಪ್ಪಟ ರೋಗ ಮತು ಬೂದಿ ರೋಗಗಳ ಲಕ್ಷಣ ಕಂಡ ತಕ್ಷಣ ಜೈವಿಕ ರೋಗನಾಶಕಗಳಾದ *ಸ್ಯೂಡೋಮೊನಾಸ್ ಪ್ಲೋರೋಸೆನ್ಸ್* (5 ಗ್ರಾಂ) ಜೊತೆಗೆ *ಬೆಸಿಲೆಸ್ ಸಬಟಿಲಿಸ್* (5 ಗ್ರಾಂ) ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು. ರೋಗದ ತೀವ್ರತೆಗನುಗುಣವಾಗಿ ಇದೇ ಸಿಂಪರಣೆಯನ್ನು ಪ್ರತಿ ಹದಿನೈದು ದಿನಗಳಿಗೊಮ್ಮೆ ಎರಡು ಸಲ ಪುನರಾವರ್ತಿಸಬೇಕು.
23	**ಮೆಣಸಿನಕಾಯಿ ಬೆಳೆಯಲ್ಲಿ ತುದಿ ಮತ್ತು ಹಣ್ಣು ಕೊಳೆ ಹಾಗೂ ಬೂದು ರೋಗಗಳ ಸಮಗ್ರ ಹತೋಟಿ:** ಮೆಣಸಿನಕಾಯಿ ಬೆಳೆಗೆ ತುದಿ ಸಾಯುವ / ಹಣ್ಣು ಕೊಳೆ ರೋಗ ಕಂಡು ಬಂದಾಗ 1 ಗ್ರಾಂ ಕಾರ್ಬೇನ್‌ಡೈಜಿಮ್ 50 ಡಬ್ಲೂ. ಪಿ ಅಥವಾ 0.75 ಮಿ. ಲಿ ಪ್ರೊಕ್ಲೊರಾಜ್ 5 ಇ. ಸಿ. ಅಥವಾ 2.5 ಗ್ರಾಂ ಪ್ರೋಪಿನೆಬ್ 70 ಡಬ್ಲೂ. ಪಿ. ಅಥವಾ 1 ಮಿ.ಲಿ. ಡೈಫೆನ್‌ಕೊನಜೊಲ್ 25 ಇ. ಸಿ. ಅಥವಾ 10 ಗ್ರಾಂ ಟೈಕೋಡರ್ಮಾ 1 ಕಿ. ಗ್ರಾಂ ಬೀಜಕ್ಕೆ ಬೀಜೋಪಚಾರ ಮಾಡಿ ಬಿತ್ತಬೇಕು. ನಾಟಿ ಮಾಡುವಾಗ ಸಸಿಗಳನ್ನು ಸುಡೋಮೋನಾಸ್ ಪ್ಲೊರೆಸೆನ್ಸ್ 10 ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ತಯಾರಾದ ದ್ರಾವಣದಲ್ಲಿ ಅದ್ದಬೇಕು. ನಂತರ ಸುಡೋಮೋನಾಸ್ ಪ್ಲೊರೆಸೆನ್ಸ್ ಪುಷ್ಟೀಕರಿಸಿದ (1 ಕಿ. ಗ್ರಾಂ ಸುಡೋಮೋನಾಸ್ + 100 ಕಿ. ಗ್ರಾಂ ಕೊಟ್ಟಿಗೆ ಗೊಬ್ಬರ) 100 ಕಿ. ಗ್ರಾಂ ಪ್ರತಿ ಎಕರೆಗೆ ಹಾಕಬೇಕು. ಬೂದು ಮತ್ತು ಹಣ್ಣು ಕೊಳೆ ರೋಗಗಳು ಕಂಡ ತಕ್ಷಣ ಸಂಯುಕ್ತ ಶಿಲೀಂಧ್ರನಾಶಕವಾದ (ಟೆಬುಕೊನಜೋಲ್ 50 % + ಟ್ರೈಪ್ಲಾಕ್ಸಿಸ್ಟ್ರೋಬಿನ್ 25 %) 0.5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ 15 ದಿವಸಗಳ ಅಂತರದಲ್ಲಿ ಸಿಂಪಡಿಸಬೇಕು.
24	**ವೀಳ್ಯೆದೆಲೆಯಲ್ಲಿ ಸೊರಗು ರೋಗದ ಸಮಗ್ರ ನಿರ್ವಹಣಾ ಕ್ರಮಗಳು :** ವೀಳ್ಯೆದೆಲೆ ಸೊರಗು ರೋಗ ನಿಯಂತ್ರಣಕ್ಕಾಗಿ ಬಳ್ಳಿಯನ್ನು ಇಳಿಸುವಾಗ ಶೇ.1 ಬೋರ್ಡೋ ದ್ರಾವಣವನ್ನು ಅಥವಾ ಶೇ.0.2 (ಕ್ಯಾಪ್ಟಾನ್ ಶೇ. 70 + ಹೆಕ್ಸಾಕೋನೊಜೊಲ್ ಶೇ. 5) ಸಂಯುಕ್ತ ಶಿಲೀಂದ್ರ ನಾಶಕದಿಂದ ಗುಣಿಗೆ ಸುರಿಯಬೇಕು. 15 ದಿನಗಳ ಅಂತರದಲ್ಲಿ 1 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರ ಮತ್ತು 250 ಗ್ರಾಂ ಬೇವಿನ ಹಿಂಡಿ ಮಿಶ್ರಿತ 12.5 ಗ್ರಾಂ ಟ್ರೈಕೋಡರ್ಮಾ ಜೈವಿಕ ಜೀವಿಯನ್ನು ಪ್ರತಿ ಗುಣಿಗೆ ಉಪಚರಿಸಬೇಕು. 15 ದಿನಗಳ ಅಂತರದಲ್ಲಿ ಶೇ. 0.25 (ಥೈರಾಮ್ 37.5 ಮತ್ತು ಕಾರ್ಬಾಕ್ಸಿನ್ 37.5) ರ ದ್ರಾವಣವನ್ನು ಪ್ರತಿ ಬಳ್ಳಿಗೆ ಸುರಿಯಬೇಕು. 15 ದಿನಗಳ ಅಂತರದಲ್ಲಿ 1 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರ ಮತ್ತು 250 ಗ್ರಾಂ ಬೇವಿನ ಹಿಂಡಿ ಮಿಶ್ರಿತ 12.5 ಗ್ರಾಂ ಟ್ರೈಕೋಡರ್ಮಾ ಜೈವಿಕ ಜೀವಿಯನ್ನು ಪ್ರತಿ ಬಳ್ಳಿಯ ಮಣ್ಣಿಗೆ ಉಪಚರಿಸಬೇಕು. 15 ದಿನಗಳ ಅಂತರದಲ್ಲಿ ಕಾರ್ಬೋಫ್ಯೂರಾನ್ 3 ಜಿ. ಹರಳನ್ನು ಪ್ರತಿ ಬಳ್ಳಿಗೆ 100 ಗ್ರಾಂ. ನಂತೆ ಉಪಚರಿಸಬೇಕು.
25	**ಬೆಳ್ಳುಳ್ಳಿ ಬೆಳೆಯಲ್ಲಿ ಕಳೆ ನಿಯಂತ್ರಣ:** ಬೆಳ್ಳುಳ್ಳಿಯ ಎಸಳುಗಳನ್ನು ಬಿತ್ತಿದ 30 ದಿವಸಗಳ ನಂತರ ಒಂದು ಕೈಕಳೆ ಮಾಡಿ ಮತ್ತೊಮ್ಮೆ ಬ್ಯುಟಾಕ್ಲೋರ್ 50 ಇ.ಸಿ. 1 ಕಿ.ಲೋ. ಎ.ಐ. ನ್ನು (2 ಮಿ.ಲೀ./ಲೀ) ಸಿಂಪಡಿಸುವುದರಿಂದ ಏಕದಳ ಹಾಗೂ ದ್ವಿದಳ ಕಳೆಗಳನ್ನು ನಿಯಂತ್ರಿಸಿ ಹೆಚ್ಚಿನ ಗಡ್ಡೆಗಳ ಇಳುವರಿಯನ್ನು ಪಡೆಯಬಹುದಾಗಿದೆ.
26	**ಸುಗಂಧರಾಜ ಹೂವಿನ ಬೇಸಾಯ ಪದ್ಧತಿ (ಅಳವಡಿಕೆ ತಂತ್ರಜ್ಞಾನ):** ಆಧುನಿಕ ಬೇಸಾಯ ಪದ್ಧತಿಯಡಿಯಲ್ಲಿ, ಏರು ಮಡಿ ಪದ್ಧತಿ (100 ಸೆಂ.ಮೀ. ಅಗಲ + 15 ಸೆಂ.ಮೀ. ಎತ್ತರ + 30 ಸೆಂ.ಮೀ. ಅಂತರದಲ್ಲಿ) ಮತ್ತು ಪ್ಲಾಸ್ಟಿಕ್ ಹಾಳೆಯ (30 ಮೈಕ್ರಾನ್ ಸಿಲ್ವರ ಮತ್ತು ಕಪ್ಪು ಬಣ್ಣದ) ಹೊದಿಕೆ ಯಡಿ 16 ಮಿ.ಮೀ. ವ್ಯಾಸದ ಎರಡು ಹನಿ ನೀರಾವರಿ ಕೊಳವೆಗಳನ್ನು (30 ಸೆಂ.ಮೀ. ಅಂತರದ ಹನಿಕೆಯ) ಹಾಯಿಸಿ 30 X 15 ಸೆಂ.ಮೀ. ಅಂತರದಲ್ಲಿ ಗಡ್ಡೆಗಳನ್ನು ನಾಟಿ ಮಾಡಿ ಹನಿ ನೀರಾವರಿ ಪದ್ಧತಿ ಮೂಲಕ ಶಿಪಾರಸ್ಸಿನ ಪ್ರಮಾಣದ ನೀರು ಮತ್ತು ರಸಗೊಬ್ಬರಗಳನ್ನು ಒದಗಿಸಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.
27	**ಸಂರಕ್ಷಿತ ಕೃಷಿಯಲ್ಲಿ ಕಾರ್ನೆಶನ್ ಹೂವಿನ ತಳಿಗಳ ಮೌಲ್ಯಮಾಪನ (ಅಳವಡಿಕೆ ತಂತ್ರಜ್ಞಾನ):** ಸಿಯಾನಾ (ಗುಲಾಬಿ), ವಿನ್ಸಿಡಾರ್ (ಕೆಂಪು) ಮತ್ತು ಮಲಗಾ (ಕೇಸರಿ) ತಳಿಗಳನ್ನು ಹಸಿರುಮನೆ ಬೇಸಾಯಕ್ಕೆ ಹೆಚ್ಚಿನ ಇಳುವರಿಗಾಗಿ ಶಿಪಾರಸ್ಸು ಮಾಡಲಾಗಿದೆ.
28	**ಸೊಯಾಅವರೆಯಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಪ್ರತಿ ಕೆ.ಜಿ. ಬೀಜಕ್ಕೆ 8 ಮಿ.ಲೀ. ರೈಝೋಬಿಯಂ ಎಸ್. ಬಿ. 120 ಮತ್ತು 4 ಮಿ.ಲೀ. ರಂಜಕ ಕರಗಿಸುವ ಜೈವಿಕ ಗೊಬ್ಬರದಂತೆ ಬೀಜೋಪಚಾರ ಮಾಡಿ ಬಿತ್ತುವುದು.
29	**ಕಡಲೆಯಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಪ್ರತಿ ಕೆ.ಜಿ. ಬೀಜಕ್ಕೆ 4 ಮಿ.ಲೀ. ರೈಝೋಬಿಯಂ ಜಿ ಆರ್ 2 ಮತ್ತು 4 ಮಿ.ಲೀ. ರಂಜಕ ಕರಗಿಸುವ ಜೈವಿಕ ಗೊಬ್ಬರದಂತೆ ಬೀಜೋಪಚಾರ ಮಾಡಿ ಬಿತ್ತುವುದು..
30	**ಹಿಂಗಾರಿ ಜೋಳದಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಪ್ರತಿ ಕೆ.ಜಿ. ಬೀಜಕ್ಕೆ 4 ಮಿ.ಲೀ. ಅಝೋಸ್ಪಿರಿಲಂ ಮತ್ತು 4 ಮಿ.ಲೀ. ರಂಜಕ ಕರಗಿಸುವ ಜೈವಿಕ ಗೊಬ್ಬರದಂತೆ ಬೀಜೋಪಚಾರ ಮಾಡಿ ಬಿತ್ತುವುದು..

31	**ಹಿಂಗಾರಿ ಜೋಳದಲ್ಲಿ ಮೈಕ್ರೊಬಿಯಲ್ ಮಿಶ್ರಣದ ಬಳಕೆ:** ಮೈಕ್ರೊಬಿಯಲ್ ಮಿಶ್ರಣ 2 (Consortium) ಪ್ರತಿ ಕೆ.ಜಿ. ಬೀಜಕ್ಕೆ 4 ಮಿ.ಲೀ ಮತ್ತು ಬಿತ್ತನೆಯಾದ 30 ದಿವಸಗಳ ನಂತರ ಶೇ. 4 ರ ಫಿಲ್ಲೊಸ್ಪಿಯರ್ ಮಿಶ್ರಣವನ್ನು ಬಿತ್ತನೆಯಾದ 30 ಮತ್ತು 45 ದಿನಗಳಂದು ಸಿಂಪರಣೆ ಮಾಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.
32	**ಗೋವಿನ ಜೋಳದಲ್ಲಿ(ಖುಷ್ಕಿ) ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಪ್ರತಿ ಹೆಕ್ಟೆರ್ ಪ್ರದೇಶಕ್ಕೆ ಶಿಫರಸ್ಸು ಮಾಡಿದ ರಸಗೊಬರ ಮತ್ತು 1.875 ಟನ್ ಬಯೋಫಾರ್ಟಿಫೈಡ್ ಎರೆಹುಳುಗೊಬ್ಬರ (ಪ್ರತಿ ಟನ್ ಎರೆಹುಳುಗೊಬ್ಬರಕ್ಕೆ 200 ಕೆ.ಜಿ. ಶಿಲಾರಂಜಕ (rock phosphate), 10 ಕೆ.ಜಿ. ಅಝುಟೋಬ್ಯಾಕ್ಟರ್, 10 ಕೆ.ಜಿ. ರಂಜಕ ಕರಗಿಸುವ ಜೈವಿಕಗೊಬ್ಬರ ಮತ್ತು 10 ಕೆ.ಜಿ. ಪೊಟ್ಯಾಷ ಕರಗಿಸುವ ಜೈವಿಕ ಗೊಬ್ಬರ ಬೆರೆಸಿ ತಯಾರಿಸಿರುವುದು) ವನ್ನು ಬಿತ್ತುವ ಸಾಲಿನಲ್ಲಿ ಹಾಕುವುದು.
33	**ಶೇಂಗಾ ಬೆಳೆಯಲ್ಲಿ ಅಣುಜೀವಿ ಗೊಬ್ಬರಗಳ ಬಳಕೆ:** ಶೇಂಗಾ ಬೆಳೆಯಲ್ಲಿ ತಲಾ 2.5 ಕೆ.ಜಿ. ಯಂತೆ ರೈಜೋಬಿಯಂ, ರಂಜಕ ಕರಗಿಸುವ ಅಣುಜೀವಿ ಹಾಗೂ ಪಿ.ಜಿ.ಪಿ.ಎ.1 (ಪಿ.ಎಸ್.ಎ. 5 + ಪಿ.ಎಸ್.ಎ.7 + ಏ.34) ಜೀವಾಣುವನ್ನು ಬೀಜೋಪಚಾರ ಮಾಡಿ ಬಿತ್ತುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.
34	**ಕಬ್ಬಿನಲ್ಲಿ ಉರಿ ಮಲ್ಲಿಗೆ ಕಸದ ಜೈವಿಕ ಹತೋಟಿ:** ಕಬ್ಬು ನಾಟಿ ಮಾಡುವ ಸಮಯದಲ್ಲಿ ಪ್ರತಿ ಎಕರೆಗೆ 6–8 ಕಿ.ಗ್ರಾಂ ಮೈಕೊರೈಜಾ ಜೈವಿಕಗೊಬ್ಬರವನ್ನು 200 ಕಿ. ಗ್ರಾಂ. ಕೊಟ್ಟಿಗೆ ಗೊಬ್ಬರದ ಜೊತೆಗೆ ಮಿಶ್ರಣ ಮಾಡಿ ನಾಟಿ ಮಾಡುವ ಸಾಲಿನಲ್ಲಿ ಬೆರಸಬೇಕು.
35	**ಕಡಲೆ (ಖುಷ್ಕಿ) ಯಲ್ಲಿ ಅಣುಜೀವಿ ಗೊಬ್ಬರದ ಬಳಕೆ:** ಪ್ರತಿ ಕಿ.ಗ್ರಾಂ. ಬೀಜಕ್ಕೆ 4 ಮಿ.ಲೀ. ಅಣುಜೀವಿ ಮಿಶ್ರಣವನ್ನು ಉಪಚರಿಸಿ ಬಿತ್ತನೆ ಮಾಡಿದ 30 ಮತ್ತು 45 ದಿನಗಳ ನಂತರ 1 ಲೀ. ನೀರಿನಲ್ಲಿ 40 ಮಿ.ಲೀ. ಅಣುಜೀವಿ ಮಿಶ್ರಣವನ್ನು ಸಿಂಪರಿಸಬೇಕು.
36	**ಸೋಯಾಅವರೆಯಲ್ಲಿ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಸೋಯಾಅವರೆಯಲ್ಲಿ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರಗಳನ್ನು ಹಾಕುವುದರ ಜೊತೆಗೆ ಬಿತ್ತನೆ ಮಾಡಿದ 15 ಮತ್ತು 30 ದಿನಗಳ ನಂತರ ಪ್ರತಿ ಎಕರೆಗೆ 100 ಲೀ. ನೀರಿನಲ್ಲಿ 1 ಲೀ. ಪಿ.ಪಿ.ಎಫ್.ಎಮ್. ಅಣುಜೀವಿ ಮಿಶ್ರಣವನ್ನು ಸಿಂಪರಿಸಬೇಕು.
37	**ನವಜಾತ ಕರುಗಳಲ್ಲಿ ಕಾಲಿನ ಫ್ಲೆಕ್ಸಾರ ಸ್ನಾಯುಗಳ ಸಂಕುಚಿತಗೊಳ್ಳುವಿಕೆಗೆ ಚಿಕಿತ್ಸೆ:** ಕಾಲಿನ ಫ್ಲೆಕ್ಸಾರ ಸ್ನಾಯುಗಳ ಸಂಕುಚಿತಗೊಳ್ಳುವಿಕೆಯಿಂದಾಗಿ ಅಸಹಜವಾಗಿ ಹಿಂದಕ್ಕೆ ಬಾಗಿದ ಫೆಟ್ಲಾಕ್ ಕೀಲುಗಳ ಸ್ಥಿತಿಯು, ನವಜಾತ ಕರುಗಳಲ್ಲಿ ಕಂಡುಬರುವ ಅಟ್ರೆಸಿಯಾ ಆನೈ ಮತ್ತು ಹೊಕ್ಕಳ ಹರ್ನಿಯಾ ನಂತರ ಹೆಚ್ಚು ಪ್ರಚಲಿತದಲ್ಲಿರುವ ಅಸಹಜ ಜನ್ಮಜಾತ ದೋಷವಾಗಿದೆ. ಇದು ಹೆಚ್ಚಾಗಿ ಮಿಶ್ರತಳಿಯ ಮರಿಗಳಲ್ಲಿ, ಗಂಡು ಕರುಗಳಲ್ಲಿ ಮತ್ತು ಮುಂದಿನ ಕಾಲುಗಳಲ್ಲಿ ಕಂಡುಬರುತ್ತದೆ. ನವಜಾತ ಕರುಗಳಲ್ಲಿ ಅಸಹಜವಾಗಿ ಹಿಂದಕ್ಕೆ ಬಾಗಿದ ಫೆಟ್ಲಾಕ್ ಕೀಲುಗಳ ಉಪಸ್ಥಿತಿಯ ಮೇಲೆ ಈ ದೋಷವನ್ನು ಗುರುತಿಸಬಹುದಾಗಿದೆ. ಈ ಅಸಹಜ ಸ್ಥಿತಿಗೆ ಕಾರಣಗಳೆಂದರೆ, ತಾಯಿಯ ಗರ್ಭಾಶಯದಲ್ಲಿ ದೊಡ್ಡದಾಗಿ ಬೆಳೆದ ಕರುವಿಗೆ ಹೆಚ್ಚು ಜಾಗವಿರದೆಯಿರುವುದು, ತಾಯಿಯಲ್ಲಿ ಮ್ಯಾಂಗನೀಸ್ ಲವಣದ ಕೊರತೆ ಹಾಗೂ ತನ್ನ ಆರಂಭಿಕ ಗರ್ಭಾವಸ್ಥೆಯ ದಿನಗಳಲ್ಲಿ (40–70 ದಿನಗಳು) ವಿಷಕಾರಿ ಅಂಶಗಳುಳ್ಳ ಸಸ್ಯಗಳನ್ನು ಹಸು ತಿನ್ನುವುದು. ಫೆಟ್ಲಾಕ್ ಕೀಲುಗಳು ಹಿಂದಕ್ಕೆ ಬಾಗಿದ ಪ್ರಮಾಣ ಲಘುವಾಗಿರುವುದರಿಂದ (ಕೊಳಗದ ಹಿಂಬಡ ನೆಲಕ್ಕೆ ತಾಗದೆ ಮುಂದಿನ ತುದಿಯ ಮೇಲೆ ಮಾತ್ರ ಭಾರ ಹಾಕುವುದು) ಹಿಡಿದು ಹೆಚ್ಚು ತೀವ್ರತೆಯವರೆಗೆ (ಫೆಟ್ಲಾಕ್ ಕೀಲುಗಳು 90^0 ಹಿಂದಕ್ಕೆ ಮಡಚಿ ಹಾಗೆಯೇ ನಡೆದಾಡುವುದು) ಕಾಣಬಹುದು. ಇದು ಜನ್ಮಜಾತ ದೋಷವಾಗಿದ್ದು ಮುಂದಿನ ಪೀಳಿಗೆಗೆ ಹರಡುವುದಿಲ್ಲವಾದ್ದರಿಂದ ಚಿಕಿತ್ಸೆ ಮಾಡಿಸಬೇಕು. ನುರಿತ ಪಶುವೈದ್ಯರು 'ಝ ಆಕಾರದಲ್ಲಿ' – ಟಿನಾಟೊಮಿ ಶಸ್ತ್ರಚಿಕಿತ್ಸೆ ಅಥವಾ 'ವಿ–ಆಕಾರದಲ್ಲಿ' ಒಂದಕ್ಕಿಂತ ಹೆಚ್ಚು ಭಾಗಶಃ ಟಿನಾಟೊಮಿ ಶಸ್ತ್ರಚಿಕಿತ್ಸೆ ಮೂಲಕ ಫ್ಲೆಕ್ಸಾರ ಸ್ನಾಯುಗಳನ್ನು ಹಿಗ್ಗಿಸಿ, ಕಾಲುಗಳನ್ನು ನೇರವಾಗಿಸಿ, ನಂತರ ಪ್ಲಾಸ್ಟರ್ ಕಟ್ಟನ್ನು 20 ದಿನಗಳವರೆಗೆ ಹಾಕುವುದರ ಮೂಲಕ ಗುಣಪಡಿಸುತ್ತಾರೆ. ಇಂತಹ ಕರುಗಳನ್ನು ಯಾವುದೇ ತೊಂದರೆ ಇಲ್ಲದೆ ರೈತರು ಹೊಲದ ಕೆಲಸಕಾರ್ಯಗಳಿಗಾಗಿ ಉಪಯೋಗಿಸಕೊಳ್ಳಬಹುದು.
38	**ಶ್ವಾನಗಳಲ್ಲಿ ಚಪ್ಪೆ ಕೀಲು ಸ್ಥಳಾಂತರಗೊಂಡಿದ್ದಕ್ಕೆ "ಟ್ರಾನ್ಸ್–ಆರ್ಟಿಕುಲಾರ ನೈಲಾನ್ ವೈರಿಂಗ್":** ಶ್ವಾನಗಳಲ್ಲಿ ಅಪಘಾತಗಳಿಂದ ಅಥವಾ ಎತ್ತರದಿಂದ ಬಿದ್ದಾಗ ಚಪ್ಪೆ ಕೀಲು ಸ್ಥಳಾಂತರಗೊಳ್ಳುವುದು ಸಾಮಾನ್ಯ. ಈ ದೋಷಕ್ಕೆ ಸೂಕ್ತ ಚಿಕಿತ್ಸೆಯೆಂದರೆ ಚಪ್ಪೆ ಕೀಲನ್ನು ಶಸ್ತ್ರಚಿಕಿತ್ಸೆ ಮುಖಾಂತರ ಸ್ಥಿರಗೊಳಿಸುವುದು. ಈ ಶಸ್ತ್ರಚಿಕಿತ್ಸೆಯಲ್ಲಿ ಫೀಮರ್ ಮತ್ತು ಅಸಿಟಾಬುಲಮ್ ಮೂಳೆಗಳಲ್ಲಿ ರಂಧ್ರವನ್ನು ಕೊರೆದು ಅದರ ಮೂಲಕ ಮೀನು ಹಿಡಿಯಲು ಬಳಸುವ ನೈಲಾನ್ ದಾರವನ್ನು ಮಾರ್ಪಡಿಸಿದ ಸ್ಪೀನಮನ್ ಪಿನ್ನಿಗೆ ಪೋಣಿಸಿ ಚಪ್ಪೆ ಕೀಲನ್ನು ಭದ್ರವಾಗಿ ಕಟ್ಟುವುದರಿಂದ ಚಪ್ಪೆ ಕೀಲಿಗೆ ಅತ್ಯುತ್ತಮ ಸ್ಥಿರತೆ ಹಾಗೂ ಹೆಚ್ಚಿನ ಭದ್ರತೆ ಸಿಗುತ್ತದೆ. ಈ ಶಸ್ತ್ರಚಿಕಿತ್ಸೆಯ ನಂತರ ಶ್ವಾನಗಳು ಅತೀ ಬೇಗನೆ ಮತ್ತು ಅತ್ಯುತ್ತಮವಾಗಿ ಕಾಲಿನ ಮೇಲೆ ದೇಹದ ಭಾರವನ್ನು ಹಾಕಿ ನಡೆದಾಡುತ್ತವೆ.
39	**ಮಣ್ಣು ಮತ್ತು ನೀರು ನಿರ್ವಹಣೆ:** ಕೃಷಿ ಹೊಂಡದಿಂದ ಪ್ರತಿ ವರ್ಷ ಶೇ 30–40 ರಷ್ಟು ನೀರು ಭಾಷ್ಪೀಭವನದಿಂದ ಆವಿರೂಪದಲ್ಲಿ ಪೋಲಾಗುತ್ತದೆ. "ಸ್ಟೆರೈಲ್ ಅಲ್ಕೋಹಾಲ" (Stearyle Alcohol)ನ್ನು ಹದಿನೈದು ದಿನಗಳಿಗೊಮ್ಮೆ ಕೃಷಿ ಹೊಂಡದ ಮೇಲ್ಮೈಯ ಪ್ರತಿ ಚದರು ಮೀಟರ್‌ಗೆ 2 ಎಮ್.ಎಲ್. ನಂತೆ ನೀರಿನಲ್ಲಿ ಸೇರಿಸಿ ನೀರಿನ ಮೇಲೆ ಸಿಂಪರಣೆ ಮಾಡುವುದರಿಂದ ಆವಿಯಾಗುವ ಪ್ರಮಾಣದಲ್ಲಿ ಶೇ. 40 ರಷ್ಟನ್ನು ಕಡಿಮೆ ಮಾಡಬಹುದು.
40	**ಯಾಂತ್ರೀಕೃತ ತೊಗರಿ ಬೇಸಾಯ:** ತೊಗರಿಬೆಳೆಯನ್ನು ಸಂಪೂರ್ಣ ಯಾಂತ್ರೀಕರಣ (ಭೂ ಸಿದ್ಧತೆಯನ್ನು ಟ್ರ್ಯಾಕ್ಟರಚಾಲಿತ ಎಮ್.ಬಿ.ಪ್ಲೋದಿಂದ, ಬಿತ್ತನೆಯನ್ನು ಸ್ವಯಂಚಾಲಿತ ಬೀಜ ಬಿತ್ತುವ ಮತ್ತು ಗೊಬ್ಬರ ಹಾಕುವ ಸಂಯುಕ್ತ ಕೂರಿಗೆಯಿಂದ, ಎಡೆ ಹೊಡೆಯುವುದು ಮತ್ತು ಮೇಲು ಗೊಬ್ಬರ ಹಾಕುವುದನ್ನು ಟ್ರ್ಯಾಕ್ಟರ ಚಾಲಿತ ಎಡೆ ಹೊಡಿಯುವ ಹಾಗೂ ಮೇಲು ಗೊಬ್ಬರ ಹಾಕುವ ಸಂಯುಕ್ತ ಉಪಕರಣದಿಂದ, ಕುಡಿಚಿವುಟುವ ಉಪಕರಣದಿಂದ ಕುಡಿಚಿವುಟುವುದನ್ನು, ಕೀಟನಾಶಕ ಸಿಂಪರಣೆಯನ್ನು ಟ್ರ್ಯಾಕ್ಟರಚಾಲಿತ ಕೀಟನಾಶಕ ಸಿಂಪಡಿಸುವ ಕೊಯ್ಲು ಮತ್ತು ರಾಶಿಮಾಡುವ ಸಂಯುಕ್ತ ಯಂತ್ರದಿಂದ ಕೊಯ್ಲು ಮತ್ತು ರಾಶಿ ಮಾಡುವುದನ್ನು) ಮಾಡುವುದರಿಂದ ಖರ್ಚನ್ನು ಕಡಿಮೆ ಮಾಡಿ ಶೇ. 20 ರಿಂದ 25 ರಷ್ಟು ನಿವ್ವಳ ಆದಾಯವನ್ನು ಹೆಚ್ಚಿಸಬಹುದು.

3.3 2018–19 ರಲ್ಲಿ ಅಂಗೀಕರಿಸಿದ ಹೊಸ ಕ್ಷೇತ್ರ ಪ್ರಯೋಗಗಳು

ಅ.ಸಂ.	ಬೆಳೆ ತಂತ್ರಜ್ಞಾನ
1	**ಮುಂಗಾರಿ ಜೋಳದ ಇಳುವರಿ ಮೇಲೆ ಸತು ಮತ್ತು ಕಬ್ಬಿಣ ಪೋಷಕಾಂಶಗಳಿಂದ ಪೌಷ್ಟೀಕರಿಸಿದ ಗೊಬ್ಬರದ ಪರಿಣಾಮ :** ಪ್ರತಿ ಹೆಕ್ಟೇರಿಗೆ 50 ಕೆ.ಜಿ. ಕೊಟ್ಟಿಗೆ ಗೊಬ್ಬರದ ಜೊತೆಗೆ 3.75 ಕೆ.ಜಿ. ಸತುವಿನ ಮತ್ತು 50 ಕೆ.ಜಿ. ಕೊಟ್ಟಿಗೆ ಗೊಬ್ಬರದ ಜೊತೆಗೆ 3.75 ಕೆ.ಜಿ. ಕಬ್ಬಿಣದ ಸಲ್ಫೇಟನ್ನು ಚೆನ್ನಾಗಿ ಮಿಶ್ರಣ ಮಾಡಿ ಶಿಫಾರಸ್ಸು ಮಾಡಿದ ರಸಗೊಬ್ಬರಗಳ ಜೊತೆ ಸೇರಿಸಿ ಬಿತ್ತುವಾಗ ಬೆಳೆಗೆ ಕೊಟ್ಟಿದ್ದರಿಂದ ಹೆಚ್ಚಿನ ಕಾಳಿನ ಇಳುವರಿ (45.05 ಕ್ವಿ./ಹೆ.) ಹಾಗೂ ನಿವ್ವಳ ಲಾಭ (ರೂ.25,881/ಹೆ.) ಬಂದಿರುತ್ತದೆ.
2	**ಮುಂಗಾರಿ ಎಳ್ಳಿನ ಇಳುವರಿ ಮೇಲೆ ಗಿಡಗಳ ಸಾಲಿನ ಅಂತರಗಳ ಪರಿಣಾಮ :** ಎಳ್ಳನ್ನು 60 X 7.5 ಸೆಂ. ಮೀ. ಅಂತರದಲ್ಲಿ ಬಿತ್ತನೆ ಮಾಡುವುದರಿಂದ ಹೆಚ್ಚಿನ ಕಾಳಿನ ಇಳುವರಿ (794 ಕೆ.ಜಿ./ಹೆ.) ಹಾಗೂ ನಿವ್ವಳ ಲಾಭವನ್ನು (ರೂ. 44,176/ಹೆ.) ಪಡೆಯಬಹುದು.
3	**ಕಬ್ಬಿನಲ್ಲಿ ಜೀಕಿನ ನಿರ್ವಹಣೆಗಾಗಿ ಹಾಲೋಸಲ್ಫುರಾನ್ ಮಿಥೈಲ 75 ಡಬ್ಲೂ.ಜಿ. ಪರಿಣಾಮ :** ಟ್ಯಾಂಕ ಮಿಶ್ರಣ, ಹಾಲೋಸಲ್ಫುರಾನ್ ಮಿಥೈಲ 75 ಡಬ್ಲೂ.ಜಿ. 67.5 ಗ್ರಾಂ./ಹೆ. + ಮೆಟ್ರಿಬ್ಯೂಜಿನ್ 70 % ಡಬ್ಲೂ.ಪಿ. 1.0 ಕೆ.ಜಿ./ಹೆ. ಉಪಚಾರದಲ್ಲಿ ಕಡಿಮೆ ಒಟ್ಟು ಕಳೆ ಸಾಂದ್ರತೆ ಮತ್ತು ಜೈವಿಕ ದ್ರವ್ಯರಾಶಿ ಕಂಡು ಬಂದಿರುತ್ತದೆ.
4	**ಮೆಣಸಿನಕಾಯಿ+ಈರುಳ್ಳಿ+ಹತ್ತಿ ಅಂತರ ಬೆಳೆ ಪದ್ಧತಿ:** ವಲಯ 3 ಹಾಗೂ 8 ರಲ್ಲಿ ಮೆಣಸಿನಕಾಯಿ+ಈರುಳ್ಳಿ+ಹತ್ತಿ ಬೆಳೆಗಳನ್ನು ಕ್ರಮವಾಗಿ 1:3:2 ಸಾಲು ಪದ್ಧತಿಯಲ್ಲಿ ಅಂತರ ಬೆಳೆಯಾಗಿ ಬೆಳೆಯುವುದರಿಂದ ಹೆಚ್ಚಿನ ಇಳುಚರಿ ಮತ್ತು ಲಾಭವನ್ನು ಪಡೆಯಬಹುದು.
5	**ವಲಯ 3 ಹಾಗೂ 8 ರಲ್ಲಿ ಮೆಣಸಿನಕಾಯಿ+ಈರುಳ್ಳಿ+ಹತ್ತಿ ಬೆಳೆ ಪದ್ಧತಿಯಲ್ಲಿ ಪೋಷಕಾಂಶ ನಿರ್ವಹಣೆ :** ಮೆಣಸಿನಕಾಯಿ+ಈರುಳ್ಳಿ+ಹತ್ತಿ ಬೆಳೆ ಪದ್ಧತಿಯಲ್ಲಿ ಸಮತೋಲನ ಪೋಷಕಾಂಶ ಬಳಕೆ: ಮೆಣಸಿನಕಾಯಿ (100–50–50)+ ಈರುಳ್ಳಿ (62.5–25–62.5)+ ಹತ್ತಿ (7.5–3.75–3.75) ಬೆಳೆಗಳಿಗೆ ಕ್ರಮವಾಗಿ ಸಾರಜನಕ, ರಂಜಕ ಮತ್ತು ಪೋಟ್ಯಾಷ ಗೊಬ್ಬರಗಳನ್ನು ಪ್ರಚಲಿತ ಪ್ರಮಾಣದ ಬದಲಿಗೆ ಕೊಡುವುದು ಅವಶ್ಯವಾಗಿದೆ.
6	**ಬಿ.ಟಿ. ಹತ್ತಿ ಮತ್ತು ವಟಾಣಿ ಅಂತರ ಬೆಳೆ ಪದ್ಧತಿ:** ಬಿ.ಟಿ. ಹತ್ತಿ ಮತ್ತು ವಟಾಣಿ ಬೆಳೆಗಳನ್ನು 1:2 ಸಾಲುಗಳ ಪ್ರಮಾಣದಲ್ಲಿ ಅಂತರ ಬೆಳೆಯಾಗಿ ಬಿತ್ತನೆ ಮಾಡುವುದರಿಂದ ವಲಯ 8 ರಲ್ಲಿ ಕೇವಲ ಬಿ.ಟಿ. ಹತ್ತಿಯನ್ನು ಬೆಳೆಯವುದಕ್ಕಿಂತ ಶೇ.3 ರ ರಷ್ಟು ಹೆಚ್ಚಿನ ಲಾಭ ಪಡೆಯಬಹುದು.
7	**ಕೃಷ್ಣಾ ಮೇಲ್ದಂಡೆ ಯೋಜನಾ ಕ್ಷೇತ್ರದಲ್ಲಿ ತೊಗರಿ ಬೆಳೆಯ (ಮುಂಗಾರಿ) ನಂತರ ಬೇಸಿಗೆ ಹಂಗಾಮಿನಲ್ಲಿ ಲಾಭದಾಯಕ ಸೂಕ್ತ ಬೆಳೆ ಪದ್ಧತಿ :** ಕೃಷ್ಣಾ ಮೇಲ್ದಂಡೆ ಯೋಜನಾ ಕ್ಷೇತ್ರದಲ್ಲಿ ಕೇವಲ ತೊಗರಿ ಬೆಳೆಯನ್ನು ಬೆಳೆಯುತ್ತಿದ್ದು (ಮುಂಗಾರಿ) ನಂತರ ಬೇಸಿಗೆ ಹಂಗಾಮಿಗೆ ಮಾರ್ಚ 31 ರ ವರೆಗೆ ಕಾಲುವೆ ನೀರಾವರಿ ಸೌಲಭ್ಯವಿದ್ದರೂ ಯಾವುದೇ ಬೆಳೆ ಬೆಳೆಯುತ್ತಿಲ್ಲ. ಆದ್ದರಿಂದ ತೊಗರಿ ಬೆಳೆಯ ನಂತರ ಬೇಸಿಗೆ ಹಂಗಾಮಿನಲ್ಲಿ ಅಲಸಂದಿ, ಉದ್ದು ಮತ್ತು ಎಳ್ಳು – ಬೆಳೆಗಳನ್ನು ಎಶಸ್ವಿಯಾಗಿ ಬೆಳೆದು ಹೆಚ್ಚಿನ ಇಳುವರಿ ಮತ್ತು ನಿವ್ವಳ ಲಾಭ ಪಡೆಯಲಾಗಿದೆ.
8	**ಮಳೆಯಾಶ್ರಿತ ಸೂರ್ಯಕಾಂತಿ ಬೆಳೆಯ ಉತ್ಪಾದಕತೆಯನ್ನು ವೃದ್ಧಿಸುವುದು:** ಮಳೆಯಾಶ್ರಿತದಲ್ಲಿ, ಚೌಕು ಮಡಿಗಳನ್ನು ಮಾಡಿ ಬಿತ್ತುವಾಗ ಶಿಫಾರಸ್ಸು ಮಾಡಿದ 50 % ರಸಗೊಬ್ಬರ + 50 % ಸಾವಯವ ಗೊಬ್ಬರ (ಕುರಿಗೊಬ್ಬರ) ಒದಗಿಸುವುದರಿಂದ ಸೂರ್ಯಕಾಂತಿ ಬೆಳೆಯಲ್ಲಿ ಹೆಚ್ಚಿನ ನಿವ್ವಳ ಲಾಭ ಪಡೆಯಬಹುದು.
9	**ತುದಿ ಮುರಿಯುವಿಕೆಗೆ ಬೀಡಿ ತಂಬಾಕಿನೆ ತಳಿಗಳ ಪ್ರತಿಕ್ರಿಯೆ :** ನಿಪ್ಪಾಣಿಯಿಂದ ಬಿಡುಗಡೆಯಾದ ಎಲ್ಲ ತಳಿಗಳು ಗುಜರಾತಿನಿಂದ ಬಿಡುಗಡೆಯಾದ ತಳಿಗಳಿಗಿಂತ ಹೆಚ್ಚಿಗೆ ಇಳುವರಿಯನ್ನು ನೀಡಿವೆ. ಭಾಗ್ಯಶ್ರೀ ತಳಿಯು ಉಳಿದ ತಳಿಗಳಿಗೆ ಹೋಲಿಸಿದರೆ, ಹೆಚ್ಚಿನ ಇಳುವರಿ (1539 ಕಿ.ಗ್ರಾಂ./ಹೆ.) ಕೊಟ್ಟಿದೆ. ಆದಾಗ್ಯೂ, ಭಾಗ್ಯಶ್ರೀ ತಳಿಯು ನಿಪ್ಪಾಣಿಯಿಂದ ಸದ್ಯದಲ್ಲಿ ಬಿಡುಗಡೆಯಾದ ಎನ್.ಬಿ.ಡಿ.–209 (1482 ಕಿ.ಗ್ರಾಂ./ಹೆ.) ಕ್ಕೆ ಸಮನಾಗಿದೆ. ಆದರೆ, ಯಾವುದೇ ತಳಿಯು ತುದಿ ಮುರಿಯುವಿಕೆಗೆ ಗಮನಾರ್ಹವಾದ ಪ್ರತಿಕ್ರಿಯೆಯನ್ನು ತೋರಿಸಿಲ್ಲ.
10	**ನೀರಾವರಿ ಗೋದಿಯಲ್ಲಿ ಸಾರಜನಕ ಮತ್ತು ಪೋಟ್ಯಾಷ್‌ನ್ನು ಕಂತುಗಳಲ್ಲಿ ಒದಗಿಸುವುದು:** ಶಿಫಾರಿತ ರಸಗೊಬ್ಬರದ ಸಾರಜನಕ ಮತ್ತು ಪೊಟ್ಯಾಷ್ ರಸಗೊಬ್ಬರಗಳನ್ನು ಮೂರು ಸಮಾನವಾದ ಕಂತುಗಳಲ್ಲಿ (ಬಿತ್ತಿದ ದಿನ, 20–25, 50–55 ದಿನಗಳ ಅಂತರದಲ್ಲಿ) ಕೊಡುವುದರಿಂದ ಹೆಚ್ಚಿನ ಇಳುವರಿ (40.54 ಕ್ವಿ./ಹೆ.) ಪಡೆಯಬಹುದು.
11	**ಶೇಂಗಾ ಬೇಸಾಯದಲ್ಲಿ ಕಪ್ಪು ಮಣ್ಣಿನಲ್ಲಿನ ಸ್ಥಿರೀಕೃತ ರಂಜಕದ ಬಳಕೆಯ ಆರ್ಥಿಕತೆ :** ಶೇಂಗಾ ಬೆಳೆಗೆ ಕೊಟ್ಟಿಗೆ ಗೊಬ್ಬರದ ಜೊತೆಗೆ ಡಿ.ಜಿ.ಆರ್.ಸಿ.–1 ಸೂಕ್ಷ್ಮಾಣುಜೀವಿ ಬಳಕೆಯಿಂದ ಶೇಕಡಾ 50 ರಷ್ಟು ಶಿಫಾರಿತ ರಂಜಕ ರಸಗೊಬ್ಬರದ ಉಳಿತಾಯ ಮಾಡಬಹುದು.
12	**ಕರಾವಳಿ ಪ್ರದೇಶದ ಉಸುಕು ಮಣ್ಣಿನಲ್ಲಿ ಬೇಸಿಗೆ ಶೇಂಗಾ ಬೆಳೆಯಲ್ಲಿ ಪೋಷಕಾಂಶ ನಿರ್ವಹಣೆ:** 125 % ಶಿಫಾರಿತ ರಸಗೊಬ್ಬರವನ್ನು (ಸಾರಜನಕ: 22.5, ರಂಜಕ : 88.75 ಪೊಟ್ಯಾಷ್ : 31.25 ಕೆ.ಜಿ./ಹೆ.) ಒದಗಿಸುವುದರಿಂದ ಕರಾವಳಿ ಪ್ರದೇಶದ ಉಸುಕು ಮಣ್ಣಿನಲ್ಲಿ ಶೇ. 13 ರಷ್ಟು ಅಧಿಕ ಶೇಂಗಾ ಇಳುವರಿಯನ್ನು ಪಡೆಯಬಹುದು.
13	**ಸುಣ್ಣಯುಕ್ತ ಕಪ್ಪು ಮಣ್ಣಿನಲ್ಲಿ ಬೆಳೆದ ಕಡಲೆ ಬೆಳೆಯಲ್ಲಿ ಕಬ್ಬಿಣ ಮತ್ತು ಸತುವಿನ ಪೋಷಕಾಂಶಗಳ ನಿರ್ವಹಣೆಯ ಪರಿಣಾಮ:** ಕಡಲೆ ಬೆಳೆಗೆ ಪ್ರತಿ ಹೆಕ್ಟೇರಿಗೆ 10 ಕಿ.ಗ್ರಾಂ ಸತುವಿನ ಸಲ್ಫೇಟ್ ಮತ್ತು 10 ಕಿ.ಗ್ರಾಂ ಕಬ್ಬಿಣದ ಸಲ್ಫೇಟನ್ನು ಶಿಫಾರಸ್ಸು ಮಾಡಿದ ಗೊಬ್ಬರದೊಡನೆ ಬೆರೆಸಿ ಹಾಕಿದಾಗ ಹೆಚ್ಚು (1631 ಕಿ.ಗ್ರಾಂ/ಹೆ.) ಇಳುವರಿ ಬಂದಿದೆ.
14	**ಸುಣ್ಣಯುಕ್ತ ಕಪ್ಪು ಮಣ್ಣಿನಲ್ಲಿ ಬೆಳೆದ ಹಿಂಗಾರು ಜೋಳದಲ್ಲಿ ಕಬ್ಬಿಣ ಮತ್ತು ಸತುವಿನ ಪೋಷಕಾಂಶಗಳ ನಿರ್ವಹಣೆಯ ಪರಿಣಾಮ :** ಹಿಂಗಾರಿ ಜೋಳಕ್ಕೆ ಪ್ರತಿ ಹೆಕ್ಟೇರಿಗೆ 10 ಕಿ.ಗ್ರಾಂ ಸತುವಿನ ಸಲ್ಫೇಟ್ ಮತ್ತು 10 ಕಿ.ಗ್ರಾಂ ಕಬ್ಬಿಣದ ಸಲ್ಫೇಟನ್ನು ಶಿಫಾರಸ್ಸು ಮಾಡಿದ ಗೊಬ್ಬರದೊಡನೆ ಬೆರೆಸಿ ಹಾಕಿದಾಗ ಹೆಚ್ಚು (1955 ಕಿ.ಗ್ರಾಂ/ಹೆ) ಇಳುವರಿ ಬಂದಿದೆ.
15	**ನೀರಾವರಿ ಆಶ್ರಯದಲ್ಲಿ ಕಪ್ಪು ಮಣ್ಣಿನಲ್ಲಿ ಬೆಳೆದ ಬಿಟಿ ಹತ್ತಿಯ ಮೇಲೆ ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪರಿಣಾಮ:** ಶೇಕಡಾ 100 ರಷ್ಟು ಶಿಫಾರಿತ ರಸಗೊಬ್ಬರ + 10 ಟನ್/ಹೆ. ಕೊಟ್ಟಿಗೆ ಗೊಬ್ಬರ + 2 ಸಾಲು ಬಿಟಿ ಹತ್ತಿಯ ಮಧ್ಯೆ 1 ಸಾಲು ಸೆಣಬನ್ನು ಬೆಳೆಯುವುದು + 50 ಕಿ.ಗ್ರಾಂ ಎರೆಹುಳು ಗೊಬ್ಬರದ ಜೊತೆಗೆ ಮಿಶ್ರಣ ಮಾಡಿದ 25 ಕಿ.ಗ್ರಾಂ ಕಬ್ಬಿಣ ಮತ್ತು ಸತುವಿನ ಸಲ್ಫೇಟ್ + 5 ಕಿ.ಗ್ರಾಂ ಬೊರ್ಯಾಕ್ಸ್ – ನ್ನು ಬಿತ್ತನೆ ಸಮಯದಲ್ಲಿ ಮಣ್ಣಿಗೆ ಸೇರಿಸುವುದು.

3.4 ಸಂಶೋಧನಾ ಮುಖ್ಯಾಂಶಗಳು

3.4.1 ಅನುವಂಶಿಕತೆ ಮತ್ತು ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ

ಮುಂಗಾರು ಜೋಳ: ಮುಂಗಾರು ಹಂಗಾಮಿನ ಜೋಳದ ತಳಿ, ಎಸ್.ಪಿ.ವಿ. – 2423 ಯನ್ನು 2018–19 ರಲ್ಲಿ ಭಾರತದ ವಲಯ **II** (ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ) ಗೆ ಶಿಪಾರಸು ಮಾಡಲಾಗಿದೆ.

ಹಿಂಗಾರು ಜೋಳ: ಹಿಂಗಾರಿ ಜೋಳದ ತಳಿಯಾದ ಎಸ್.ಪಿ.ವಿ.–2468 ಅಖಿಲ ಭಾರತ ಮಟ್ಟದಲ್ಲಿ ಮೂರು ವರ್ಷಗಳ ಸರಾಸರಿ ಪ್ರತಿ ಹೆಕ್ಟೇರಿಗೆ 3334 ಕಿ.ಗ್ರಾಂ. ಇಳುವರಿ ಕೊಟ್ಟಿದ್ದು, ಸಿ.ಎಸ್.ವಿ.– 29 ಆರ್ ತಳಿಗಿಂತ ಪ್ರತಿಶತ 7.9 ಹೆಚ್ಚು ಉತ್ಪಾದಕತೆ ಹೊಂದಿದೆ.

ಸಜ್ಜೆ: ಸಜ್ಜೆಯಲ್ಲಿ ICRISAT ಸಹಯೋಗದೊಂದಿಗೆ ಹೆಚ್ಚಿನ ಕಬ್ಬಿಣ ಮತ್ತು ಜಿಂಕ್ ಅಂಶ ಹೊಂದಿದ ಹತ್ತು ತಳಿಗಳನ್ನು ಮತ್ತು 120 ತಳಿಗಳನ್ನು ಬ್ಲಾಸ್ಟ ರೋಗ ನಿರೋಧಕತೆಗೆ ಪರೀಕ್ಷಿಸಿಸಲಾಯಿತು.

ಗೋದಿ

ವಿವಿಧ ಕ್ಷೇತ್ರಗಳಲ್ಲಿಯ ತಾಕುಗಳಲ್ಲಿ ಯುಎಎಸ್‌ಬಿಡಬ್ಲೂ–11421 ತಳಿ (ಚಪಾತಿ ತಳಿ), ಯುಎಎಸ್‌ಬಿಡಬ್ಲೂ–30508 ನಿರ್ಭಂಧಿತ ನೀರಾವರಿ ಪ್ರಯೋಗದಲ್ಲಿ ಯುಎಎಸ್‌ಬಿಡಬ್ಲೂ–31001 ನೀರಾವರಿ ಪ್ರಯೋಗದಲ್ಲಿ ಚೆಕ್ ತಳಿಗಳಿಗಿಂತ ಉತ್ತಮವಾಗಿದೆ. ಮಧ್ಯವಲಯಕ್ಕೆ ಸಮಯೋಚಿತ, ನಿರ್ಬಂಧಿತ ನೀರಾವರಿ ಪದ್ಧತಿಯಲ್ಲಿ ಬಿತ್ತಲು ಯುಎಎಸ್ 466 ಎಂಬ ರವೆ ತಳಿಯನ್ನು ಗುರುತಿಸಲಾಗಿದೆ.

ಸೋಯಾಬಿನ್: ಈಶಾನ್ಯ ಬೆಟ್ಟ ವಲಯ ಪ್ರದೇಶಕ್ಕೆ ಡಿ.ಎಸ್.ಬಿ. 32 (ಡಿ.ಎಸ್.ಬಿ. 23 x ಜೆ.ಎಸ್. 95–60) ತಳಿಯ ಶಿಫಾರಸ್ಸು: ಈ ತಳಿಯು ತುಕ್ಕುರೋಗ ನಿರೋಧಕ ಶಕ್ತಿ, ಅಧಿಕ ಇಳುವರಿ, ಬೇಗನೆ ಮಾಗುವ ಮತ್ತು ಬಹು ಕೀಟ ಮತ್ತು ರೋಗಗಳ ನಿರೋಧಕತೆ ಶಕ್ತಿಯನ್ನು ಹೊಂದಿರುವುದರಿಂದ ಭಾರತದ ಈಶಾನ್ಯ ಬೆಟ್ಟ ವಲಯಕ್ಕೆ ಶಿಫಾರಸು ಮಾಡಲಾಗಿದೆ.

ಎಳ್ಳು: ಡಿ.ಎಸ್.–5 ತಳಿಯನ್ನು 2018–19 ರಲ್ಲಿ ಪಿ.ಪಿ.ವಿ. ಮತ್ತು ಎಫ್.ಆರ್.ಎ. ಅಡಿ ಅಸ್ತಿತ್ವದಲ್ಲಿರುವ ತಳಿಯೆಂದು ನೊಂದಾಯಿಸಲಾಗಿದೆ (ನೊಂ. ಸಂ. 182).

ಗುರೆಳ್ಳು: ಬಿ.ಎಮ್.ಡಿ–69 ಮತ್ತು ಡಿ.ಎನ್.ಎಸ್–14 (577ಕೆ.ಜಿ/ಹೆ.) ತಳಿಗಳು ಡಿ.ಎನ್.ಎಸ್–4 (481ಕೆ.ಜಿ/ಹೆ.) ಮತ್ತು ಆರ್.ಸಿ.ಆರ್.–18 (545ಕೆ.ಜಿ/ಹೆ.) ತಳಿಗಳಿಗಿಂತ ಹೆಚ್ಚು ಇಳುವರಿ ಪಡೆಯಲಾಗಿದೆ.

ಅಗಸೆ: F_5 ಸಂತತಿಯ ಎರಡು ತಳಿಗಳಾದ DLV-30 ಹಾಗೂ DLV-31 ಸುಮಾರು 72 ಸೆಂ.ಮೀ ಎತ್ತರ ಹೊಂದಿದ್ದು, ಅಗಸೆ ನೂಲನ್ನು ತಯಾರಿಸಲು ಸೂಕ್ತವಾದ ತಳಿಗಳಾಗಿವೆ. DLV–1 ತಳಿಯನ್ನು ಉಪಯೋಗಿಸಿ, ಅಖಿಲ ಭಾರತ ಸಮನ್ವಯ ಯೋಜನೆ (Clothing and Textiles) ಅಡಿಯಲ್ಲಿ ನೂಲನ್ನು ತಯಾರಿಸಲಾಗುತ್ತಿದೆ. ಬಹುಸ್ಥಾನಿಕ ಪ್ರಯೋಗಗಳಲ್ಲಿ DLV–7 ತಳಿಯು ವಲಯ III ರಲ್ಲಿ 1110 ಕೆಜಿ/ಹೆ ಇಳುವರಿಯನ್ನು ನೀಡಿರುತ್ತದೆ, ವಲಯ 8 ರಲ್ಲಿ DLV–6 ತಳಿಯು ಅಧಿಕ ಇಳುವರಿ (549 ಕೆಜಿ/ಹೆ) ಯನ್ನು ನೀಡಿರುತ್ತದೆ.

ಹೆಸರು ಬೆಳೆ: ಡಿಜಿಜಿವಿ–61 ಮತ್ತು ಡಿಜಿಜಿವಿ–65 ತಳಿಗಳು ಹೆಚ್ಚಿನ ಇಳುವರಿಯನ್ನು ನೀಡಿದ್ದು, ಬೂದುರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿರುತ್ತದೆ.

ಉದ್ದು: ಸುಮಾರು ಹತ್ತು ಸಂಯೋಜನೆಗೊಳಿಸಿದ ಉದ್ದಿನ ತಳಿಗಳಲ್ಲಿ ಮ್ಯೂಟಂಟ್ ಸಂಖ್ಯೆ 10 ಹಾಗೂ 29, 1028 ಕೆ.ಜಿ/ಹೆ ಹಾಗೂ 1098 ಕೆಜಿ/ಹೆ ಇಳುವರಿ ನೀಡುವ ಸಾಮರ್ಥ್ಯವನ್ನು ಹೊಂದಿರುತ್ತವೆ.

ಚನ್ನಂಗಿ: ಚನ್ನಂಗಿ ಬೆಳೆಯಲ್ಲಿ DLL-1 (WBL-77 X IPL-316) ಸಂಯೋಜಿತ ತಳಿಯು 828 ಕೆಜಿ/ಹೆ ಇಳುವರಿಯನ್ನು ನೀಡಿರುತ್ತದೆ. (ಕಿತ್ತೂರ ಲೋಕಲ್ ತಳಿಯ ಇಳುವರಿ 758 ಕೆಜಿ/ಹೆ ಆಗಿರುತ್ತದೆ).

3.4.2 ಸಸ್ಯ ಶರೀರಕ್ರಿಯಾ ಶಾಸ್ತ್ರ

ಶೇಂಗಾದಲ್ಲಿ ಬಳ್ಳಾರಿ ಜಾಲಿಯ ಕಾಯಿಗಳ ರಸದಿಂದ ಸುಪ್ತಾವಸ್ಥೆಯನ್ನು ಉಂಟು ಮಾಡುವುದು: ಶೇಕಡಾ 15 ರಷ್ಟು ಬಳ್ಳಾರಿಜಾಲಿ ಕಾಯಿಯ ರಸವನ್ನು ಶೇಂಗಾ ಬೆಳೆಯ (ಟಿ.ಎಮ್.ವಿ.–2) ಮೇಲೆ ಎರಡು ಸಲ ಸಿಂಪರಣೆ ಮಾಡುವುದರಿಂದ ಶೇಂಗಾ ಕಾಳುಗಳಲ್ಲಿ ಸುಪ್ತಾವಸ್ಥೆ ಬರುವಂತೆ ಮಾಡಿ ಶೇಂಗಾ ಕೊಯ್ಲಿನ ಸಮಯದಲ್ಲಿ ಮಳೆಯಿಂದ ಹಾನಿಯಾಗುವ ಸಾಧ್ಯತೆಯನ್ನು ಕಡಿಮೆ ಮಾಡುವುದಲ್ಲದೆ ಇಳುವರಿಯೂ ಹೆಚ್ಚಿಗೆ ಆಗಿರುವುದು ಕಂಡುಬಂದಿದೆ.

ಬಿಟಿ ಹೈಬ್ರಿಡ್ ಹತ್ತಿಯ ಇಳುವರಿ ಮತ್ತು ನಾರಿನ ಅಭಿವೃದ್ಧಿ ಮೇಲೆ ಬದಲಾದ ವಾತಾವರಣದ ಪರಿಣಾಮ: ಜೂನ್ ಮೊದಲನೆಯ ವಾರ ಬಿತ್ತನೆ ಮಾಡಿದ್ದ ಬಿಟಿ ಹೈಬ್ರಿಡ್ ಬೆಳೆಗಳಾದ First Class ಮತ್ತು ATM-BG II ಇಳುವರಿಯು ಜೂನ್ ಎರಡನೇ ಹಾಗು ಮೂರನೇ ವಾರ ಬಿತ್ತನೆ

ಮಾಡಲಾಗಿರುವುದಕ್ಕಿಂತ ಉತ್ತಮವಾಗಿ ನೀಡಿರುತ್ತದೆ. ಆದ ಕಾರಣ ಹತ್ತಿ ಬೆಳೆಯನ್ನು ಮುಂಗಾರಿನ ಮೊದಲನೆಯ ವಾರದಲ್ಲಿ ಬಿತ್ತನೆ ಮಾಡುವುದರಿಂದ ಅಧಿಕ ಇಳುವರಿಯನ್ನು ಪಡೆಯಬಹುದು.

ಹೆಚ್ಚಿನ ಪೋಷಕಾಂಶಗಳ ಪೋಷಣೆಯಡಿಯಲ್ಲಿ ಹತ್ತಿ ತಳಿ ಎ.ಆರ್.ಬಿ.ಹೆಚ್.813 ಯ ಬೆಳವಣಿಗೆ ನಿಯಂತ್ರಣ: ಈ ಪ್ರಯೋಗದಲ್ಲಿ ಹಿರ್ಸುಟಮ್ ಹತ್ತಿ ತಳಿ ಎ.ಆರ್.ಬಿ.ಹೆಚ್. 813 ಗೆ ಶೇ. 150 ರಷ್ಟು ಶಿಫಾರಿತ ಪೋಷಕಾಂಶ ಹಾಕಿದ ತಾಕಿನಲ್ಲಿ ಬಿತ್ತನೆ ಮಾಡಿದ 60 ನೇ ಹಾಗು 75 ನೇ ದಿನದ ನಂತರ ಮೆಪಿಕ್ವಾಟ್ ಕ್ಲೋರೈಡ್–20 ಗ್ರಾಂ ಸಿಂಪಡಿಸಿರುವ ತಾಕಿನಲ್ಲಿ ಇಳುವರಿಯು ಇನ್ನಿತರ ಸಿಂಪರಣೆಗಿಂತಲೂ ಉತ್ತಮವಾಗಿ ಬಂದಿರುತ್ತದೆ.

ಹತ್ತಿ ಬೆಳೆಯಲ್ಲಿ ವಿವಿಧ 'ಆಸ್ಮೋ ಪ್ರೊಟೆಕ್ಟಂಟ್ಸ್' ನಿಂದ ತೇವಾಂಶದ ಕೊರತೆಯ ನಿರ್ವಹಣೆ: ಈ ಪ್ರಯೋಗದಲ್ಲಿ ಹಿರ್ಸುಟಮ್ ಹತ್ತಿ ತಳಿ (ಸಹನ) ಯಲ್ಲಿ ಪೊಟಾಶಿಯಂ ನೈಟ್ರೇಟ್ (2%) ಸಿಂಪಡಿಸಿರುವ ತೇವಾಂಶ ಕೊರತೆ ತಾಕಿನಲ್ಲಿ ಇತರೆ ಸಿಂಪರಣೆಗಿಂತಲೂ ಉತ್ತಮ ಇಳುವರಿಯು ಬಂದಿರುತ್ತದೆ.

ಪಾಕ್ಲೋಬ್ಯುಟ್ರಾಝೋಲ್–40% ಎಸ್.ಸಿ. ಸಿಂಪರಣೆಯಿಂದ ಶೇಂಗಾ ಬೆಳೆಯ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಮತ್ತು ಸರದಿಯಲ್ಲಿ ಮುಂದಿನ ಬೆಳೆಯ ಮೇಲಾಗುವ ಪರಿಣಾಮ: ಈ ಪ್ರಯೋಗದಲ್ಲಿ ಶೇಂಗಾ ಬೆಳೆಗೆ ಸಿಂಪಡಿಸಿದ ಪಾಕ್ಲೋಬ್ಯುಟ್ರಾಝೋಲ್–40% ಎಸ್.ಸಿ.ಯು ಬೆಳೆಯ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಯಾವುದೇ ಪರಿಣಾಮ ಬೀರದೆ ಇರುವುದು ಕಂಡು ಬಂದಿದೆ.

3.4.3 ಜೈವಿಕ ತಂತ್ರಜ್ಞಾನ

ಸವಳು ಸಹಿಷ್ಣು ವಂಶವಾಹಿನಿ ಮತ್ತು ವೈರಸ್ ಮೇಲೆ ಕೀಟ ಹಾಗೂ ರೋಗ ನಿಯಂತ್ರಣದಲ್ಲಿ ಬೆಳೆಗಳಲ್ಲಿ (ಸೋಯಾಅವರೆ, ಶೇಂಗಾ, ಕಡಲೆ, ಮಡಿಕೆ, ತೊಗರಿ ಮತ್ತು ಹತ್ತಿ) ಜೈವಿಕ ಮತ್ತು ಅಜೈವಿಕ ಸ್ಟ್ರೆಸ್/ಒತ್ತಡ ನಿರ್ವಹಣೆ ಕುರಿತ ಸಂಶೋಧನೆಗಳನ್ನು ನಡೆಸಲಾಗಿದೆ. ಈ ಪ್ರಯೋಗಗಳಲ್ಲಿ ಅಧಿಕ ಇಳುವರಿ ಮತ್ತು ಜೈವಿಕ ಮತ್ತು ಅಜೈವಿಕ ಸ್ಟ್ರೆಸ್/ಒತ್ತಡ ನಿರ್ವಹಣೆ ವಂಶವಾಹಿನಿಗಳನ್ನು ಗುರುತಿಸಲಾಯಿತು.

3.4.4 ಸಸ್ಯ ಜೀವರಸಾಯನ ಶಾಸ್ತ್ರ

ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕೇಂದ್ರ ಶಿರಸಿ ಮೂಲಕ ಜೈವಿಕ ಇಂಧನ ಜನಪ್ರಿಯ ಗೊಳಿಸುವ ಯೋಜನೆ: ಉತ್ತರ ಕನ್ನಡ ಜಿಲ್ಲೆಯ ಜೈವಿಕ ಇಂಧನ ಉತ್ಪಾದನೆಯಲ್ಲಿ ಬಳಸಬಹುದಾದ ವಿವಿಧ ಬಗೆಯ ಎಣ್ಣೆ ಬೀಜಗಳ ಕುರಿತ ಸಂಶೋಧನೆಯಡಿಯಲ್ಲಿ ಉಪ್ಪಾಗೆ ಮರದ ಬೀಜಗಳ ಕುರಿತ ಸಂಶೋಧನೆಯನ್ನು ಮಾಡಲಾಗಿದ್ದು ಆ ಬೀಜದಲ್ಲಿನ ಎಣ್ಣೆಯ ಪ್ರಮಾಣ ಮತ್ತು ಎಣ್ಣೆಯಲ್ಲಿನ ರಸಾಯನಗಳ ವಿಶ್ಲೇಷಣೆಯನ್ನು ಮಾಡಲಾಯಿತು. ವಿವಿಧ ಸ್ಥಳಗಳಿಂದ ಸಂಗ್ರಹ ಮಾಡಿದ್ದ ಬೀಜಗಳ ಸರಾಸರಿ ಎಣ್ಣೆಯ ಪ್ರಮಾಣ 21.07–27.70 % ರಷ್ಟಿದ್ದು ಅತಿ ಹೆಚ್ಚಿನ ಎಣ್ಣೆ ಅಂಶ ತಾರೆಹಳ್ಳಿ ಪ್ರದೇಶದಲ್ಲಿ (27.70 %) ಕಂಡುಬಂದಿದ್ದು; ಸುನ್ಡಳ್ಳಿ, ಬೆಣಗಾವ್, ವಾಜಿಗದ್ದೆ, ಮಟ್ಟಿಘಟ್ಟ ಹಾಗು ದೇವನಹಳ್ಳಿಯಲ್ಲಿ ಅನುಕ್ರಮವಾಗಿ 25.39, 25.23, 23.64, 21.53 ಮತ್ತು 21.07 % ಎಣ್ಣೆಯ ಪ್ರಮಾಣ ಕಂಡುಬಂದಿದೆ.

3.4.5 ಬೇಸಾಯ ಶಾಸ್ತ್ರ

ಮುಂಗಾರಿ ಜೋಳದ ಇಳುವರಿ ಮೇಲೆ ಸತು ಮತ್ತು ಕಬ್ಬಿಣ ಪೋಷಕಾಂಶಗಳಿಂದ ಪೌಷ್ಟೀಕರಿಸಿದ ಗೊಬ್ಬರದ ಪರಿಣಾಮ: ಪ್ರತಿ ಹೆಕ್ಟೇರಿಗೆ 50 ಕೆ.ಜಿ. ಕೊಟ್ಟಿಗೆ ಗೊಬ್ಬರದ ಜೊತೆಗೆ 3.75 ಕೆ.ಜಿ. ಸತುವಿನ ಮತ್ತು 50 ಕೆ.ಜಿ. ಕೊಟ್ಟಿಗೆ ಗೊಬ್ಬರದ ಜೊತೆಗೆ 3.75 ಕೆ.ಜಿ. ಕಬ್ಬಿಣದ ಸಲ್ಫೇಟನ್ನು ಚೆನ್ನಾಗಿ ಮಿಶ್ರಣ ಮಾಡಿ ಶಿಫಾರಸ್ಸು ಮಾಡಿದ ರಸಗೊಬ್ಬರಗಳ ಜೊತೆ ಸೇರಿಸಿ ಬಿತ್ತುವಾಗ ಬೆಳೆಗೆ ಕೊಟ್ಟಿದ್ದರಿಂದ ಹೆಚ್ಚಿನ ಕಾಳಿನ ಇಳುವರಿ (45.05 ಕ್ವಿ./ಹೆ.) ಹಾಗೂ ನಿವ್ವಳ ಲಾಭವನ್ನು (ರೂ.25,881/ಹೆ.) ಕೊಟ್ಟಿದೆ.

ಎಳ್ಳು ಬೆಳೆ ಇಳುವರಿ ಮೇಲೆ ಗಿಡಗಳ ಸಾಲಿನ ಅಂತರಗಳ ಪರಿಣಾಮ: ಎಳ್ಳನ್ನು 60 x 7.5 ಸೆಂ. ಮೀ. ಅಂತರದಲ್ಲಿ ಬಿತ್ತನೆ ಮಾಡುವುದು, ಶಿಫಾರಸ್ಸು ಮಾಡಿದ 30 x 15 ಸೆಂ. ಮೀ. ಗಿಂತಲೂ ಹೆಚ್ಚಿನ ಕಾಳಿನ ಇಳುವರಿ (794 ಕೆ.ಜಿ./ಹೆ.) ಹಾಗೂ ನಿವ್ವಳ ಲಾಭವನ್ನು (ರೂ. 44,176/ಹೆ.) ಕೊಟ್ಟಿದೆ.

ನೀರಾವರಿ ಗೋದಿಯಲ್ಲಿ ಸಾರಜನಕ ಮತ್ತು ಪೋಟ್ಯಾಷ್‌ನ್ನು ಮೂರು ಕಂತುಗಳಲ್ಲಿ ಕೊಡುವುದರಿಂದ ಇಳುವರಿ ಹೆಚ್ಚಿಸಬಹುದು: ಶೇಕಡಾ 100ರ ಶಿಫಾರಿತ ರಸಗೊಬ್ಬರದ ಸಾರಜನಕ ಮತ್ತು ಪೋಟ್ಯಾಷ್ ರಸಗೊಬ್ಬರಗಳನ್ನು ಮೂರು ಸಮಾನವಾದ ಕಂತುಗಳಲ್ಲಿ (ಬಿತ್ತಿದ ದಿನ, 20–25, 50–55 ದಿನಗಳ ಅಂತರದಲ್ಲಿ) ಕೊಡುವುದರಿಂದ ಹೆಚ್ಚಿನ ಕಾಳಿನ ಹಾಗೂ ಮೇವಿನ ಇಳುವರಿ ಮತ್ತು ಹೆಚ್ಚಿನ ಲಾಭವು ಕಂಡು ಬಂದಿರುತ್ತದೆ.

ಶೇಂಗಾ ಬೇಸಾಯದಲ್ಲಿ ಕಪ್ಪು ಮಣ್ಣಿನಲ್ಲಿನ ಸ್ಥಿರೀಕೃತ ರಂಜಕದ ಬಳಕೆಯ ಆರ್ಥಿಕತೆ: ಶೇಂಗಾ ಬೆಳೆ ಬೇಸಾಯದಲ್ಲಿ ಕೊಟ್ಟಿಗೆ ಗೊಬ್ಬರದ ಜೊತೆಗೆ ಡಿಜಿಆರ್‌ಸಿ–1 ಸೂಕ್ಷ್ಮಾಣುಜೀವಿ ಬಳಕೆಯಿಂದ ಶೇಕಡಾ 50 ರಷ್ಟು ಶಿಫಾರಿತ ರಂಜಕ ರಸಗೊಬ್ಬರದ ಉಳಿತಾಯ ಮಾಡಬಹುದು.

ಕರಾವಳಿ ಪ್ರದೇಶದ ಉಸುಕು ಮಣ್ಣಿನಲ್ಲಿ ಬೇಸಿಗೆ ಶೇಂಗಾ ಬೆಳೆಯಲ್ಲಿ ಪೋಷಕಾಂಶ ನಿರ್ವಹಣೆ: 125% ಶಿಫಾರಿತ ರಸಗೊಬ್ಬರವನ್ನು ಒದಗಿಸುವುದರಿಂದ ಅಧಿಕ ಶೇಂಗಾ ಇಳುವರಿಯನ್ನು ಪಡೆಯಬಹುದು.

ಕಬ್ಬಿನಲ್ಲಿ ಜೇಕಿನ ನಿರ್ವಹಣೆಗಾಗಿ ಹಾಲೋಸಲ್ಫುರಾನ್ ಮಿಥೈಲ 75 ಡಬ್ಲೂ.ಜಿ. ಪರಿಣಾಮ: ಕಬ್ಬು–ಹೆಸರು ಬೆಳೆ ಪದ್ಧತಿಯಲ್ಲಿ ಹಾಲೋಸಲ್ಫುರಾನ್ ಮಿಥೈಲ 75 ಡಬ್ಲೂ.ಜಿ. 67.5 ಗ್ರಾಂ. + ಮೆಟ್ರಿಬ್ಯೂಜಿನ್ 70 % ಡಬ್ಲೂ.ಪಿ. 1.0 ಕೆ.ಜಿ./ಹೆ. (ಟ್ಯಾಂಕ್ ಮಿಶ್ರಣ) ಬಳಸಿದಾಗ ಪರಿಣಾಮಕಾರಿಯಾಗಿ ಕಳೆ (ಅಗಲ ಎಲೆ, ಹುಲ್ಲು ಮತ್ತು ಜೇಕು) ನಿರ್ವಹಣೆ ಆಗಿದೆ.

ವಿವಿಧ ತುದಿ ಮುರಿಯುವಿಕೆ ಹಂತಗಳಿಗೆ ನಿಪ್ಪಾಣಿಯಿಂದ ಬಿಡುಗಡೆಯಾದ ಎಲ್ಲ ಬೀಡಿ ತಂಬಾಕಿನ ತಳಿಗಳ ಪ್ರತಿಕ್ರಿಯೆ: ಎಲ್ಲ ಬೀಡಿ ತಂಬಾಕಿನ ತಳಿಗಳು ಗಮನಾರ್ಹವಾದ ಪ್ರತಿಕ್ರಿಯೆಯನ್ನು ತೋರಿಸಿವೆ. ನಿಪ್ಪಾಣಿಯಿಂದ ಬಿಡುಗಡೆ ಆದಂತ ಎಲ್ಲ ತಳಿಗಳು, ಗುಜರಾತನಿಂದ ಬಿಡುಗಡೆಯಾದ ತಳಿಗಳಿಗಿಂತ ಹೆಚ್ಚಿಗೆ ಇಳುವರಿಯನ್ನು ನೀಡಿವೆ. ಭಾಗ್ಯಶ್ರೀ ತಳಿಯು ಉಳಿದ ತಳಿಗಳಿಗೆ ಹೋಲಿಸಿದರೆ, ಹೆಚ್ಚಿಗೆ ಇಳುವರಿ (1539 ಕಿ.ಗ್ರಾಂ/ಹೆ.) ಕೊಟ್ಟಿದೆ.

ಕೃಷ್ಣಾ ಮೇಲ್ದಂಡೆ ಕ್ಷೇತ್ರದಲ್ಲಿ ತೊಗರೆ ಬೆಳೆಯ(ಮುಂಗಾರಿಯಲ್ಲಿ) ನಂತರ ಬೇಸಿಗೆ ಹಂಗಾಮಿನಲ್ಲಿ ಲಾಭದಾಯಕ ಸೂಕ್ತ ಬೆಳೆ ಪದ್ಧತಿಯನ್ನು ನಿರ್ಧರಿಸುವದು: ತೊಗರೆ ಬೆಳೆಯ ನಂತರ ಬೇಸಿಗೆ ಹಂಗಾಮಿಗೆ ಅಲಸಂಧಿ, ಉದ್ದು ಮತ್ತು ಎಳ್ಳು ಬೆಳೆಯುವ್ಯದರಿಂದ ಹೆಚ್ಚಿನ ಇಳುವರಿ ಮತ್ತು ನಿವ್ವಳ ಲಾಭ ಪಡೆಯಲಾಗಿದೆ.

ವಿವಿಧ ಬೆಳೆ (ಅಲಸಂದಿ/ಹೆಸರು–ಕುಸುಬೆ) ಪದ್ಧತಿಗಳಲ್ಲಿ ಸಾವಯವ, ರಾಸಾಯನಿಕ ಮತ್ತು ಸಮಗ್ರ ಉತ್ಪಾದನಾ ವ್ಯವಸ್ಥೆಗಳ ಮೌಲ್ಯಮಾಪನ: ಯಾವ್ಯದೇ ಪೋಷಕಾಂಶ ನಿರ್ವಹಣೆ ಗಮನಿಸದೇ ಇದ್ದಾಗ, ಶೇಂಗಾ+ಹತ್ತಿ (2:1) ಅಂತರ ಬೆಳೆ ಪದ್ಧತಿ (ರೂ. 74,725 ಪ್ರತಿ ಹೆ ನಿವ್ವಳ ಲಾಭ) ಇಡೀ ತೊಗರಿ (ರೂ. 48,966ಪ್ರತಿ ಹೆ. ನಿವ್ವಳ ಲಾಭ), ಗೋವಿನಜೋಳ–ಕಡಲೆಬೆಳೆ ಪದ್ಧತಿಯಲ್ಲಿ (ರೂ. 59,608 ಪ್ರತಿ ಹೆ. ನಿವ್ವಳ ಲಾಭ), ಹೆಸರು–ಜೋಳ ಬೆಳೆ ಪದ್ಧತಿಯಲ್ಲಿ (ರೂ. 46,251 ಪ್ರತಿ ಹೆ. ನಿವ್ವಳ ಲಾಭ) ಮತ್ತು ಅಲಸಂದಿ/ಹೆಸರು–ಕುಸುಬೆ ಬೆಳೆ ಪದ್ಧತಿಯಲ್ಲಿ (ರೂ. 12,070 ಪ್ರತಿ ಹೆ. ನಿವ್ವಳ ಲಾಭ) ಪಡೆಯಲಾಗಿದೆ.

ವಾಣಿಜ್ಯ ಅಂತರ ಬೆಳೆಯಲ್ಲಿ ಹನಿ ನೀರಾವರಿ ಪದ್ದತಿಯ ನೀರಿನ ಪ್ರಮಾಣದ ಮೌಲ್ಯಮಾಪನ: ಈರುಳ್ಳಿ + ಮೆಣಸಿನಕಾಯಿ (45–120–45 ಸೆಂ.ಮೀ. ಏರು ಮಡಿ ಪದ್ಧತಿ) ಅಂತರ ಬೆಳೆಯನ್ನು ಹನಿ ನೀರಾವರಿ ಪದ್ಧತಿಯಲ್ಲಿ (0.8 ET_0) ಬೆಳೆಯುವುದರಿಂದ ಪ್ರತಿ ಹೆಕ್ಟೇರಿಗೆ 25.84 ಕ್ವಿ./ಹೆ. ಮೆಣಸಿನಕಾಯಿ ಸಮನಾದ ಇಳುವರಿ ಬಂದಿರುತ್ತದೆ. ಈ ಪದ್ಧತಿಯಿಂದ 3.03 ಲಕ್ಷ ಆದಾಯ ಬರುತ್ತದೆ. ಈರುಳ್ಳಿ ಬೆಲೆಯು ವ್ಯತ್ಯಾಸ ಇರುವುದರಿಂದ ಎಲ್ಲಾ ವರ್ಷಗಳಲ್ಲಿ ಈ ನಿರೀಕ್ಷಿತ ಆದಾಯ ಬರುವುದು ಕಷ್ಟಕರ. ಇಂತಹ ಸಂದರ್ಭದಲ್ಲಿ ಮೆಣಸಿನ ಬೆಳೆ ಜೊತೆಗೆ ಶೇಂಗಾ ಅಥವಾ ಅರಶಿಣ ಬೆಳೆಯು ಉತ್ತಮ ಲಾಭದಾಯಕ (ಅನುಕ್ರಮವಾಗಿ ರೂ. 1.95 ಲಕ್ಷ/ಹೆ. ಮತ್ತು ರೂ. 1.93 ಲಕ್ಷ/ಹೆ. ಆದಾಯವಿರುತ್ತದೆ).

ತೊಗರಿ ಆಧಾರಿತ ಅಂತರ ಬೆಳೆ ಪದ್ಧತಿಯಲ್ಲಿ ಹನಿ ನೀರಾವರಿ ಪದ್ದತಿಯ ನೀರಿನ ಪ್ರಮಾಣದ ಮೌಲ್ಯಮಾಪನ: ಸಾಲು ಕೃಷಿ ಬೆಳೆಗಳಲ್ಲಿ ಹನಿ ನೀರಾವರಿ ಪದ್ದತಿಯನ್ನು ತೊಗರಿ ಆಧಾರಿತ ಅಂತರ ಬೆಳೆ ಪದ್ದತಿಯಲ್ಲಿ (ತೊಗರಿ+ಹೆಸರು, ತೊಗರಿ+ಉದ್ದು) ಯಶಸ್ವಿಯಾಗಿ ಅಳವಡಿಸಿಕೊಳ್ಳಬಹುದು. ಈ ಹನಿ ನೀರಾವರಿ ಪದ್ದತಿಯಿಂದ ತೊಗರಿ ಆಧಾರಿತ ಅಂತರ ಬೆಳೆ ಪದ್ಧತಿಯಲ್ಲಿ (ಶೇ. 70 ಆವಿ ಆಗುವಿಕೆ) ಹನಿ ನೀರಾವರಿ ಮುಖಾಂತರ (ಇನ್ ಲೈನ್, ಡ್ರಿಪ್ಪರ್–ಒಳ ಸೇರಿಸುವ ಹನಿ ಸಾಧಕ ಹಾಗೂ ಎರಡು ಲ್ಯಾಟರಲ್‌ಗಳ ನಡುವಿನ ಅಂತರ 40 ಸೆಂ.ಮೀ.) ವಾರಕ್ಕೆ ಒಮ್ಮೆ ಹವಾಗುಣ ಆಧರಿಸಿ ನೀರು ಕೊಟ್ಟಾಗ ತೊಗರಿಯ ಸಮನಾದ ಇಳುವರಿ 33.95 ಕ್ವಿ./ಹೆ. ಬಂದಿರುತ್ತದೆ.

3.4.6 ಕೃಷಿ ಸೂಕ್ಷ್ಮಾಣುಜೀವಶಾಸ್ತ್ರ

ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಗೋವಿನ ಜೋಳದ ಬೇರುವಲಯದ ಮಣ್ಣಿನ ಬ್ಯಾಕ್ಟೀರಿಯಾಗಳ ವೈವಿಧ್ಯತೆಯ ಮೇಲಾಗುವ ಪರಿಣಾಮ: ಗೋವಿನ ಜೋಳದ ಬೆಳೆಯ ಮಣ್ಣಿನಲ್ಲಿ ಬ್ಯಾಕ್ಟೀರಿಯಾಗಳ ವೈವಿಧ್ಯತೆಯನ್ನು ಪರಿಶೀಲಿಸಲಾಗಿದ್ದು ಪ್ರೋಟಿಯೋ ಬ್ಯಾಕ್ಟೀರಿಯಾ ಪ್ರಭೇದವು ಮತ್ತು ಆರ್ಕಿಯಾ ಪ್ರಭೇದವು ಕೊಟ್ಟಿಗೆ ಗೊಬ್ಬರ ಮತ್ತು ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಬಳಸಿದ ಪ್ರಯೋಗದ ತಾಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿದೆ ಹಾಗೂ ಅಸಿಟೊ ಬ್ಯಾಕ್ಟೀರಿಯಾ ಕೂಡ ಕಂಡುಬಂದಿದೆ. ಆಕ್ಟಿನೋ ಬ್ಯಾಕ್ಟೀರಿಯಾ ಪ್ರಭೇದವು ಎಲ್ಲಾ ಮಣ್ಣಿನ ಪ್ರಯೋಗಗಳಲ್ಲಿ ಕಂಡು ಬಂದಿದೆ.

ನೀರಿನ ಅಭಾವ/ಕೊರತೆಗೆ ಸಹಿಷ್ಣುತೆಯುಳ್ಳ ಆಕ್ಟಿನೋಮೈಸಿಟ್ಸಗಳ ಸಂಶೋಧನೆ: ನೀರಿನ ಅಭಾವವಿರುವ ಪ್ರದೇಶದಿಂದ ಸಸ್ಯಗಳ ಜೊತೆ ಪ್ರತಿಕ್ರಿಯಿಸುವ 13 ಆಕ್ಟಿನೋಮೈಸಿಟ್ಸಗಳನ್ನು ಶೋಧಿಸಲಾಯಿತು. ಪ್ರೇರಿತ ಸಸ್ಯಾಂತರಗತ ಜೀವರಾಸಾಯನಿಕ ಮತ್ತು ಜೀವಕಣಗಳ ಅಧ್ಯಯನಕ್ಕೆ, ಶೋಧಿಸಿದ 13 ಆಕ್ಟಿನೋಮೈಸಿಟ್ಸಗಳಿಂದ 3 ಸಮರ್ಥ ಐಸೋಲೇಟ್ಸಗಳಾದ AUUB290, AUDT 545 ಮತ್ತು AUDT 559 ಪ್ರಯೋಗಕ್ಕೆ ಬಳಸಿಕೊಳ್ಳಲಾಯಿತು. ನೀರಿನ ಅಭಾವವಿರುವ AUDT 45 ದ ಜೊತೆಯಲ್ಲಿ ಬೆಳೆದ ಶೇಂಗಾ ಬೆಳೆಯಲ್ಲಿ ಶೇಂಗಾ ಕಾಂಡದ ಉದ್ದ, ಬೇರಿನ ಉದ್ದ, ಒಣ ಕಾಂಡದ ತೂಕ ಮತ್ತು ಒಣ ಬೇರಿನ ತೂಕವು ಕ್ರಮವಾಗಿ 7.04%, 38.36% ಮತ್ತು 35.71% ಗಳಷ್ಟು ಉತ್ತಮವಾಗಿದೆ.

ಬೇರುವಲಯ ತಂತ್ರಜ್ಞಾನ ಸಂಶೋಧನೆ: ಭತ್ತದ ತೌಡಿನ ಬೂದಿ, ಕೈಟೋಸಾನ, ಬೈಯೊಚಾರ ಮತ್ತು ಅಣುಜೀವಿಗಳ ಸಮೂಹದಿಂದ (AUUB 78 + AUUB 209 + AUDT 518 + AUDT 502) ಉಪಚರಿಸಿದ ಗೋದಿಯು ಅತ್ಯುತಮ ಬೆಳವಣಿಗೆಯನ್ನು ತೋರಿಸಿದ್ದು ಕ್ರಮವಾಗಿ 63.58 %, 61.91 % ಮತ್ತು 59.88 % ರಷ್ಟು ಹೆಚ್ಚುವರಿ ಇಳುವರಿಯು ಮಧ್ಯಮ ಸವಳು, ಸವಳು ಮತ್ತು ಸವಳಲ್ಲದ ಪರಿಸರದಲ್ಲಿ ಬಂದಿರುತ್ತದೆ.

16S rDNA ಸಿಕ್ವೆನ್ಸಿಂಗ್ ಮುಖಾಂತರ ಸಮರ್ಥ ಸಾರಜನಕ ಸ್ಥಿರೀಕರಿಸುವ ಬ್ಯಾಕ್ಟೀರಿಯಾ ಗುರುತಿಸುವುದು: 16S rDNA ಸಿಕ್ವೆನ್ಸಿಂಗ್ ಮುಖಾಂತರ ಸಮರ್ಥ ಸಾರಜನಕ ಸ್ಥಿರಿಕರಿಸುವ ಬ್ಯಾಕ್ಟೀರಿಯಾ ಎಂದು ಗುರುತಿಸಿರುವ ಕ್ಲೆಬಸಿಯೆಲ್ಲಾ ಆಕ್ಸಿಟೋಕಾವು nifH ವಂಶವಾಹಿಯನ್ನು ಹೊಂದಿದ್ದು ಅಸಿಟಿಲಿನ್ ರಿಡಕ್ಷನ್ ಗುಣಪರೀಕ್ಷೆಯ ಮೂಲಕ ವಿಶ್ಲೇಷಣೆಗೆ ಒಳಪಡಿಸಿದಾಗ ಗರಿಷ್ಟ ಪ್ರಮಾಣದ ನೈಟ್ರೋಜಿನೇಸ್ ಕಿಣ್ವದ ಚಟುವಟಿಕೆಯನ್ನು ತೋರಿಸಿರುತ್ತದೆ.

ಆಕ್ಟಿನೋಮೈಸಿಟಿಸ್‌ನಿಂದ ಉತ್ಪಾದಿಸಿದ ಸೆಲ್ಯುಲೇಸ್ ಕಿಣ್ವಗಳಿಂದ ಕೃಷಿ ಉಳಿಕೆಗಳ/ ಕೃಷಿ ತ್ಯಾಜ್ಯಗಳ ಜೈವಿಕ ಪರಿವರ್ತನೆ: ಲಿಗ್ನಿನ್ ಅಂಶವನ್ನು ಹೊರತೆಗೆದ ಕಾಫಿ ಹೊಟ್ಟಿಗೆ ಆಕ್ಟಿನೋಮೈಸಿಟಿಸ್ A23 ನ್ನು ಹಾಕಿದ 10ನೇ ದಿನಕ್ಕೆ ಗರಿಷ್ಟ ಪ್ರಮಾಣದ ಸೆಲ್ಯುಲೇಸ್ ಕಿಣ್ವದ ಚಟುವಟಿಕೆ ಮತ್ತು ಅಪಕರ್ಷಕ ಸಕ್ಕರೆ ಕಂಡುಬಂದಿರುತ್ತದೆ. ಆಕ್ಟಿನೋಮೈಸಿಟಿಸ A23 ನ್ನು ಅಡಿಕೆ ಮತ್ತು ಕಬ್ಬಿನ ಸಿಪ್ಪೆಯಲ್ಲಿ ಬೆಳೆದಾಗ 5ನೇ ದಿನಕ್ಕೆ ಗರಿಷ್ಟ ಪ್ರಮಾಣದ ಸೆಲ್ಯುಲೇಸ್ ಕಿಣ್ವದ ಚಟುವಟಿಕೆ ಕಂಡುಬಂದಿರುತ್ತದೆ.

ಜೈವಿಕ ಅನಿಲ ಉತ್ಪಾದನೆ ವೃದ್ಧಿಸಲು ನ್ಯಾನೋ ಕಣಗಳ ಹಸಿರು ಸಂಶ್ಲೇಷಣೆ : 1 ಕಿ.ಗ್ರಾಂ. ಸೆಗಣಿ + 850 ಮಿ.ಲೀ. ನೀರು + 50 ಮಿ.ಲೀ. (25 ಮಿ.ಲೀ. $NiCl_2$ + 25 ಮಿ.ಲೀ. ಎಲೆಯ ಅಂಶ) + 100 ಮಿ.ಲೀ. ರಾಡಿ ಉಪಚಾರ ಮಾಡಿದಾಗ ಅತ್ಯಧಿಕ ಜೈವಿಕ ಅನಿಲ 6480 ಮಿ.ಲೀ. ಉತ್ಪಾದನೆಯಾಗಿದೆ.

ಗೋವಿನಜೋಳದಲ್ಲಿ ನವಪೀಳಿಗೆಯ ಕಳೆನಾಶಕಗಳ ಅಧ್ಯಯನ: ಟೊಪ್ರಾಮಿಜೊನ + ಅಟ್ರಾಝಿನ್ (25.2 + 500 ಗ್ರಾಂ/ಹೆ.) EPoE *fb* IC + ಬಿತ್ತನೆ ಮಾಡಿದ 30 ದಿನಗಳ ನಂತರ ಕೈಗಳಿಂದ ಕಳೆ ಕೀಳುವಿಕೆ (HW) ಉಪಚಾರ ಮಾಡಿದ ಪ್ರಯೋಗ ತಾಕುಗಳಲ್ಲಿ ಗರಿಷ್ಟ ಇಳುವರಿ (5490 ಕೆ.ಜಿ./ಹ) ದಾಖಲಾಗಿದೆ. ಕನಿಷ್ಠ ಇಳುವರಿ (1660 ಕೆ.ಜಿ./ಹ.) ಕಳೆನಾಶಕ ಉಪಚರಿಸದ ತಾಕುಗಳಲ್ಲಿ ಕಂಡುಬಂದಿದೆ.

ಹಸಿರೆಲೆ ತರಕಾರಿಗಳಲ್ಲಿ ಇ–ಕೊಲೈ ಇರುವಿಕೆಯ ಅಧ್ಯಯನ: ಕೊಲೈ ಇರುವಿಕೆಯನ್ನು ಅಧ್ಯಯನ ಮಾಡಲು ಹಸಿರೆಲೆ ತರಕಾರಿಗಳಲ್ಲಿ ದುಂಡಾಣುವಾದ ಇ–ಕೊಲೈನ ಪ್ರಮಾಣವನ್ನು ಪರೀಕ್ಷೆ ಮಾಡಲು ಕೊತ್ತಂಬರಿ, ಮೆಂತ್ಯೆ ಮತ್ತು ಸಬ್ಬಸಿಗೆಯನ್ನು ಧಾರವಾಡದದ APMC ಮಾರುಕಟ್ಟೆ ಮತ್ತು ರಸ್ತೆಬದಿಯ ತರಕಾರಿ ಮಾರಾಟಗಾರರಿಂದ ಸಂಗ್ರಹಿಸಿದಾಗ ಇ–ಕೊಲೈ, ಇ–ಕೊಲೈ+ಎರೋಜಿನ್ಸ ಹಾಗೂ ಕೇವಲ ಇ–ಎರೋಜಿನ್ಸ ಗಳ ಪ್ರಮಾಣಗಳನ್ನು ಕ್ರಮವಾಗಿ ಮೂರು ಮಾದರಿಯಲ್ಲಿಯೂ ಗಮನಿಸಲಾಯಿತು.

3.4.7 ಕೃಷಿ ಹವಾಮಾನ ವಿಭಾಗ

ಬಾಹ್ಯಾಕಾಶ, ಕೃಷಿ ಹವಾಮಾನ ಮತ್ತು ಭೂ ಆಧಾರಿತ ಅವಲೋಕನಗಳನ್ನು ಬಳಸಿ ಬೆಳೆಗಳ ಮುನ್ಸೂಚನೆ : ಈ ಯೋಜನೆಯಲ್ಲಿ ಉತ್ತರ ಕರ್ನಾಟಕದ (ಬೀದರ, ಕಲಬುರ್ಗಿ, ರಾಯಚೂರ, ಯಾದಗಿರಿ, ವಿಜಯಪುರ, ಬಳ್ಳಾರಿ, ಕೊಪ್ಪಳ, ಗದಗ, ಧಾರವಾಡ, ಬೆಳಗಾವಿ ಮತ್ತು ಹಾವೇರಿ) ಜಿಲ್ಲೆಯ ಬೆಳೆಗಳಿಗೆ ಸಂಖ್ಯಾಶಾಸ್ತ್ರದ ಅಧ್ಯಯನದಿಂದ ಬೆಳೆ ಇಳುವರಿಯ ಮುನ್ಸೂಚನೆಯನ್ನು ನೀಡಲಾಗಿದೆ. DSSAT ಸಾಫ್ಟವೇರ ಮಾದರಿಯನ್ನು ಬಳಸುವ ಮೂಲಕ ಕುಂದಗೋಳ ತಾಲೂಕ ಸಂಶಿ ಗ್ರಾಮದಲ್ಲಿ ಹಿಂಗಾರಿ ಜೋಳದ ಬೆಳೆಗೆ ಬೆಳೆ ಇಳುವರಿ ಮುನ್ಸೂಚನೆಯನ್ನು ಅನುಕರಿಸಲಾಯಿತು. ಈ ಮಾದರಿಯಲ್ಲಿ ಸಿಮ್ಯೂಲೇಟೆಡ್ ಇಳುವರಿಯು ಶೇ. 5 ಕ್ಕಿಂತ ಕಡಿಮೆ ದೋಷದೊಂದಿಗೆ ನಿಜವಾದ ಇಳುವರಿಗೆ ಬಹಳ ಹತ್ತಿರದಲ್ಲಿದೆ ಎಂದು ಸೂಚಿಸುತ್ತದೆ.

ಸೋಯಾಅವರೆ ಬೆಳೆಯಲ್ಲಿ ಹವಾಮಾನ ಸಂಬಂಧಿತ ಅಧ್ಯಯನ: ಡಿ.ಎಸ್.ಬಿ–21 ತಳಿಯು ಇತರೆ ತಳಿಗಳಿಗಿಂತ ಹೆಚ್ಚಿನ ಇಳುವರಿ ಪಡೆಯಲಾಗಿದೆ. ಜೂನ 13ನೇ ತಾರಿಕು ಬಿತ್ತಿದ ಡಿ.ಎಸ್.ಬಿ–21 ತಳಿಯಿಂದ ಹೆಚ್ಚಿನ ಇಳುವರಿಯನ್ನು (23.0 ಕ್ವಿ./ಹೆ.) ಪಡೆಯಲಾಗಿದ್ದು. ಜುಲೈ ಮೊದಲನೆ ಪಾಕ್ಷಿಕದ ಬಿತ್ತನೆಯಿಂದ ಕಡಿಮೆ ಇಳುವರಿಯನ್ನು ಪಡೆಯಲಾಗಿದೆ(20.65 ಕ್ವಿ./ಹೆ.) ಮತ್ತು ಬಿತ್ತನೆ ತಡವಾದಂತೆ ಇಳುವರಿಯಲ್ಲಿ ಇಳಿಕೆ ಕಂಡು ಬಂದಿದೆ. ಮೊದಲನೆ ಅವಧಿಯ ಬಿತ್ತನೆಯು ಅಧಿಕ ಬೆಳವಣಿಗೆ ದಿನಗಳನ್ನು (GDD) ಹೊಂದಿದೆ ಮತ್ತು ಮೊದಲು ಬಿತ್ತನೆ ಮಾಡಿದ ಬೆಳೆಯು ಹೆಚ್ಚು ಮಳೆ ದಿನಗಳನ್ನು ಹೊಂದಿದೆ.

3.4.8 ಮಣ್ಣು ವಿಜ್ಞಾನ

ಸಾವಯವ, ರಾಸಾಯನಿಕ ಮತ್ತು ಸಮಗ್ರ ಉತ್ಪಾದನಾ ವ್ಯವಸ್ಥೆಗಳ ಮೌಲ್ಯಮಾಪನ ಮತ್ತು ಸಾವಯವ ಪದ್ಧತಿಯಲ್ಲಿ ಬಯೋಇಂಟೆನ್ಸಿವ್ ಬೆಳೆ ಪದ್ಧತಿಗಳ ಮೌಲ್ಯ ಮಾಪನ: ನಿರ್ದಿಷ್ಟ ಪ್ರಯೋಗ ತಾಕಿನಲ್ಲಿ ಸಾವಯವ ಮತ್ತು ರಾಸಾಯನಿಕ ಪೋಷಕಾಂಶಗಳ ನಿರ್ವಹಣೆಯನ್ನು ಇಡೀ ಬೆಳೆ/ಸರದಿ ಬೆಳೆ ಮತ್ತು ಅಂತರ ಬೆಳೆ ಪದ್ಧತಿಯಲ್ಲಿ ಮಣ್ಣಿನ ಬೌತಿಕ, ರಾಸಾಯನಿಕ ಗುಣಲಕ್ಷಣಗಳು ಮತ್ತು ಪೋಷಕಾಂಶಗಳ ಸ್ಥಿತಿ ಕುರಿತು 12 ವರ್ಷಗಳ ಕಾಲ ಮೌಲ್ಯ ಮಾಪನ ಮಾಡಿ ದಾಖಲು ಮಾಡಲಾಯಿತು. (2006–2018)

ನೈಸರ್ಗಿಕ ಅರಣ್ಯದಲ್ಲಿ ಮಣ್ಣಿನ ಸಾವಯವ ಇಂಗಾಲ ದಾಸ್ತಾನು: ಪ್ರಭುನಗರದ ಕೃಷಿ ಸಂಶೋಧನಾ ಕೇಂದ್ರದ ನಾಲ್ಕು ವ್ಯವಸ್ಥೆಯ ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕ ನಿಲುವಿನ ಜೀವರಾಶಿ ಮತ್ತು ಇಂಗಾಲದ ಅನುಕ್ರಮವನ್ನು ಅಂದಾಜಿಸಲಾಗಿದೆ. ವಿವಿಧ ಇಳಿಜಾರುಗಳಲ್ಲಿ, ಬೆಟ್ಟದ ಮೇಲ್ಭಾಗ, ಬಯಲು ಮತ್ತು ಕಡಿಮೆ ಪ್ರದೇಶಕ್ಕೆ ಹೋಲಿಸಿದರೆ ಮಧ್ಯಮ ಬೆಟ್ಟದ ಪ್ರದೇಶದಲ್ಲಿ (3–5 %) ಗಮನಾರ್ಹವಾಗಿ ಹೆಚ್ಚಿನ ಜೀವರಾಶಿ ಮತ್ತು ಇಂಗಾಲದ ಅನುಕ್ರಮವನ್ನು ದಾಖಲಿಸಲಾಗಿದೆ. ಮರದ ಪ್ರಭೇದಗಳಲ್ಲಿ, ಇತರ ಮರ ಪ್ರಭೇದಗಳಿಗೆ ಹೋಲಿಸಿದರೆ ಗಮನಾರ್ಹವಾಗಿ ಹೆಚ್ಚಿನ ಜೀವರಾಶಿ ಮತ್ತು ಇಂಗಾಲದ ಅನುಕ್ರಮವನ್ನು *Anogeissus latifolia* ದಲ್ಲಿ (ಕ್ರಮವಾಗಿ 44.57 ಮತ್ತು 22.28 ಟ./ಹೆ.) ದಾಖಲಿಸಲಾಗಿದೆ.

ಅರಣ್ಯ–ತೋಟಗಾರಿಕೆ ವ್ಯವಸ್ಥೆಯಲ್ಲಿ ಸಾವಯವ ಇಂಗಾಲ ದಾಸ್ತಾನು: ಪ್ರಭುನಗರದ ಕೃಷಿ ಸಂಶೋಧನಾ ಕೇಂದ್ರದಲ್ಲಿ ಚಿಕ್ಕು ಆಧಾರಿತ ಕೃಷಿ ಅರಣ್ಯ ವ್ಯವಸ್ಥೆಗಳೊಂದಿಗೆ ಬೆಳೆದ ವಿವಿಧ ಮರಗಳ ಜೀವರಾಶಿ ಮತ್ತು ಇಂಗಾಲದ ಅನುಕ್ರಮವನ್ನು ಅಂದಾಜು ಮಾಡುವ ಪ್ರಯೋಗವು ಯೂಕಲಿಪ್ಟಸ್ ಟೆರೆಟಿಕಾರ್ನಿಸ್ನಲ್ಲಿ ಒಟ್ಟು ಜೀವರಾಶಿ ಮತ್ತು ಇಂಗಾಲದ ಅನುಕ್ರಮವು ಗಮನಾರ್ಹವಾಗಿ ಹೆಚ್ಚಾಗಿದೆ ಮತ್ತು ಇತರ ಮರ ಪ್ರಭೇದಗಳಿಗೆ ಹೋಲಿಸಿದರೆ ತೇಗ–ಚಿಕ್ಕು ಆಧಾರಿತ ಕೃಷಿ ಅರಣ್ಯ ವ್ಯವಸ್ಥೆಯಲ್ಲಿ, ಇತರ ಕೃಷಿ ಅರಣ್ಯ ವ್ಯವಸ್ಥೆಗಳಿಗೆ ಹೋಲಿಸಿದರೆ ಚಿಕ್ಕುವನ್ನು *Lagerstroemia lanceolata* ದಲ್ಲಿ ಬೆಳೆದಾಗ ಜೀವರಾಶಿ ಮತ್ತು ಇಂಗಾಲದ ಅನುಕ್ರಮಣಿಕೆಯು ಗಮನಾರ್ಹವಾಗಿ ಹೆಚ್ಚಿಗಿತ್ತು.

ಮರದ ಮೇವಿನ ಜಾತಿಗಳ ಮೌಲ್ಯಮಾಪನದ ಕುರಿತು ವಿವಿಧ ಸ್ಥಳಗಳಲ್ಲಿ ಪ್ರಯೋಗ : ಮೌಲ್ಯಮಾಪನ ಮಾಡಿದ ಐದು ಮೇವಿನ ಮರಗಳಲ್ಲಿ, *Sesbania grandifolra - Glyrocidia scpium* ನಲ್ಲಿ ಗರಿಷ್ಠ ಕಾಲರ್ ವ್ಯಾಸವನ್ನು ದಾಖಲಿಸಲಾಗಿದೆ. ಇತರ ಮೇವಿನ ಮರದ ಜಾತಿಗಳಿಗೆ ಹೋಲಿಸಿದರೆ, ಸೆಸ್ಬೇನಿಯಾ ಗ್ರ್ಯಾಂಡಿಫ್ಲೋರಾದಲ್ಲಿ ಶಾಖೆಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗಿದೆ ಮತ್ತು ಲ್ಯುಕೇನಾ ಲ್ಯುಕೋಸೆಫಾಲಾ ನಂತರದ್ದಾಗಿದೆ. ಇತರ ಮೇವಿನ ಮರದ ಜಾತಿಗಳಿಗೆ ಹೋಲಿಸಿದರೆ ಹಸಿರು ಜೀವರಾಶಿ ಕ್ಯಾಲಿಯಾಂಡ್ರಾಕಲೋಥೈರ್ಸನ್ನಲ್ಲಿ ಗಮನಾರ್ಹವಾಗಿ ಹೆಚ್ಚಿತ್ತು ಮತ್ತು ಸೆಸ್ಬೇನಿಯಾ ಗ್ರ್ಯಾಂಡಿಫ್ಲೋರಾ ತದನಂತರದ್ದಾಗಿದೆ. ಸೆಸ್ಬೇನಿಯಾ ಗ್ರ್ಯಾಂಡಿಫ್ಲೋರಾದಲ್ಲಿ ತೇವಾಂಶವು ಹೆಚ್ಚಾಗಿದ್ದು, ಇತರ ಮೇವಿನ ಮರದ ಜಾತಿಗಳಿಗೆ ಹೋಲಿಸಿದರೆ *Glyracidia sepium. Sesbania grandifolra* ಕಚ್ಚಾ ಪ್ರೋಟೀನ್ ಮತ್ತು ಒಟ್ಟು ಬೂದಿ ಹೆಚ್ಚಿಗಿತ್ತು.

ಕರಾವಳಿಯಲ್ಲಿ ಲವಣಯುಕ್ತ ಜಮೀನುಗಳ ಗುಣಲಕ್ಷಣ, ನಕ್ಷೆ, ಸ್ಥಳಾಕೃತಿ ಒಟ್ಟುಗೂಡಿಸುವಿಕ ಮತ್ತು ಸುಸ್ಥಿರ ನಿರ್ವಹಣೆ ಕುರಿತು ಅಧ್ಯಯನಗಳು: ಮಳೆಗಾಲದ ಪೂರ್ವ 2018 ರ ಸಮಯದಲ್ಲಿ ಮಣ್ಣಿನ ರಸಸಾರ 3.64 ರಿಂದ 6.48 ರ ನಡುವೆ ಇತ್ತು ಎಂದು ವರದಿಯಾಗಿದೆ. ಬೆಳೆ ಮೂಲ ವಲಯದ ವಿದ್ಯುತ್ ವಾಹಕತೆ ಹೆಚ್ಚಾಗಿದೆ ಮತ್ತು ಇದು 0.51 ರಿಂದ 162.37 dS/m ರವರೆಗೆ ಇರುತ್ತದೆ. ನದೀಮುಖದಲ್ಲಿರುವ ಬಹುಪಾಲು ಬೆಳೆ ಭೂಮಿಯಲ್ಲಿ ಹೆಚ್ಚಿನ ಲವಣಾಂಶ ಮತ್ತು ಕಡಿಮೆ ರಸಸಾರ ಇದ್ದು ಬೇಸಿಗೆಯಲ್ಲಿ ಕೃಷಿಗೆ ಸೂಕ್ತವಲ್ಲ. ನೀರಿನಲ್ಲಿ ಕರಗುವ ಧನಾತ್ಮಕ ಅಯಾನುಗಳು ಪ್ರಾಬಲ್ಯವು ಸೋಡಿಯಮ್> ಕ್ಯಾಲ್ಸಿಯಂ > ಮ್ಯಾಗ್ನೇಶಿಯಂ > ಪೊಟಾಷಿಯಂ ಅನುಕ್ರಮದಲ್ಲಿತ್ತು.

ಸುಜಲಾ –3 ಯೋಜನೆ: ಗದಗ, ಕೊಪ್ಪಳ ಮತ್ತು ವಿಜಯಪುರ ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶಗಳಲ್ಲಿ ಸುಧಾರಿತ ಕಾರ್ಯಕ್ರಮ ಏಕೀಕರಣಕ್ಕೆ ಬೆಂಬಲ: ಕರ್ನಾಟಕ ರಾಜ್ಯ ಜಲಾನಯನ ಅಭಿವೃದ್ಧಿ ಇಲಾಖೆ 2013 ರಿಂದ 11 ಜಿಲ್ಲೆಗಳಲ್ಲಿ KWDP- II (ಸುಜಲಾ–3) ಅನ್ನು ಪ್ರಾರಂಭಿಸಿದೆ, ಅವುಗಳೆಂದರೆ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಗದಗ, ದಾವಣಗೆರೆ, ಚಾಮರಾಜನಗರ, ರಾಯಚೂರು, ತುಮಕೂರು, ವಿಜಯಪುರ ಮತ್ತು ಚಿಕ್ಕಮಗಳೂರು ಪಾಲುದಾರರ ಅಗತ್ಯತೆಗಳು ಮತ್ತು ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಯನ್ನು ಸುಮಾರು 13.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜಾರಿಗೆ ತರಲಾಗಿದೆ. ಯೋಜನೆಯ ಪಾಲುದಾರ ಸಂಸ್ಥೆಗಳಲ್ಲಿ ಒಂದಾಗಿರುವ ಯುಎಎಸ್, ಧಾರವಾಡಕ್ಕೆ ಗದಗ, ಕೊಪ್ಪಳ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹರಡಿರುವ 633 ಸಣ್ಣ ಜಲಾನಯನಗಳನ್ನು ನಿಯೋಜಿಸಲಾಗಿದೆ. ಭಾಗವಹಿಸುವ ಜಲಾನಯನ ಅಭಿವೃದ್ಧಿ ಯೋಜನೆಗಾಗಿ ಮಣ್ಣು, ಇಳಿಜಾರು, ಲಭ್ಯವಿರುವ ಪೋಷಕಾಂಶಗಳು, ಅಂತರ್ಜಲ, ಬೆಳೆಗಳು ಮತ್ತು ಭೂ–ಬಳಕೆಯ ಬಗ್ಗೆ ಸೈಟ್–ನಿರ್ದಿಷ್ಟ ಪ್ರಾದೇಶಿಕ ಮಾಹಿತಿಯನ್ನು ಜಿಐಎಸ್ ಪರಿಸರದಲ್ಲಿ ಸಂಗ್ರಹಿಸಿ ಭೂಪಟ ಮಾಡಲಾಗುತ್ತದೆ. 1: 7920 ಪ್ರಮಾಣದಲ್ಲಿ ಕಾರ್ಟೊಸಾಟ್ ಚಿತ್ರಣದೊಂದಿಗೆ ಕಾಡಾಸ್ಟ್ರಲ್ ನಕ್ಷೆಯನ್ನು ಬಳಸಿಕೊಂಡು ಭೂ ಸಂಪನ್ಮೂಲ ಇನ್ವೆಂಟರಿ (ಎಲ್.ಆರ್.ಐ.) ಅನ್ನು ನಡೆಸಲಾಗುತ್ತದೆ. ಒಂದೇ ರೀತಿಯ ಮಣ್ಣಿನ–ಸೈಟ್ ಗುಣಲಕ್ಷಣಗಳನ್ನು ಹೊಂದಿರುವ ಭೂಮಿಯನ್ನು ಒಂದು ನಿರ್ವಹಣಾ ಘಟಕವಾಗಿ ವರ್ಗೀಕರಿಸಲಾಗಿದೆ, ಇದು ವಿವಿಧ ಜಲಾನಯನ ಅಭಿವೃದ್ಧಿ ಚಟುವಟಿಕೆಗಳ ಯೋಜನೆ ಮತ್ತು ಅನುಷ್ಠಾನಕ್ಕೆ ಅನುಕೂಲವಾಗುತ್ತದೆ. ಸುಧಾರಿತ ಮತ್ತು ಸುಸ್ಥಿರ ಭೂ–ಬಳಕೆಗಾಗಿ ತಾಂತ್ರಿಕವಾಗಿ ಕಾರ್ಯಸಾಧ್ಯವಾದ ಮತ್ತು ಲಾಭದಾಯಕ ಆಯ್ಕೆಗಳನ್ನು ಮೌಲ್ಯಮಾಪನ ಮಾಡಲು ವಿವಿಧ ಹಂತಗಳಲ್ಲಿ ರೈತರು ಮತ್ತು ನಿರ್ಧಾರ ತೆಗೆದುಕೊಳ್ಳುವವರಿಗೆ ಒದಗಿಸಲು ಕ್ಷೇತ್ರ ಮತ್ತು ತೋಟಗಾರಿಕಾ ಬೆಳೆಗಳಿಗೆ ಭೂ ಸೂಕ್ತತೆ ನಕ್ಷೆಗಳು ಸಿದ್ಧವಾಗಿವೆ. ಬೆಳೆಗಳಿಗೆ ಸೈಟ್ ನಿರ್ದಿಷ್ಟ

ಶಿಫಾರಸ್ಸುಗಳಿಗಾಗಿ ಮಣ್ಣಿನ ಫಲವತ್ತತೆ ನಕ್ಷೆಗಳನ್ನು ಸಹ ತಯಾರಿಸಲಾಗುತ್ತದೆ. ಮಣ್ಣಿನ ಸಮೀಕ್ಷೆಯ ವರದಿಗಳು ಮತ್ತು ಪ್ರತಿ ಕಿರು ಜಲಾನಯನ ಪ್ರದೇಶಗಳಿಗೆ (633) ಇಂಗ್ಲಿಷ್ ಮತ್ತು ಕನ್ನಡದಲ್ಲಿ ತಯಾರಿಸಲಾಗುತ್ತದೆ, ಇದನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಮತ್ತು ಕೆಲವು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಅಪ್ಲೋಡ್ ಮಾಡಲಾಗುತ್ತದೆ.

ಯೋಜಕರು ಮತ್ತು ಅಂತಿಮ ಬಳಕೆದಾರರಿಗೆ ಜಿಯೋಸ್ಪೇಷಿಯಲ್ ಮತ್ತು ಇತರ ಕೃಷಿ ಸಂಬಂಧಿತ ಮಾಹಿತಿಗಾಗಿ ಒಂದೇ ವಿಂಡೋ ಪ್ರವೇಶವನ್ನು ಒದಗಿಸಲು ಡಿಜಿಟಲ್ ಮಣ್ಣಿನ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ನಿರ್ವಹಿಸಲಾಗುತ್ತಿದೆ.

ಕೊಪ್ಪಳ, ಗದಗ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ನೆಲೆಗೊಂಡಿರುವ ಬೆಡವಟ್ಟಿ (4 ಡಿ 4 ಎ 1 ಎಫ್), ದಿಂಡೂರ್ (4ಡಿ 4ಎ 2ಡಿ) ಮತ್ತು ಹಿರೆಹಳ್ಳಿ (4ಡಿ 7ಎ 8ಬಿ) ಉಪ ಜಲಾನಯನ ಪ್ರದೇಶಗಳಿಗೆ ಕ್ರಮವಾಗಿ ಕೊಪ್ಪಳ, ಗದಗ ಮತ್ತು ವಿಜಯಪುರದ ಕೃಷಿ ಜಂಟಿ ನಿರ್ದೇಶಕರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ.

ಭೂಸರ್ವೇಕ್ಷಣೆ ಆಧಾರಿತ ಶಿಫಾರಸ್ಸುಗಳು

ಪ್ರತಿ ಸಣ್ಣ ಜಲಾನಯನ ಪ್ರದೇಶಗಳಿಗೆ ಮಣ್ಣು ಮತ್ತು ನೀರಿನ ಸಂರಕ್ಷಣಾ ಯೋಜನೆಯನ್ನು ಜಾರಿಗೆ ತರುವುದು. 2. ಸ್ಥಳ ಸೂಕ್ತತೆಯ ಮೌಲ್ಯಮಾಪನದ ಆಧಾರದ ಮೇಲೆ ಬೆಳೆಗಳನ್ನು ಬೆಳೆಯುವುದು. 3. ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಪೋಷಕಾಂಶಗಳ ಶಿಫಾರಸ್ಸು ಮಾಡುವುದು (ಸಾವಯವ ಇಂಗಾಲ, ಸಾರಜನಕ, ರಂಜಕ, ಗಂಧಕ, ಕಬ್ಬಿಣ ಮತ್ತು ಸತು). ಜಲಾನಯನ ಪ್ರದೇಶದಲ್ಲಿ ಪ್ರಮುಖ ಪ್ರಮಾಣದಲ್ಲಿ ಕೊರತೆ ಗುರುತಿಸಿ ನಿರ್ಬಂಧಗಳನ್ನು ಪರಿಹರಿಸುವ ಮೂಲಕ ಎಲ್ಲಾ ಕಿರು ಜಲಾನಯನ ಪ್ರದೇಶಗಳಲ್ಲಿ ಬೆಳೆ ಉತ್ಪಾದಕತೆ ವರ್ಧನೆಯ ಪ್ರಯೋಗಗಳನ್ನು ನಡೆಸುವುದು. 4. ಮಣ್ಣಿನ ಸಾವಯವ ಇಂಗಾಲ ಸ್ಥಿತಿಯನ್ನು ಹೆಚ್ಚಿಸಲು ಸಮಗ್ರ ನಿರ್ವಹಣೆ ಪದ್ಧತಿ ಅಳವಡಿಸುವುದು. 5. ಕೃಷಿಯೇತರ ಭೂಮಿಯನ್ನು ಅರಣ್ಯೀಕರಣ ಕಾರ್ಯಕ್ರಮದ ಅಡಿಯಲ್ಲಿ ತರುವುದು.

ಕೊಪ್ಪಳ, ಗದಗ ಮತ್ತು ವಿಜಯಪುರ ಜಿಲ್ಲೆಗಳ ಕಪ್ಪು ಮತ್ತು ಕೆಂಪು ಮಣ್ಣಿಗೆ ಉತ್ಪತ್ತಿಯಾದ ಭೂ ಸಂಪನ್ಮೂಲ ದಾಸ್ತಾನು ದತ್ತಾಂಶ ಮತ್ತು ನಕ್ಷೆಗಳ ಆಧಾರದ ಮೇಲೆ, ಈ ಮಣ್ಣಿನಲ್ಲಿ ಸತು ಮತ್ತು ಕಬ್ಬಿಣದ ಸೂಕ್ಷ್ಮ ಪೋಷಕಾಂಶಗಳ ಕೊರತೆಯಿದೆ ಎಂದು ಗಮನಿಸಲಾಯಿತು. ಆದ್ದರಿಂದ ಅವುಗಳ ಶಿಫಾರಸುಗಳನ್ನು ಸೂಚಿಸಲಾಗಿದೆ.

3.4.9 ಕೃಷಿ ಇಂಜಿನಿಯರಿಂಗ್

ಜಲಾನಯನ ಮತ್ತು ಅಚ್ಚುಕಟ್ಟು ಪ್ರದೇಶಗಳ ಸಂಬಂಧ ಮತ್ತು ಕಿರುಜಲಾನಯನಗಳಲ್ಲಿ ನೀರಿನ ಉತ್ಪಾದಕತೆ ಹೆಚ್ಚಿಸುವುದು: ಈ ವರ್ಷ 466 mm ಮಳೆಯಾಗಿದ್ದು ಇದು ವಾರ್ಷಿಕ ಸರಾಸರಿ ಮಳೆಗಿಂತ 21.8 ಪ್ರತಿಶತ ಕಡಿಮೆಯಾಗಿದೆ. ಈ ವರ್ಷ 3 ನೀರಿನ ಕೊಚ್ಚಣೆ ಉಂಟಾಗಿವೆ. ಈ ವರ್ಷ ಮಳೆ ಪ್ರಮಾಣ ಕಡಿಮೆ ಆದರೂ ಕೂಡ ಮಳೆ ತೀವ್ರತೆಯು ಹೆಚ್ಚಿದ್ದರಿಂದ ಕೃಷಿ ಹೊಂಡದಲ್ಲಿ 1519 ಕ್ಯೂ.ಮಿ. ನೀರಿನ ಸಂಗ್ರಹವಾಗಿದೆ. ಪೂರಕ ನೀರಾವರಿ ಕೊಡುವುದರಿಂದ ಕಡಲೆ ಮತ್ತು ಜೋಳದ ಬೆಳೆಗಳಲ್ಲಿ ಕ್ರಮವಾಗಿ ಶೇ. 69 ಮತ್ತು 48 ಹೆಚ್ಚಿನ ಇಳುವರಿ ದಾಖಲಾಯಿತು. ಖರ್ಚು ವೆಚ್ಚಿನ ಅನುಪಾತವು ತೊಗರಿಯಲ್ಲಿ ಹೆಚ್ಚು ದಾಖಲಾಯಿತು (2.7). ಈ ಪ್ರಯೋಗವನ್ನು ಮುಂದವರಿಸಲಾಗುವುದು.

ಕೃಷಿ ಹೊಂಡದಲ್ಲಿ ನೀರಿನ ಭಾಷ್ಪೀಭವನ ಕಡಿಮೆ ಮಾಡುವ ಸಾಧನಗಳು: ನೀರಿನ ಭಾಷ್ಪೀಭವನದ ಪ್ರಮಾಣವನ್ನು ಏಪ್ರಿಲ್ 2018 ರಿಂದ ಡಿಸೆಂಬರ 2018 ರ ವರೆಗೆ ಅಳೆಯಲಾಯಿತು ಈ ಅವಧಿಯಲ್ಲಿ ನೀರಿನ ಭಾಷ್ಪೀಭವನ ಪ್ರಮಾಣವು ಸ್ಪರೈಲ್ ಅಲ್ಕೋಹಾಲ್ ನಲ್ಲಿ (89.7 ಸೆಂ.ಮೀ.) ಅತ್ಯಂತ ಕಡಿಮೆಯಾಗಿದ್ದು ತದನಂತರ ಸಿಲಿಕಾನ್ ಆಯಿಲ್‌ನಲ್ಲಿ 91.2 ಸೆಂ.ಮೀ, ಭಾಷ್ಪೀಭವನ ದಾಖಲಾಗಿದೆ. ಅತ್ಯಂತ ಹೆಚ್ಚಿನ ಭಾಷ್ಪೀಭವನವು ನಿಯಂತ್ರಿತದಲ್ಲಿ (178.2 ಸೆಂ.ಮೀ.) ದಾಖಲಾಗಿದ್ದು, ರಾಸಾಯನಿಕಗಳಾದ ಅಲ್ಕೋಹಾಲಗಳನ್ನು ಬಳಸುವುದರಿಂದ ಬಾಷ್ಪಿಭವ ನ್ನು 49.20 % ಕಡಿಮೆ ಮಾಡಬಹುದು. ಬೇವಿನ ಎಣ್ಣೆಯನ್ನು ಬಳಸುವುದರಿಂದ 39 % ಬಾಷ್ಪಿಭವನವನ್ನು ಕಡಿಮೆ ಮಾಡಬಹುದು.

ಸಬ್ ಸೋಯ್ಲರ್ ನಿಂದ ಕಪ್ಪು ಜಮೀನಿನಲ್ಲಿ ಸ್ಥಳದಲ್ಲೇ ತೇವಾಂಶವನ್ನು ರಕ್ಷಿಸುವ ಪರಿಣಾಮದ ಅಧ್ಯಯನ: ಸಬ್ ಸೋಯ್ಲರ್ ಮತ್ತು ಕೊಟ್ಟಿಗೆ ಗೊಬ್ಬರ ಹಾಕಿದ ಉಪಚಾರಗಳಲ್ಲಿ ಕಂಟ್ರೋಲ್ ಗಿಂತ ಹೆಚ್ಚಿನ ಇಳುವರಿ ದಾಖಲಾಯಿತು.

3.4.10 ಕೃಷಿ ಪರಿಸರ ವಿಜ್ಞಾನ ವಿಭಾಗ

ಉಪಚರಿಸಿದ ಡಿಟ್ಟೀಲರಿ ತ್ಯಾಜ್ಯ ನೀರನ್ನು ಕೃಷಿಯಲ್ಲಿ ಒಂದು ಸಾರಿ ಉಪಯೋಗದ ಪರಿವೀಕ್ಷಣೆ – ರವೀಂದ್ರ ಡಿಟ್ಟಿಲರಿಸ್, ಬೀದರ: ತ್ಯಾಜ್ಯ ನೀರನ್ನು ಹಾಕಿದ ಹೊಲಗಳ ಮಣ್ಣು ಮತ್ತು ನೀರಿನ ಮಾದರಿಗಳ ವಿಶ್ಲೇಷಣೆ ಪ್ರಕಾರ, ಮಣ್ಣಿನಲ್ಲಿ ಪೋಟ್ಯಾಸಿಯಂ ಲಭ್ಯತೆ ಹೆಚ್ಚಾಗಿರುವುದು ಕಂಡುಬಂದಿದೆ ಹಾಗು ಇತರ ಮಣ್ಣಿನ ಗುಣಧರ್ಮಗಳ ಮೇಲೆ ಯಾವುದೇ ದುಷ್ಪರಿಣಾಮವಾಗಿರುವುದಿಲ್ಲ.

ರೈಜೊಫ್ಪಿಯರ್ ಇಂಜಿನಿಯರಿಂಗ್ ಮುಖಾಂತರ ಕ್ಷೇತ್ರ ಮತ್ತು ಕೀಟಗಳ ನಿರ್ವಹಣೆಯಲ್ಲಿ ಏಂಡೋಫೈಟ್ಸ್‌ಗಳ ಪಾತ್ರ: ಏಂಡೋಫೈಟ್ಸ್‌ಗಳಲ್ಲಿ ದುಂಡಾಣುಐಸೋಲೇಟ್ BISB1R1 ಎರಡನೇ ಹಂತದ ಸ್ಪೊಡೋಪ್ಟೆರಾ ಮರಿಹುಳುಗಳಿಗೆ ಮೇಲೆ ಉಪಚರಿಸಿದಾಗಶೇ 100 ರಷ್ಟು ಸಾಯುವ ಪ್ರಮಾಣಕಂಡು ಬಂದಿತು. ಶಿಲಿಂದ್ರ ಐಸೋಲೇಟ್ PxIL ಸ್ಪೊಡೋಪ್ಟೆರಾ ಮೇಲೆ ಶೇ. 97 ರಷ್ಟು ಸಾಯುವ ಪ್ರಮಾಣ ದಾಖಲಿಸಿದೆ.

ಹೂವಿನ ಸಂಪನ್ಮೂಲಗಳ ವೈವಿಧ್ಯೀಕರಣದಿಂದ ಕೀಟಗಳ ಪರಾಗಸ್ಪರ್ಶವನ್ನು ವೃದ್ಧಿಸಿ ಬೆಳೆಯ ಇಳುವರಿಯನ್ನು ಹೆಚ್ಚಿಸುವುದು: ಹೂವಿನ ಸಂಪನ್ಮೂಲಗಳ ಸರಬರಾಜು ಜೊತೆಗೆ ಬಕ್ ವೀಟ್ ಬೆಳೆಯನ್ನು ತೊಗರಿ ಬೆಳೆಯ ಸುತ್ತಲು ಬೆಳೆಯುವುದರಿಂದ ತೊಗರಿಯ ಬೆಳೆಗೆ ಉತ್ತಮ ಲಾಭದೊರೆಯುವುದು, ಕೀಟನಾಶಕಗಳ ಸಿಂಪರಣೆಯ ನಂತರವು, ಪರಾಗಸ್ಪರ್ಶ ಕೀಟಗಳ ಸಂಖ್ಯೆಯನ್ನು ಪುನಃ ವೃದ್ಧಿಸಲು ಸಹಕಾರಿಯಾಗಿದೆ. ತೊಗರಿ ಬೆಳೆಯ ಸುತ್ತಲು ಅಂಚಿನ ಬೆಳೆಗಳನ್ನು ಬೆಳೆದ ಕ್ಷೇತ್ರದಲ್ಲಿ ಜೇನು ಹುಳುಗಳ ಚಟುವಟಿಕೆಯನ್ನು 3 ರಿಂದ 4 ದಿನಗಳಲ್ಲಿ ಕಂಡುಬಂದಿದೆ ಜೊತೆಗೆ ಅಂಚಿನ ಬೆಳೆಗಳಿಲ್ಲದ ಕ್ಷೇತ್ರಗಳಲ್ಲಿ 6 ರಿಂದ 7 ದಿನಗಳಲ್ಲಿ ಜೇನು ಹುಳುಗಳ ಚಟುವಟಿಕೆಗಳನ್ನು ಗಮನಿಸಲಾಗಿದೆ.

ಉತ್ತರಕರ್ನಾಟಕದ ಹವಾಮಾನ ಸ್ಥಿತಿಗೆ ಅನುಗುಣವಾಗಿ ಗೋವಿನಜೋಳದಲ್ಲಿ ಪ್ರೈಮಿಂಗ ತಂತ್ರಜ್ಞಾನದ ಅಳವಡಿಕೆಯಿಂದ ಸಸಿಗಳಿಗೆ ಬರುವ ರೋಗಗಳು, ಸಸಿ ನೊಣ ಮತ್ತುಕಾಂಡ ಕೊರಕಗಳ ನಿರ್ವಹಣೆ: ಪೈರಾಕ್ಲೋಸ್ಟ್ರೋಬಿನ್ 25 ಗ್ರಾಂ/ಲೀ + ಫಿಪ್ರೋನಿಲ್ 250 ಗ್ರಾಂ/ಲೀ + ಥಯೋಫ್ಯಾನೇಟ್ ಮಿಥೈಲ್ 225 ಗ್ರಾಂ/ಲೀ ಎಫ್‌ಎಸ್ (ಸ್ಟ್ಯಾಂಡಾಕ್‌ಟಾಪ್ 500 ಗ್ರಾಂ/ಲೀ ಎಫ್‌ಎಸ್) ಕೀಟನಾಶಕವು ಸೊರಗು ರೋಗಕ್ಕೆ ಕಾರಣವಾದ ಮಣ್ಣಿನಿಂದ ಉತ್ಪತ್ತಿಯಾದ ರೋಗಗಳು, ಸಸಿ ನೊಣ ಮತ್ತು ಕಾಂಡ ಕೊರಕಗಳ ಭಾದೆಯನ್ನು ಕನಿಷ್ಠ ಪ್ರಮಾಣದವರೆಗೆ ನಿರ್ವಹಣೆ ಮಾಡಿದೆ.

3.4.11 ಸಸ್ಯ ರೋಗ ಶಾಸ್ತ್ರ

ಮುಂಗಾರು ಹಂಗಾಮಿನಲ್ಲಿ (2018–19) ವಿವಿಧ ಕ್ಷೇತ್ರ ಬೆಳೆಗಳಲ್ಲಿನ ರೋಗದ ಸನ್ನಿವೇಶ: ಉತ್ತರ ಕರ್ನಾಟಕದಲ್ಲಿ ಸಮೀಕ್ಷೆ ನಡೆಸಿದ ಎಲ್ಲಾ ಪ್ರದೇಶಗಳಲ್ಲಿ ಜೋಳದಲ್ಲಿ ಮೂಂಗಾರು ಹಂಗಾಮಿನಲ್ಲಿ ಬೂಜು ತುಪ್ಪಟರೋಗ ಹಾಗೂ ಹಿಂಗಾರು ಹಂಗಾಮಿನಲ್ಲಿ ಇದ್ದಿಲು ರೊಗದ ತೀವ್ರತೆ ಕಂಡು ಬಂದಿದೆ. ಹಿಂಗಾರು ಹಂಗಾಮಿನಲ್ಲಿ ಗೋಧಿಯ ಎಲೆ ತುಕ್ಕು ರೋಗ ಹೆಚ್ಚು ತೀವ್ರವಾಗಿತ್ತು. ಧಾರವಾಡ ಜಿಲ್ಲೆಯಲ್ಲಿ ಗರಿಷ್ಠ 69.51% ಬತ್ತದ ಬೆಂಕಿರೋಗ, ಸಮೀಕ್ಷೆ ನಡೆಸಿದ ಎಲ್ಲಾ ಪ್ರದೇಶಗಳಲ್ಲಿ ಮೆಕ್ಕೆ ಜೋಳದ ಎಲೆ ಅಂಗಮಾರಿ ರೋಗವು ಮಧ್ಯಮದಿಂದ ತೀವ್ರ ಸ್ವರೂಪದೊಂದಿಗೆ ಕಾಣಿಸಿಕೊಂಡಿತು. ಸೋಯಾಬೀನ್‌ನ ತುಕ್ಕು, ಚಿಬ್ಬುರೋಗ, ಎಲೆಚುಕ್ಕೆ ರೋಗ, ಆಲ್ಟರ್ನೇರಿಯಾ ಎಲೆಚುಕ್ಕೆ ಮತ್ತು ಕಪ್ಪೆ ಕಣ್ಣಿನ ರೋಗ ತೀವ್ರತೆ ಹೆಚ್ಚಾಗಿ ಕಂಡು ಬಂದಿತು. ಎಳ್ಳಿನಲ್ಲಿ ಸೆರ್ಕೊಸ್ಪೋರಾ ಎಲೆಚುಕ್ಕೆ ರೋಗಗಳ ಪ್ರಾಬಲ್ಯ ಹೆಚ್ಚಿಗಿದ್ದು, ಫಿಲ್ಲೋಡಿ ರೂಪದಲ್ಲಿ ಕಾಣಿಸಿಕೊಂಡಿತು. ಗುರೆಳ್ಳಿನಲ್ಲಿ ಧಾರವಾಡ, ಬೆಳಗಾವಿ ಮತ್ತು ಗದಗ ಜಿಲ್ಲೆಗಳಲ್ಲಿನ ಆಲ್ಟರ್ನೇರಿಯಾ ಮತ್ತು ಸರ್ಕೋಸ್ಪೊರಾ ಎಲೆಚುಕ್ಕೆ ರೋಗಗಳು ಕಂಡು ಬಂದವು.

3.4.12 ಕೃಷಿ ಕೀಟಶಾಸ್ತ್ರ

ತೊಗರಿಯಲ್ಲಿ ಕ್ಲೋರ್‌ಫೆನ್‌ಪೈರ್ 24% ಎಸ್.ಸಿ. ಕೀಟನಾಶಕದಿಂದ ಕಾಯಿಕೊರಕದ (*ಹೆಲಿಕೋವರ್ಪ ಆರ್ಮಿಜೆರಾ*) ನಿರ್ವಹಣೆ: ಕ್ಲೋರ್‌ಫೆನ್‌ಪೈರ್ 24% ಎಸ್.ಸಿ. @ 1.20 ಮಿ.ಲೀ./ಲೀ. (288 ಗ್ರಾಂ ಎ.ಐ./ಹೆ) ಮತ್ತು 1.00 ಮಿ.ಲೀ./ಲೀ. (240 ಗ್ರಾಂ ಎ.ಐ./ಹೆ.) ಪ್ರಮಾಣಗಳು ಪರಸ್ಪರ ಸಮಾನವಾಗಿ ಪರಿಣಾಮಕಾರಿತ್ವವಾಗಿದ್ದು, ಕಡಿಮೆ ಕಾಯಿಕೊರಕದ ಬಾಧೆ (ಕ್ರಮವಾಗಿ ಶೇ. 9.19 ಮತ್ತು 10.50) ಮತ್ತು ಹೆಚ್ಚಿನ ಇಳುವರಿಯನ್ನು (ಕ್ರಮವಾಗಿ 11.58 ಮತ್ತು 11.15 ಕ್ವಿ./ಹೆ.) ನೀಡಿರುತ್ತದೆ.

ಕಡಲೆ ಬೆಳೆಯಲ್ಲಿ *ಹೆಲಿಕೋವರ್ಪ ಆರ್ಮಿಜೆರಾ* ನಿರ್ವಹಣೆಗಾಗಿ *ಬ್ಯಾಸಿಲಸ್ ತುರಿಂಜಿಎನ್ಸಿಸ್* ಜೈವಿಕ ಕೀಟನಾಶಕಗಳ ಬಳಕೆ: ಎಲ್ಲಾ ಬಿ.ಟಿ. ಉತ್ಪನ್ನಗಳು ಹೆಚ್ಚಿನ ಪರಿಣಾಮಕಾರಿತ್ವವಾಗಿದ್ದು ಕಡಿಮೆ ಹುಳುಗಳ ಸಂಖ್ಯೆ, ಕಡಿಮೆ ಕಾಯಿಕೊರದ ಬಾಧೆ ಮತ್ತು ಹೆಚ್ಚಿನ ಇಳುವರಿಯನ್ನು ನೀಡಿರುತ್ತವೆ.

ಸೋಯಾಅವರೆಯಲ್ಲಿ ಲೆಪಿಡಾಪ್ಟೆರಾ ಗುಂಪಿನ ಹುಳುಗಳ ನಿರ್ವಹಣೆಗಾಗಿ ಬಿ.ಟಿ. 127 ಎಸ್.ಸಿ. ಜೈವಿಕ ಕೀಟನಾಶಕವನ್ನು ಮೌಲ್ಯಮಾಪನ ಮಾಡುವ ಬಗ್ಗೆ: ಬಿಟಿ 127 ಎಸ್.ಸಿ. @ 1.5 ಲೀ./ಹೆ. ಜೈವಿಕ ಕೀಟನಾಶಕವು ಎಲೆ ತಿನ್ನುವ ಕೀಟಗಳಾದ *ಸ್ಪೊಡಾಪ್ಟೆರಾ ಲಿಟ್ಯುರಾ, ಥೈಸನಾಪ್ಲೂಸಿಯಾ ಒರಿಚಾಲ್ಸಿಯಾ*, ಎಲೆ ಮಡಚುವ ಕೀಟಗಳನ್ನು ಹತೋಟಿ ಮಾಡುವಲ್ಲಿ ಯಶಸ್ವಿಯಾಗಿದ್ದು ಮತ್ತು ಹೆಚ್ಚಿನ ಇಳುವರಿ ದಾಖಲಾಗಿದ್ದು, ವಾಣಿಜ್ಯ ಬಿ.ಟಿ. ಡೆಲ್ಫಿನ್ @ 500 ಗ್ರಾಂ/ಹೆ. ಗಿಂತಲೂ ಹೆಚ್ಚಿನ ಪರಿಣಾಮಕಾರಿಯಾಗಿರುತ್ತದೆ.

ಸೋಯಾಅವರೆಯಲ್ಲಿ ಟೆಫ್ಲೂಬೆಂಜೂರಾನ್ 7.5% ಎಸ್.ಸಿ. + ಆಲ್ಫಸೈಪರ್‌ಮೆಥ್ರಿನ್ 7.5% ಎಸ್.ಸಿ. ಕೀಟನಾಶಕದಿಂದ ಎಲೆ ತಿನ್ನುವ ಕೀಟಗಳು ಮತ್ತು ಗರ್ಡಲ್ ದುಂಬಿ ಕೀಟಗಳ ನಿರ್ವಹಣೆ: ಟೆಫ್ಲೂಬೆಂಜೂರಾನ್ 7.5% ಎಸ್.ಸಿ. + ಆಲ್ಫಸೈಪರ್‌ಮೆಥ್ರಿನ್ 7.5% ಎಸ್.ಸಿ. @ 400 ಮಿ.ಲೀ./ಹೆ. ಉಪಚರಿಸಿದ ತಾಕುಗಳು ಕಡಿಮೆ ಪ್ರಮಾಣದಲ್ಲಿ ಸೆಮಿಲೂಪರ್ ಕೀಟ (0.36 ಮತ್ತು 0.32 ಕೀಟ/ಮೀ.), ಸ್ಪೋಡಾಪ್ಟೆರಾ (0.56 ಮತ್ತು 0.64 ಕೀಟ/ಮೀ.) ಮತ್ತು ಕಡಿಮೆ ಗರ್ಡಲ್ ದುಂಬಿಗಳ ಹಾವಳಿ (ಶೇ. 1.36 ಮತ್ತು 1.29) ಕಂಡುಬಂದಿದ್ದು, ಹೆಚ್ಚಿನ ಇಳುವರಿ ದಾಖಲಾಗಿರುತ್ತದೆ.

ಫಾಲ್ ಸೈನಿಕ ಹುಳುವಿನ ಸ್ಥಿತಿಗತಿ ಹಾಗೂ ನಿರ್ವಹಣೆ: ಫಾಲ್ ಸೈನಿಕಹುಳು ಗೋವಿನ ಜೋಳದ ಮೇಲೆ ಅಗಾಧ ಹಾನಿ ಮಾಡುತ್ತಿದ್ದು, 2018–19ನೇ ಸಾಲಿನಲ್ಲಿ ಶೇ. 6 ರಿಂದ 100 ರಷ್ಟು ಬಾಧೆ ಉತ್ತರ ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ಕಂಡುಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಸರಾಸರಿ ಪ್ರತಿಶತ 66.50 ರಷ್ಟು ಬಾಧೆಯಿದ್ದು, ಬೆಳಗಾವಿ, ಬಾಗಲಕೋಟಿ, ಗದಗ, ಹಾವೇರಿ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇದರ ಪ್ರಮಾಣ ಅನುಕ್ರಮವಾಗಿ ಶೇ. 59.55, 54.96, 50.30, 50.07, 28.83 ಹಾಗೂ 13.50 ರಷ್ಟು ಕಂಡುಬಂದಿದೆ. ಈ ಪೀಡೆಯು ಮೆಕ್ಕೆಜೋಳವಲ್ಲದೇ ಜೋಳ, ಸಜ್ಜೆ, ಕಬ್ಬು, ಹತ್ತಿ ಹಾಗೂ ನೇಪಿಯರ್ ಹುಲ್ಲಿನ ಮೇಲೂ ದಾಳಿ ಮಾಡಿದ್ದಾಗಿ ತಿಳಿದಿದೆ. ಆದರೆ ರೈತರ ಹೊಲಗಳಲ್ಲಿ ಸಮೀಕ್ಷೆ

ಮಾಡಿದಾಗ, ಈ ಪೀಡೆಯು *ಮೆಟಾರೈಜಿಯಂ ರಿಲೈ* ಎಂಬ ರೋಗಾಣುವಿಗೆ ಶೇ. 18.30 ರಷ್ಟು ತುತ್ತಾಗಿರುವದು ಕಂಡುಬಂದಿದೆ. ಈ ಶಿಲೀಂಧ್ರವನ್ನು ಫಾಲ್ ಸೈನಿಕ ಹುಳುವಿನ ಹತೋಟಿಗಾಗಿ ಮೂರು ರೈತರ ಹೊಲಗಳಲ್ಲಿ ಸಿಂಪರಣೆ ಮಾಡಿದಾಗ ಶೇ. 58.92 ರಿಂದ ಶೇ. 62.87 ರಷ್ಟು ಪೀಡೆ ನಿರ್ವಹಣೆ ಗೋವಿನ ಜೋಳದಲ್ಲಿ ಸಾಧ್ಯವಾಗಿದ್ದು, ಇದೊಂದು ಅದ್ಭುತ ರೈತ ಸ್ನೇಹಿ ನಿರ್ವಹಣಾ ಕ್ರಮವಾಗಿದೆ. ಬೇವಿನ ಬೀಜದ ಕಷಾಯ ಹಾಗೂ ಬೆಳ್ಳೊಳ್ಳಿ–ಮೆಣಸಿನಕಾಯಿ ಕಷಾಯ ಕೂಡ ಉತ್ತಮ ಫಲಿತಾಂಶ ಕೊಟ್ಟಿವೆ. ಜೊತೆಗೆ ಹಲವಾರು ಹೊಸ ಕೀಟೌಷಧಿಗಳು ಈ ಪೀಡೆಗೆ ಮಾರಕವಾಗಿದ್ದು ಕಂಡುಬಂದಿದ್ದು ಅವುಗಳನ್ನು ಸಿಂಪರಣೆ ಮಾಡಿದ ವಾರದ ಒಳಗೆ ಶೇ. 50 ರಿಂದ 100 ರಷ್ಟು ಪರಿಣಾಮ ಕಂಡುಬಂದಿದ್ದು, ಅವುಗಳನ್ನು ಈ ಕೆಳಗೆ ನಮೂದಿಸಿಲಾಗಿದೆ.

ಶೇ. 90 ಕ್ಕಿಂತ ಹೆಚ್ಚು ಪರಿಣಾಮಕಾರಿ ಕೀಟನಾಶಕಗಳು : ಎಮಾಮೆಕ್ಟಿನ್ ಬೆಂಜೋಯೆಟ್, ಸ್ಪೈನೆಟೊರಮ್, ಕ್ಲೋರ್ಯಾಂಟ್ರಿನಿಲಿಪ್ರೊಲ್, ಸ್ಪೈನೊಸ್ಯಾಡ್, ಸೈನಂಟ್ರಾನಿಲಿಪ್ರೊಲ್. 2. ಶೇ. 80–90 ರಷ್ಟು ಪರಿಣಾಮ : ಲಸ್ಸೆಂಟಾ, ಕ್ಲೊಥಿಯಾನಿಡಿನ್, ಫ್ಲುಬೆಂಡಿಯಾಮೈಡ್. 3. ಶೇ. 70–80 ರಷ್ಟು ಪರಿಣಾಮ : ನ್ಯುವ್ಲೋರಾನ್, ಫಿಪ್ರೊನಿಲ್, ಥಯೋಡಿಕಾರ್ಬ್. 4. ಶೆ. 50 ಕ್ಕಿಂತ ಕಡಿಮೆ ಪರಿಣಾಮ : ವಿಷ ಪಾಷಾಣು ಹಾಗೂ ಹರಳು ಕೀಟನಾಶಕಗಳು.

ಸಾವಯವ, ಸಮಗ್ರ ಹಾಗೂ ರಾಸಾಯನಿಕ ಉತ್ಪದನಾ ಮೌಲ್ಯಮಾಪನ: ಹತ್ತಿ ಕಾಯಿಕೊರಕದ ಬಾಧೆ ರಸಾಯನಿಕ ಪದ್ಧತಿಗಳಲ್ಲಿ ಕಡಿಮೆ ಇದ್ದು ತದನಂತರ ಸಮಗ್ರ ಹಾಗೂ ಸಾವಯವ ಪದ್ಧತಿಗಳಲ್ಲಿ ಇರುತ್ತದೆ ನೈಸರ್ಗಿಕ ಶತ್ರುಗಳ ಸಂಖ್ಯೆ ಸಾವಯವ ಪದ್ಧತಿಯಲ್ಲಿ ಹೆಚ್ಚಾಗಿತ್ತು. ಅದೇ ತೆರನಾಗಿ ಇತರೆ ಮುಂಗಾರಿ ಬೆಳೆಗಳಾದ ಶೇಂಗಾ, ತೊಗರಿ, ಹೆಸರು ಹಾಗೂ ಹಿಂಗಾರಿ ಬೆಳೆಗಳಾದ ಕುಸುಬೆ, ಹಿಂಗಾರಿ ಜೋಳದಲ್ಲಿ ಕೂಡ ಇದ್ದು ಅದಾಗ್ಯೂ ವಿವಿಧ ಪದ್ಧತಿಗಳಲ್ಲಿ ಕೀಟಗಳ ಬಾಧೆಯಲ್ಲಿ ಅಷ್ಟೊಂದು ವ್ಯತ್ಯಾಸ ಕಂಡುಬರಲಿಲ್ಲ. ಮಣ್ಣಿನಲ್ಲಿರುವ ಜೀವಿಗಳಾದ ಕೊಲೊಂಬೊಲಾ, ಪರಭಕ್ಷಕ ಮೈಟ ನುಶಿ ಕ್ರಿಪ್ಟೊಸ್ಪಿಗಮ್ಯಾಟಡ್ಸಿ, ಪರಭಕ್ಷಕ ಕೀಟಗಳಾದ ಇರುವೆ, ಸ್ಕಾರಬಿಡ್ಸ್, ಕೆರಾಬಿಡ್ಸ್‌ಗಳ ಚಟುವಟಿಕೆ ಹಾಗೂ ಚಟುವಟಿಕೆ ಸಾವಯವ ಉತ್ಪಾದನಾ ವ್ಯವಸ್ಥೆಯಲ್ಲಿ ಹೆಚ್ಚಾಗಿದ್ದು ಕಂಡುಬಂದಿತು.

ಟೊಮ್ಯೊಟೊದಲ್ಲಿ ಕಾಯಿಕೊರಕದ ಜೈವಿಕ ಪೀಡೆನಾಶಕಗಳಿಂದ ಕಾಯಿಕೊರಕ ಹತೋಟಿ: *ಮೆಟರೈಜಿಯಂ ರಿಲೈ* (*ನೊಮೋರಿಯಾ ರಿಲೈ*) @ 2 ಗ್ರಾಂ/ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪರಣೆ ಮಾಡಿರುವ ಉಪಚಾರ ಅತ್ಯುತ್ತಮವಾಗಿದ್ದು ಇದು ಸ್ಪೈನೊಸ್ಯೆಡ್ 45 ಎಸ್. ಸಿ. ಹಾಗೂ ಇಂಡಾಕ್ಸಿ ಕಾರ್ಬ 15 ಇ.ಸಿ. ಗಳಷ್ಟೆ ಪರಿಣಾಮಕಾರಿಯಾಗಿರುತ್ತಾರೆ.

ಬೆಂಡಿಯಲ್ಲಿ ಕೀಟನಾಶಕ ಪ್ರಯೋಗ: ಫಿಪ್ರೋನಿಲ್ 4 % + ಎಸಿಟಾಮಾಪ್ರೀಡ್ 4% ಎಸ್ ಸಿ @ 50 + 50 ಗ್ರಾಂ ಎ. ಐ./ಎಚ್. ಬೆಂಡಿಯಲ್ಲಿ ಬರುವ ರಸಹೀರುವ ಹುಳುಗಳು ಹಾಗೂ ಹೆಲಿಯೋಥಿನ್ ಕಾಯಿಕೊರಕಕ್ಕೆ ಅತ್ಯುತ್ತಮವಾಗಿರುತ್ತದೆ.

3.4.13 ಕೃಷಿ ಸಂಖ್ಯಾಶಾಸ್ತ್ರ

2018–19ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಗೆ ಅತಿ ಹೆಚ್ಚು/ ಅತಿ ಕಡಿಮೆ ಸೂಚ್ಯಂಕಗಳನ್ನು ಬಳಸಿ ಅತಿ ಹೆಚ್ಚಿನ/ಗರಿಷ್ಟ ಮಳೆಯ ಮಾಡೆಲಿಂಗ್–ಮಾಡುವುದು, ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ನೀರಿನ ಆಯವ್ಯಯ ಅಂದಾಜಿಕರಣ, ಕರ್ನಾಟಕ ರಾಜ್ಯದಲ್ಲಿ ತೆಂಗಿನ ಎಣ್ಣೆಯ ಬಗ್ಗೆ ಸಂಖ್ಯಾಶಾಸ್ತ್ರದ ತನಿಖೆ, ಕರ್ನಾಟಕದಲ್ಲಿ ಕೃಷಿ–ಸಾಮಾಜಿಕ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಅಂತರ–ಜಿಲ್ಲೆಗಳ ಭಿನ್ನತೆಗಳು, ತೊಗರಿ ಬೆಳೆಯ ಬೆಲೆಗಾಗಿ ವಿಭಿನ್ನ ಬೆಲೆ ವಿಶ್ಲೇಷಣೆ ಮಾದರಿಗಳಲ್ಲಿನ ದೋಷಗಳ ವಿತರಣೆಯ ಕುರಿತು ಅಧ್ಯಯನ ಮತ್ತು ಸಜ್ಜೆ ಬೆಳೆಯ ಬೆಂಕಿ ರೋಗದಿಂದಾಗುವ ಬೆಳೆಯ ಹಾನಿಯ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ (ಪೈರಿಕುಲೆರಿಯಾ ಗ್ರೀಸಿಯಾ) ಕುರಿತು ಅಧ್ಯಯನ ಮಾಡಲಾಯಿತು.

3.4.14 ಕೃಷಿ ವಿಸ್ತರಣೆ ಮತ್ತು ಶಿಕ್ಷಣ ವಿಭಾಗ

ಸಮಗ್ರ ಕೃಷಿ ವ್ಯವಹಾರ ವಿಸ್ತರಣಾ ಸೇವೆ ಯೋಜನೆ (CABES): 2016–18 ರ ಅವಧಿಯಲ್ಲಿ ನವಲಗುಂದ ತಾಲೂಕಿನ 20 ಗ್ರಾಮ ಪಂಚಾಯತಗಳಲ್ಲಿ **"**ಮಾಹಿತಿ ತಂತ್ರಜ್ಞಾನ**"** (ಐಟಿ) ಬಳಸಿಕೊಂಡು ರೈತರಿಗೆ ಮಾಹಿತಿ ನೀಡಲು ಹಾಗೂ ಮೌಲ್ಯಮಾಪನ ಮಾಡಲು **"**ಸಮಗ್ರ ಕೃಷಿ ವ್ಯವಹಾರ ವಿಸ್ತರಣಾ ಸೇವೆ ಯೋಜನೆ**"** (CABES) ಅಡಿಯಲ್ಲಿ ಸಂಶೋಧನೆಯನ್ನು ಮಾಡಲಾಯಿತು. ಈ ಅಧ್ಯಯನದ ಪ್ರಕಾರ ರೈತರಿಗೆ ತಂತ್ರಜ್ಞಾನ ನೀಡಲು **"**ಮಾಹಿತಿ ತಂತ್ರಜ್ಞಾನ**"** (ಐಟಿ) ಬಳಸಿಕೊಂಡು ಸೇವೆ ಒದಗಿಸಿದಲ್ಲಿ ತಂತ್ರಜ್ಞಾನ ಪ್ರಸಾರ ಹಾಗೂ ಅಳವಡಿಕೆ ಮತ್ತು ಆದಾಯವನ್ನು ಹೆಚ್ಚಿಸಬಹುದೆಂದು ಕಂಡು ಬಂದಿದೆ.

ಕಡಿಮೆ ಬಳಕೆಯಲ್ಲಿರುವ ಎಲೆ ತರಕಾರಿಗಳ ಬಳಸುವ ಕುರಿತು ಧಾರವಾಡ, ಉತ್ತರಕನ್ನಡ, ಬೆಳಗಾವಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸಮೀಕ್ಷೆಯ ಅಧ್ಯಯನ: ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ರಾಜ್ಯದ ಧಾರವಾಡ, ಬೆಳಗಾವಿ, ಉತ್ತರಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಪ್ರತಿ ಜಿಲ್ಲೆಗಳಲ್ಲಿ 100 ಮಹಿಳೆಯರಂತೆ ಒಟ್ಟು 400 ಮಹಿಳೆಯರನ್ನು ಈ ಸಂಶೋಧನೆಗೆ ಮಾದರಿಯಾಗಿ ಆಯ್ಕೆ ಮಾಡಲಾಯಿತು. ಈ ಅಧ್ಯಯನದ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಕಡಿಮೆ ಬಳಕೆಯಲ್ಲಿರುವ 2 ಸೊಪ್ಪಿನ ತರಕಾರಿಗಳು, ಧಾರವಾಡ ಜಿಲ್ಲೆಯಲ್ಲಿ 8 ಸೊಪ್ಪಿನ ತರಕಾರಿಗಳು, ಉತ್ತರಕನ್ನಡದಲ್ಲಿ 2, ಶಿವಮೊಗ್ಗ ಜಿಲ್ಲೆಯಲ್ಲಿ 8 ತರಕಾರಿಗಳು ದಾಖಲಾಗಿವೆ. ಈ ತರಕಾರಿಗಳನ್ನು ಕಚ್ಚಾ ತರಕಾರಿಗಳನ್ನಾಗಿ ಹಾಗೂ ಅಡುಗೆಯಲ್ಲಿ

ಸಾಂಬಾರು, ಚಟ್ನಿ, ತಂಬುಳಿ, ಪಲ್ಯ ಮಾಡಲು ಉಪಯೋಗಿಸುವುದಾಗಿ ತಿಳಿಸಿದ್ದಾರೆ.

ತೋಟದ ಬೆಳೆಗಳಲ್ಲಿ ಕೊಯ್ಲು ನಂತರದ ತಂತ್ರಜ್ಞಾನಗಳ ನಿರ್ವಹಣೆ ಕುರಿತು ರೈತರಲ್ಲಿರುವ ಜ್ಞಾನದ ಮಟ್ಟ: ಪ್ರತಿಶತ 76.83 ಜನ ರೈತರಲ್ಲಿ ಅಡಿಕೆ ಬೆಳೆಯ ಕೊಯ್ಲು ನಂತರದ ತಂತ್ರಜ್ಞಾನದ ಕುರಿತು ಜ್ಞಾನವಿದ್ದು, ಅವುಗಳ ಪೈಕಿ ಪ್ರತಿಶತ 68.83 ಜನರು ಬಳಸುತ್ತಿದ್ದಾರೆ. ರೈತರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವಲ್ಲಿ ಅನುಭವಿಸುವ ಅಡೆತಡೆಗಳೆಂದರೆ ಆನ್‌ಲೈನ್ ಚಾನೆಲ್‌ಗಳ ಬಗ್ಗೆ ಅವರಲ್ಲಿರುವ ಕಡಿಮೆ ವಿಶ್ವಾಸ (90%) ಹಾಗೂ ವಿಜ್ಞಾನಿಗಳ ಜೊತೆಗೆ ಹೊಂದಿರುವ ಕಡಿಮೆ ಸಂಪರ್ಕ (86%).

3.4.15 ಕೃಷಿ ವ್ಯಾಪಾರ ವಿಭಾಗ

ಉತ್ತರ ಕರ್ನಾಟಕದ ಸಾವಯವ ಬೆಲ್ಲದ ಸರಬರಾಜು ಸರಪಳಿ ವಿಶ್ಲೇಷಣೆ: ಈ ಅಧ್ಯಯನವನ್ನು ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ನಡೆಸಲಾಯಿತು. ಸಾವಯವ ಬೆಲ್ಲದ ಉತ್ಪಾದನಾ ಕ್ಷೇತ್ರ ಪ್ರತಿ ವರ್ಷ ಹೆಚ್ಚಾಗುತ್ತಿದೆ. ಸಾವಯವ ಬೆಲ್ಲವನ್ನು ಉತ್ಪಾದಕರಿಂದ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಚಾನಲ್‌ನಲ್ಲಿ ಬೆಲೆ ಹರಡುವಿಕೆ ಕಡಿಮೆ ಇತ್ತು. ಆರೋಗ್ಯಕರ ವಾತಾವರಣದಲ್ಲಿ ಉತ್ಪಾದಿಸಲಾಗಿರುವ ಕಾರಣ ಗ್ರಾಹಕರು ಅಧ್ಯಯನ ಪ್ರದೇಶದಲ್ಲಿ ಸಾವಯವ ಕೃಷಿ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಮುಖ್ಯ ಕಾರಣವಾಗಿದೆ.

ಕರ್ನಾಟಕದ ಪ್ರಮುಖ ಕೃಷಿ ಉತ್ಪನ್ನಗಳ ನೈರ್ಮಲ್ಯ ಮತ್ತು ಫೈಟೊಸಾನಿಟರಿ (ಎಸ್.ಪಿ.ಎಸ್.) ಅನುಸರಣೆ: ಈರುಳ್ಳಿ ಮತ್ತು ಅರಿಶಿಣದ ಒಂದು ಅಧ್ಯಯನ: ನೂರಕ್ಕೆ ನೂರು ರೈತರು ಶಿಫಾರಸ್ಸು ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಿದ್ದಾರೆ. ಅರಿಶಿಣ (92%) ಮತ್ತು ಈರುಳ್ಳಿ (78%) ಯಲ್ಲಿ ಥ್ರಿಪ್ ನುಸಿ ಪ್ರಮುಖ ಪೀಡೆಯಾಗಿದೆ. ಮೆಂಕೊಜೆಬ್ (83%) ಹಾಗೂ ಪಾಸ್ಫಾಮಿಡಾನ್ (81%) ಗಳು ಪ್ರಮುಖ ಪೀಡೆನಾಶಕಗಳಾಗಿವೆ. ಅರಿಶಿಣ (95%) ಮತ್ತು ಈರುಳ್ಳಿ (98%) ಗಳೆರಡರಲ್ಲೂ ಹೆಚ್ಚಿನ ಪ್ರಮಾಣದ ರೈತರು ಕೂಲಿ ಆಳುಗಳನ್ನು ಬಳಸಿ ಕಟಾವು ಮಾಡಿರುತ್ತಾರೆ. ಉಳಿದವರು ಯಂತ್ರೋಪಕರಣಗಳ ಮುಖಾಂತರ ಕಟಾವು ಮಾಡಿರುತ್ತಾರೆ. ರೈತರು ಉತ್ತಮ ಕೃಷಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮೂಲಕ ಹೆಚ್ಚಿನ ಪ್ರಮಾಣದ ಪೀಡೆನಾಶಕಗಳನ್ನು ಬಳಸದಂತೆ ಅವರನ್ನು ಪ್ರೇರೇಪಿಸುವದು ಅತೀ ಅವಶ್ಯಕವಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನು ಮಾರಾಟದ ಆರ್ಥಿಕ ಸಂಭಾವ್ಯತೆ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಾದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳ ಸಂಗ್ರಹಣಾ ಕೇಂದ್ರ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಅಧ್ಯಯನದ ಪ್ರಕಾರ ಪಾಮ್‌ಫ್ರೆಟ್, ಸರ್ಡಿನೆ, ಮ್ಯಾಕೆರಿಯಲ್ ಮತ್ತು ಅಂಕೋವಿ ಜಾತಿಯ ಮೀನುಗಳು ಪ್ರಮುಖವಾಗಿ ಕಂಡುಬರುತ್ತಿದ್ದು ಬಹುತೇಕ ಮೀನುಗಾರರಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ದೊರೆಯುತ್ತಿರುವಂತಹ ಯೋಜನೆಗಳು ಮತ್ತು ಅಭಿವೃದ್ಧಿಯ ಕಾರ್ಯಕ್ರಮಗಳ ಕುರಿತು ಮಾಹಿತಿ ಮತ್ತು ಅರಿವು ಇರುತ್ತದೆ. ಮೀನುಗಾರರು ಸಂಗ್ರಹಣೆ, ಸಂಸ್ಕರಣೆ, ವ್ಯಾಪಾರ ಮತ್ತು ವ್ಯವಹಾರ ಅವಧಿಗಳಲ್ಲಿ ಬಹಳಷ್ಟು ಸಮಸ್ಯೆ ಅನುಭವಿಸುತ್ತಿರುವುದು ಕಂಡು ಬಂದಿರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಮುದ್ರಾ ಯೋಜನೆಯ ಕಾರ್ಯ ನಿರ್ವಹಣೆ: ಧಾರವಾಡ ಜಿಲ್ಲೆಯಲ್ಲಿ ಮುದ್ರಾ ಶಿಶು ಸಾಲದ ಪಾಲು ಅತ್ಯಧಿಕವಾಗಿತ್ತು. ಇದು ರಾಜ್ಯದ ಒಟ್ಟಾರೆ ಚಿತ್ರಣಕ್ಕನುಗುಣವಾಗಿತ್ತು. ಜಿಲ್ಲೆಯಲ್ಲಿ ರಾಜ್ಯದ ಒಟ್ಟು ಮುದ್ರಾ ಖಾತೆಗಳ ಶೇ. 3.33 ರಷ್ಟು ಹಾಗೂ ಮುಂಗಡದ ಶೇ. 3.11 ರಷ್ಟು ಇತ್ತು. ಜಿಲ್ಲೆಯ ಒಟ್ಟು ಮುದ್ರಾ ಖಾತೆಗಳಲ್ಲಿ ಮಹಿಳಾ ಸಾಲಗಾರರು ಶೇ.79.00 ರಷ್ಟನ್ನು ಹೊಂದಿದ್ದರೆ, ಪುರುಷರು ಕೇವಲ ಶೇ.21.00 ರಷ್ಟು ಖಾತೆಗಳನ್ನು ಹೊಂದಿದ್ದಾರೆ. ಆದಾಗ್ಯೂ, ಒಟ್ಟು ಮುದ್ರಾ ಮುಂಗಡದ ದೃಷ್ಟಿಯಿಂದ ಶೇ. 57 ರಷ್ಟು ಸಾಲವನ್ನು ಪುರುಷರು ಪಡೆದಿದ್ದರೆ ಶೇ.43 ರಷ್ಟನ್ನು ಮಾತ್ರ ಮಹಿಳೆಯರು ಪಡೆದಿದ್ದಾರೆ.

3.4.16 ಪಶು ವಿಜ್ಞಾನ

ಕರುಗಳಲ್ಲಿ ಕಾಲಿನ ಫ್ಲೆಕ್ಸಾರ ಸ್ನಾಯುಗಳ ಸಂಕುಚಿತಗೊಳ್ಳುವಿಕೆಯಿಂದಾಗುವ ಫೆಟ್ಲಾಕ್ ಕೀಲುಗಳ ಮಡಚುವಿಕೆಗೆ ಶಸ್ತ್ರಚಿಕಿತ್ಸಾ ವಿಧಾನ: ಈ ಸ್ಥಿತಿಯು ನವಜಾತ ಕರುಗಳಲ್ಲಿ ಕಂಡುಬರುವ ಅಟ್ರೆಸಿಯಾ ಆನೈ ಮತ್ತು ಹೊಕ್ಕಳ ಹರ್ನಿಯಾ ನಂತರ ಹೆಚ್ಚು ಪ್ರಚಲಿತದಲ್ಲಿರುವ ಅಸಹಜ ಜನ್ಮಜಾತ ದೋಷವಾಗಿದೆ. ಇದು ಹೆಚ್ಚಾಗಿ ಮಿಶ್ರತಳಿಯ ಮರಿಗಳಲ್ಲಿ, ಗಂಡು ಕರುಗಳಲ್ಲಿ ಮುಂದಿನ ಕಾಲುಗಳಲ್ಲಿ ಕಂಡುಬರುತ್ತದೆ. ಇದು ಜನ್ಮಜಾತ ದೋಷವಾಗಿದ್ದು ಮುಂದಿನ ಪೀಳಿಗೆಗೆ ಹರಡುವುದಿಲ್ಲವಾದ್ದರಿಂದ ಚಿಕಿತ್ಸೆ ಮಾಡಿಸಬೇಕು. ನುರಿತ ಪಶುವೈದ್ಯರು 'Z ಆಕಾರದಲ್ಲಿ' – ಟಿನಾಟೊಮಿ ಶಸ್ತ್ರಚಿಕಿತ್ಸಾ ವಿಧಾನದ ಮೂಲಕ ಫ್ಲೆಕ್ಸಾರ ಸ್ನಾಯುಗಳನ್ನು ಹಿಗ್ಗಿಸಿ, ಕಾಲುಗಳನ್ನು ನೇರವಾಗಿಸಿ, ನಂತರ ಪ್ಲಾಸ್ಟರ್ ಕಟ್ಟನ್ನು 20 ದಿನಗಳವರೆಗೆ ಹಾಕಿ ಕರುಗಳನ್ನು ಗುಣಪಡಿಸುತ್ತಾರೆ. ಈಗ ಅತೀ ಸರಳವಾದ ಶಸ್ತ್ರಚಿಕಿತ್ಸಾ ವಿಧಾನದ (ಕಾಲಿನ ಚರ್ಮದ ಮೇಲ್ಮೈ ಮೇಲೆ ಮಾಡಿದ ಸಣ್ಣ ರಂದ್ರಗಳ ಮುಖಾಂತರ 'V–ಆಕಾರದಲ್ಲಿ' ಒಂದಕ್ಕಿಂತ ಹೆಚ್ಚು ಭಾಗಶಃ ಟಿನಾಟೊಮಿ ಶಸ್ತ್ರಚಿಕಿತ್ಸೆ ಮೂಲಕ ಫ್ಲೆಕ್ಸಾರ ಸ್ನಾಯುಗಳನ್ನು ಹಿಗ್ಗಿಸಿ, ಕಾಲುಗಳನ್ನು ನೇರವಾಗಿಸಿ, ನಂತರ ಪ್ಲಾಸ್ಟರ್ ಕಟ್ಟನ್ನು 20 ದಿನಗಳವರೆಗೆ ಹಾಕುವುದು) ಮೂಲಕ ಇಂತಹ ಕರುಗಳನ್ನು ಗುಣಮುಖವಾಗಿಸಿ ಯಾವುದೇ ತೊಂದರೆ ಇಲ್ಲದೆ ರೈತರು ಹೊಲದ ಕೆಲಸಕಾರ್ಯಗಳಿಗಾಗಿ ಉಪಯೋಗಿಸಕೊಳ್ಳಬಹುದು. ಇದರಿಂದ ರೈತರಿಗೆ ಆರ್ಥಿಕ ನಷ್ಟವಾಗುವುದಿಲ್ಲ.

ಶ್ವಾನಗಳಲ್ಲಿ ಚಪ್ಪೆ ಕೀಲು ಸ್ಥಳಾಂತರಗೊಂಡಿದ್ದಕ್ಕೆ "ಟ್ರಾನ್ಸ್ – ಆರ್ಟಿಕುಲಾರ ನೈಲಾನ್ ವೈರಿಂಗ್" ಶಸ್ತ್ರಚಿಕಿತ್ಸಾ ವಿಧಾನ: ಚಪ್ಪೆ ಕೀಲನ್ನು ಶಸ್ತ್ರಚಿಕಿತ್ಸೆ

ಮುಖಾಂತರ ಸ್ಥಿರಗೊಳಿಸುವುದು. ಮೀನು ಹಿಡಿಯಲು ಬಳಸುವ ನೈಲಾನ್ ದಾರದಿಂದ ಟ್ರಾನ್ಸ್ – ಆರ್ಬಿಕುಲಾರ ನೈಲಾನ್ ವೈರಿಂಗ್ (ಟ್ರೊಕ್ಯಾಂಟರ್ ಟರ್ಮಯಸ್– ಫೀಮರ್ ಹೆಡ – ಫೊವಿಯಾ ಕ್ಯಾಪಿಟಿಸ್– ಅಸಿಟಾಬುಲಮ್) ಶಸ್ತ್ರಚಿಕಿತ್ಸಾ ವಿಧಾನವು ಚಪ್ಪೆ ಕೀಲಿಗೆ ಅತ್ಯುತ್ತಮ ಸ್ಥಿರತೆ ಮತ್ತು ಹೆಚ್ಚಿನ ಭದ್ರತೆಯನ್ನು ಒದಗಿಸುತ್ತದೆ. ಈ ಶಸ್ತ್ರಚಿಕಿತ್ಸೆಯ ನಂತರ ಶ್ವಾನಗಳು ಕಡಿಮೆ ಸಮಯದಲ್ಲಿ ಅತ್ಯುತ್ತಮವಾಗಿ ಕಾಲಿನ ಮೇಲೆ ದೇಹದ ಭಾರವನ್ನು ಹಾಕಬಹುದು. ಇದೊಂದು ಸರಳವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ತಂತ್ರಜ್ಞಾನವಾಗಿದ್ದು ಪಶುವೈದ್ಯರು ಇದನ್ನು ಅಳವಡಿಸಿಕೊಳ್ಳಬಹುದು.

ಹೈನು ಆಕಳು ಮತ್ತು ಎಮ್ಮೆಗಳಲ್ಲಿ ಹಾಲಿನ ಮತ್ತು ಹಾಲಿನ ಘಟಕಗಳ ಉತ್ಪಾದನೆಯನ್ನು ಉತ್ತಮಗೊಳಿಸಲು ಪಶು ಆಹಾರದಲ್ಲಿ ಪೊಟ್ಯಾಶಿಯಮ್ ಕಾರ್ಬೊನೇಟ್ ಬಳಕೆ: ಪೊಟ್ಯಾಶಿಯಮ್ ಬಫರ್ ನೀಡಿದಾಗ ಮೊದಲ 90 ದಿನಗಳ ಹಾಲು ಹಿಂಡುವ ಅವಧಿಯಲ್ಲಿ ಮಿಶ್ರತಳಿ ಆಕಳುಗಳಲ್ಲಿ 1.3 ರಿಂದ 1.4 ಲೀಟರ್ ಮತ್ತು ಮುರ್ರಾ ಎಮ್ಮೆಗಳಲ್ಲಿ 1 ಲೀಟರ್‌ನಷ್ಟು ಹಾಲು ಹೆಚ್ಚಾಗಿದ್ದು ಕಂಡುಬಂದಿದೆ. ಮಿಶ್ರ ತಳಿ ಆಕಳುಗಳಲ್ಲಿ ದಿನಕ್ಕೆ 80 ಗ್ರಾಂ ನಷ್ಟು ಪೊಟ್ಯಾಶಿಯಮ್ ಕಾರ್ಬೊನೇಟ್ ಪೂರೈಸಿದಾಗ ಹೆಚ್ಚಾದ ಹಾಲಿನ ಇಳುವರಿಯಿಂದ ಒಂದು ಹಸುವಿಗೆ ರೂ. 3000/– ದಷ್ಟು ಆದಾಯ ಹೆಚ್ಚಾಗಿರುವುದು ಕಂಡು ಬಂದಿರುತ್ತದೆ.

ಮಣಕಗಳ ಆಹಾರದಲ್ಲಿ ಪ್ರೋಟೀನ್ ಅಲ್ಲದ ಸಾರಜನಕ (ಎನ್.ಪಿ.ಎನ್.)ದ ಮೂಲವಾಗಿ ಬೇವುಲೇಪಿತ ಯೂರಿಯ ಬಳಕೆ: ಶೇಕಡಾ 1 ಮತ್ತು 2 ರಷ್ಟು ಬೇವುಲೇಪಿತ ಯೂರಿಯವನ್ನು ಜೋಳದ ಒಣ ಹುಲ್ಲಿಗೆ ಸಿಂಪಡಿಸಿದಾಗ ಮಣಕಗಳ ಆಹಾರ ಸೇವನೆಯಲ್ಲಿ ಯಾವುದೇ ರೀತಿಯ ಪರಿಣಾಮ ಬೀರಲಿಲ್ಲ. ಶೇಕಡಾ 2 ರಷ್ಟು ಬೇವು ಲೇಪಿತ ಯೂರಿಯವನ್ನು ಜೋಳದ ಒಣ ಹುಲ್ಲಿಗೆ ಸಿಂಪಡಿಸಿದಾಗ ಮಣಕಗಳ ಆಹಾರ ಜೀರ್ಣತೆ 3.5 ಘಟಕಗಳಷ್ಟು ಹೆಚ್ಚಾಯಿತು. ಈ ಮಣಕಗಳ ದೇಹತೂಕವು ಬೇರೆಲ್ಲ ಮಣಕಗಳಿಗಿಂತ ಹೆಚ್ಚಾಯಿತು. ಬೇವುಲೇಪಿತ ಯೂರಿಯವನ್ನು ಒಣ ಮೇವಿನ ಪೌಷ್ಟೀಕರಣಕ್ಕಾಗಿ ರುಚಿಕರತೆ ಮತ್ತು ಆಹಾರ ಸೇವನೆಯ ಮೇಲೆ ಯಾವುದೇ ಪರಿಣಾಮವಿಲ್ಲದೆ ಬಳಸಬಹುದಾಗಿದೆ.

3.4.17 ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ವಿಭಾಗ

ಪಾರೇಷ್ಟ್ರಿ ಕ್ಲಾಸಿಫಿಕೇಷನ್ ಎಂಡ ಬೈಯೋಪಿಕಲ್ ಪ್ಯಾರಾಮೀಟರ್ ರಿಬ್ರಿವಲ್ ಯುಸಿಂಗ್ ಮಲ್ಟಿ ಡ್ರಿಕ್ಟೆನ್ಸಿ ಪೊಲ್ಸಾರ ಟೆಕನಿಕ್: ಈ ಅರೆಕಾಲಿಕ ಯೋಜನೆಯನ್ನು ದೂರ ಸಂವೇಧಿ ALOS -2, PALSAR, SAR data ಉಪಯೋಗಿಸಿ ಜೋಯಿಡಾ ತಾಲೂಕಿನಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಮೊದಲು ಅರಣ್ಯ ಪ್ರದೇಶವನ್ನು ಬೇಟಿಮಾಡಿ ಅರಣ್ಯ ಗಿಡಗಳ ಬೆಳವಣಿಗೆಗೆ ಮಾಹಿತಿಯನ್ನು ಕಂಪ್ಯೂಟರ್ ಸಹಾಯದಿಂದ SNAP, RAT, ENVI, ERDAS ಹಾಗೂ Arc GIS ಸಾಪ್ಟವೇರ ಮೂಲಕ ದೂರ ಸಂವೇಧಿ ನಕ್ಷೆ ಬಳಸಿ ಜೊಯಿಡಾ ತಾಲೂಕಿನಲ್ಲಿರುವ ಅರಣ್ಯ ವರ್ಗೀಕರಣ ಭೂಮಿ ಉಪಯೋಗದ ವರ್ಗಿಕರಣ ಮಾಡಲಾಯಿತು. SAR data ವನ್ನು ಭೂಮಿ ವರ್ಗೀಕರಣಕ್ಕಾಗಿ ಸಿಗ್ನಾನಾಟನ್ನು ಬಳಸಿ ವರ್ಗೀಕರಿಸಲಾಗಿ, ಸಂಶೋಧನಾ ಫಲಿತಾಂಶವು 44.66% ರಷ್ಟು, ದಟ್ಟಕಾಡಿದೆ ಎಂದು ಕಂಡುಬಂದಿದೆ. ನೀರಿನ ಕ್ಷೇತ್ರವು 14.55%, ತೆರೆದ ಅರಣ್ಯವು 14.55% ಮತ್ತು ಸಾದಾರಣ ದಟ್ಟ ಅರಣ್ಯವು 12.4% ಪ್ರತಿಶತದಷ್ಟಿದೆ ಎಂದು ಕಂಡು ಬಂದಿದೆ. ಈ ವರ್ಗೀಕರಣವು ಸರಾಸರಿ ಪ್ರತಿಶತ 80 ರಷ್ಟು ಸರಿ ಇದೆ ಎಂದು ಕಂಡುಬಂದಿದೆ.

ಅಸೆಸ್ಮಂಟ್ ಎಂಡ್ ಮ್ಯಾಪಿಂಗ್ ಆಪ್ ಡಿಗ್ರೆಡೆಷನ್ ಎಂಡ ಡಿಪಾರೇಷತಥನ್ ಇನ್ ಡ್ರ್ಯಾ ಎಂಡ ಮೊಯಿಸ್ಟ್ ಡೆಸಿಡ್ಯುಯಸ್ ಪಾರೇಷ್ಟ್ರಿ ಆಫ್ ಉತ್ತರ ಕನ್ನಡ ಡಿಸ್ಟ್ರಿಕ್ಟ್: ಫಲಿತಾಂಶದ ಪ್ರಕಾರ ಉದ್ದಅಗಲವು 451.234 ರಿಂದ 21.214 ಮೀ^{3}/ಹೆ ಹಳಿಯಾಳ ತಾಲೂಕಿನಲ್ಲಿ ಹಾಗೂ 103.437 ರಿಂದ 8.258 ಮೀ./ಹೆ ಯಲ್ಲಾಪುರ ತಾಲೂಕಿನಲ್ಲಿ ಇರುವುದು ಕಂಡುಬಂದಿದೆ. ಇದನ್ನು ಆದರಿಸಿ ದೂರಸಂವೇದಿ ಇಮೇಜಿನ ಸಹಾಯದಿಂದ ತಯಾರಿಸಿದ ನಕ್ಷೆ ಪ್ರಕಾರ ಒಟ್ಟು ಬಯೋಮಾಸ್ ಕಂಡು ಹಿಡಿಯಲಾಗಿ ಹಳಿಯಾಳ ತಾಲೂಕಿನಲ್ಲಿ 12.48 ಕ್ಯೂಬಿಕ್ ಮೀ. ಮತ್ತು 7.49 ಮೀ. ಟನ್ಸ್ ಇರುವುದು ಕಂಡುಬಂದಿದೆ. ಹಾಗೆಯೆ ಯಲ್ಲಾಪುರ ತಾಲೂಕಿನಲ್ಲಿ ಈ ಸಂಖ್ಯೆ 37.8 ಕ್ಯೂಬಿಕ ಮೀ. ಮತ್ತು 22.71 ಮೀ. ಟನ್ಸ್ ಎಂದು ಕಂಡುಬಂದಿದೆ. ಸರಾಸರಿ ಇಂಗಾಲದ ಕ್ರೋಢಿಕರಣವು ಹಳಿಯಾಳ ಅರಣ್ಯ ಪ್ರದೇಶದಲ್ಲಿ 97.68 ಟನ್ ಹಾಗೂ ಯಲ್ಲಾಪುರ ಅರಣ್ಯ ಪ್ರದೇಶದಲ್ಲಿ 127.12 ಟನ್ ಪ್ರತಿ ಹೆಕ್ಟೆರಿಗೆ ಇರುವುದು ಕಂಡುಬಂದಿದೆ.

ರಬ್ಬರ್ ಬೆಳೆಯಲ್ಲಿ ನೀರು ಸಂರಕ್ಷಣೆ ರಚನೆಗಳು ಮತ್ತು ಪೋಷಕಾಂಶಗಳ ನಿರ್ವಹಣೆಯ ಮಹತ್ವ: ನಾಲ್ಕು ವರ್ಷ ರಬ್ಬರ್ ಬೆಳೆಯಲ್ಲಿ ವಿವಿಧ ನೀರು ಸಂರಕ್ಷಣೆಯ ರಚನೆಗಳನ್ನು ಅಳವಡಿಸಿದಾಗ, ಬೆಸಿನ ಪದ್ಧತಿ ಅರ್ಧ ರಿಂಗ ಪದ್ಧತಿಯಲ್ಲಿ ರಬ್ಬರ ಬೆಳವಣಿಗೆ ಉತ್ತಮವಾಗಿದ್ದು ಕಂಡುಬಂದಿದೆ. ಅಲ್ಲದೆ 150:150:75 ಸಾರಜನಕ, ರಂಜಕ ಮತ್ತು ಪೋಟ್ಯಾಶಿಯಂಗಳನ್ನು ಕೊಡುವುದು ಸೂಕ್ತವೆಂದು ಕಂಡುಬಂದಿದೆ.

3.4.18 ಅರಣ್ಯ ಉತ್ಪನ್ನ ಮತ್ತು ಉಪಯೋಗ ವಿಭಾಗ

ಜೈವಿಕ ಇಂಧನ ಸಂಶೋಧನೆಯ ಮೂಲಕ ಜೈವಿಕ ಇಂಧನಗಳ ಜನಪ್ರಿಯತೆಯನ್ನು ಹೆಚ್ಚಿಸುವ ಮಾಹಿತಿ ಮತ್ತು ಪ್ರದರ್ಶನ ಯೋಜನೆ: ಈ ಅಧ್ಯಯನದ ಆರಂಭಿಕ ಪರೀಕ್ಷೆಗಳ ಪ್ರಕಾರ ದೇವಸ್ಥಾನಗಳ ತ್ಯಾಜ್ಯ ಅಥವಾ ಉಪಯೋಗಿಸಿದ ಎಣ್ಣೆಯನ್ನು ಬಳಸಿ ತಯಾರಿಸಿದ ಜೈವಿಕ ಇಂಧನವು ಎಎಸ್‌ಟಿಎಮ್ ನಿಗದಿಪಡಿಸಿದ ಅಂತರ ರಾಷ್ಟ್ರೀಯ ಪ್ರಮಾಣತೆಗೆ ಅನುಗುಣವಾಗಿದೆ.

ಕರ್ನಾಟಕ ರಾಜ್ಯದ ಸಿದ್ಧಿ ಜನಾಂಗದಲ್ಲಿ ಪೋಷಕಾಂಶಗಳ ಸ್ಥಿತಿಯ ಕುರಿತು ಮತ್ತು ಆರೋಗ್ಯ ಸಂಬಂಧಿತ ನಡವಳಿಕೆಗಳ ಕುರಿತಾದ ಮೌಲ್ಯಮಾಪಕ

ಅಧ್ಯಯನ: ಸಿದ್ಧಿ ಜನಾಂಗದ ಜನರಲ್ಲಿ ಎಲ್ಲಾ ವಯೋಮಾನದವರಲ್ಲೂ (89%) ಹಿಮೋಗ್ಲೋಬಿನ್ ಅಂಶವು ಕಡಿಮೆ ಮಟ್ಟದಲ್ಲಿದೆ. ಹದಿಹರೆಯದ 54 ಸಿದ್ಧಿ ಜನರಲ್ಲಿ ಹಿಮೋಗ್ಲೋಬಿನ್ ಅಂಶವು 8–11 ಗ್ರಾಂ/100 ಮಿ.ಲೀ ಇದ್ದು ಅವರು ರಕ್ತಹೀನತೆಯನ್ನು ಹೊಂದಿದ್ದಾರೆ ಮತ್ತು 4 ಜನರಲ್ಲಿ ರಕ್ತಹೀನತೆಯು ಅಪಾಯಕಾರಿ ಮಟ್ಟದಲ್ಲಿದೆ. 98 ಸಿದ್ಧಿ ಮಹಿಳೆಯರಲ್ಲಿ ಹಿಮೋಗ್ಲೋಬಿನ್ ಅಂಶವು ಕಡಿಮೆಯಿದ್ದು ಅವರುಗಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಸಿದ್ಧಿ ಮಹಿಳೆಯರಲ್ಲಿ ಸಣ್ಣ ವಯಸ್ಸಿನಲ್ಲಿ ತಾಯಿಯಾದವರು 4 ರಿಂದ 5 ಮಕ್ಕಳನ್ನು ಹೆತ್ತಿದ್ದು ಅವರುಗಳು ಕೂಡ ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂಬುದು ಕಂಡುಬಂದಿದೆ.

3.4.19 ಮರ ಸಾಕಣೆ ಮತ್ತು ಅರಣ್ಯ ಕೃಷಿ ವಿಭಾಗ

ಬೇವಿನ ಪ್ರಾಂತೀಯ ಪ್ರಯೋಗದಲ್ಲಿ ರಾಯಚೂರು (15.29 ಮೀ), ವಿಜಯಪುರ (14.78 ಮೀ), ಮತ್ತು ಬಾಗಲಕೋಟ (14.78 ಮೀ.) ತಳಿಗಳ ಬೆಳವಣಿಗೆಯು ಉಳಿದ ತಳಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ರಾಯಚೂರು (2.45 ಕಿ.ಗ್ರಾಂ/ಗಿಡ) ಹಾಗೂ ವಿಜಯಪುರ (2.15 ಕಿ.ಗ್ರಾಂ /ಗಿಡ) ಪ್ರಾಂತ್ಯದ ತಳಿಗಳಲ್ಲಿ ಧಾರವಾಡ (1.16 ಕಿ.ಗ್ರಾಂ) ಬೀಜದ ಇಳುವರಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ.

ಹುಣಿಸೆಯ ಪ್ರಾಂತೀಯ ಪ್ರಯೋಗದಲ್ಲಿ ಹದಿನಾಲ್ಕು ತಳಿಗಳ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಲಾಯಿತು. ಈ ಪ್ರಯೋಗದಲ್ಲಿ NTI-80 (9.05 ಮೀ) ಮತ್ತು NTI-5 (8.25 ಮೀ) ತಳಿಗಳ ಬೆಳವಣಿಗೆಯು ಇತರೆ ತಳಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ ಅಲ್ಲದೇ NTI-14 (24.25 ಸೆ.ಮೀ.) ಹಾಗೂ NTI-77 (23.55 ಸೆ.ಮೀ.) ತಳಿಗಳು ಹೆಚ್ಚಿನ ಡಿಬಿಹೆಚ್‌ನ್ನು ಹೊಂದಿರುವುದು ಕಂಡುಬಂದಿದೆ. ಅತೀ ಹೆಚ್ಚು ಹುಣಸೆ ಹಣ್ಣಿನ ಇಳುವರಿಯು ಇತರೆ ತಳಿಗಳಿಗಿಂತ NTI (133.67 ಕೆ ಜಿ/ಗಿಡ) ನಂತರ SMG-13 (31.53 ಕಿ.ಗ್ರಾಂ /ಗಿಡ) ಹಾಗೂ NTI-31 (29.73 ಕೆಜಿ/ಗಿಡ) ತಳಿಗಳಲ್ಲಿ ಕಂಡುಬಂದಿದೆ.

ಸೀಮಾರುಬಾ ಕೃಷಿ ಅರಣ್ಯ ಪದ್ಧತಿಯಲ್ಲಿ, ಗಿಡದ ಎತ್ತರವು 5 x 3 ಮೀ ಅಂತರದಲ್ಲಿ ಹೆಚ್ಚಾಗಿರುವುದು ಕಂಡುಬಂದಿದೆ. ಅಲ್ಲದೇ ಕಾಳಿ ಹಾಗೂ ಗೌರಿ ಸೀಮಾರೂಬ ತಳಿಗಳ ಬೀಜದ ಇಳಿವರಿಯು 5 x 5 ಮೀ ಅಂತರದಲ್ಲಿ (1.85 ಕಿ.ಗ್ರಾಂ/ಗಿಡ) 5X3 ಮೀ ಅಂತರ (1.66 ಕಿ.ಗ್ರಾಂ/ಗಿಡ) ಕ್ಕಿಂತ ಹೆಚ್ಚಾಗಿರುವದು ಕಂಡುಬಂದಿದೆ.

ಅರಣ್ಯ–ತೋಟಗಾರಿಕಾ ಪದ್ಧತಿಯಲ್ಲಿ ಹತ್ತು ಹುಣಸೆ ತಳಿಗಳನ್ನು ವಿಶ್ಲೇಷಣೆ ಮಾಡಲಾಯಿತು. ಇವುಗಳಲ್ಲಿ ಹುಣಸೆ ತಳಿಗಳಾದ V-2 (11.30 ಮೀ), PKM-2 (10.15 ಮೀ) ಬೆಳವಣಿಗೆಯು ಇತರೆ ತಳಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಅತೀ ಹೆಚ್ಚು ಹುಣಸೆ ಹಣ್ಣಿನ ಇಳುವರಿಯು S-201 (7.10 ಕಿ.ಗ್ರಾಂ/ಗಿಡ) ಹಾಗೂ V-2 (6.20 ಕಿ.ಗ್ರಾಂ/ಗಿಡ) ತಳಿಗಳಲ್ಲಿ ಕಂಡುಬಂದಿದೆ.

ಬೇವು ಆಧಾರಿತ ಕೃಷಿ ಅರಣ್ಯ ಬೇಸಾಯ ಪದ್ಧತಿಯಲ್ಲಿ ಎತ್ತರ ಮತ್ತು ಡಿಬಿಎಚ್ ವಿಜಯಪೂರ (7.96 ಮೀ, 22.56 ಸೆ.ಮಿ) ಹಾಗೂ ಗುಲಬರ್ಗ (7.28 ಮೀ, 21.84 ಸೆ.ಮಿ) ಪ್ರಾಂತ್ಯದ ತಳಿಗಳ ಬೆಳವಣಿಗೆಯು ಉಳಿದ ತಳಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಸೋಯಾ ಅವರೆ ಹಾಗೂ ಕುಸುಬೆ ಇಳುವರಿಯು ಬರೀ ಬೆಳೆಗಳನ್ನಷ್ಟೇ ಬೆಳೆದಾಗ ಹೆಚ್ಚಾಗಿರುವುದು ಕಂಡುಬಂದಿದೆ. ಅಲ್ಲದೇ ಸೋಯಾ ಅವರೆ (56.8 ಕಿ.ಗ್ರಾಂ/ಹೆ) ಮತ್ತು ಹೊಟ್ಟು (61.8 ಕಿ.ಗ್ರಾಂ/ಹೆ) ಇಳುವರಿಯು ವಿಜಯಪೂರ ಪ್ರಾಂತ್ಯದ ಬೇವಿನ ತಳಿಗಳ ಜೊತೆಗೆ ಬೆಳೆದಾಗ ಧಾರವಾಡ ಪ್ರಾಂತ್ಯದ ಬೇವಿನ (52.23 ಕಿ.ಗ್ರಾಂ ಹಾಗೂ 54.21 ಕಿ.ಗ್ರಾಂ ಅನು ಕ್ರಮವಾಗಿ) ತಳಿಗಳಿಗಿಂತ ಉತ್ತಮವಾಗಿರುವುದು ಕಂಡುಬಂದಿದೆ.

ಹೊಂಗೆಯ ಪ್ರಾಂತೀಯ ಪ್ರಯೋಗದಲ್ಲಿ MTP-I (7.46 ಮೀ) ಹಾಗೂ MTP-II (7.12 ಮೀ) ತಳಿಗಳಲ್ಲಿ ಗರಿಷ್ಠ ಎತ್ತರ ಹಾಗೂ ಸುತ್ತಳತೆಯನ್ನು ಗಮನಿಸಲಾಯಿತು. ಅತೀ ಹೆಚ್ಚು ಹೊಂಗೆ ಬೀಜದ ಇಳುವರಿಯು ಇತರೆ ತಳಿಗಳಿಗಿಂತ RAK-22 (3.15 ಕಿ.ಗ್ರಾಂ/ಗಿಡ), MTP-II (2.85 ಕಿ.ಗ್ರಾಂ /ಗಿಡ) ತಳಿಗಳಲ್ಲಿ ಇದ್ದು ಧಾರವಾಡ (2.37 ಕಿ.ಗ್ರಾಂ/ಗಿಡ) ತಳಿಗಿಂತ ಹೆಚ್ಚಾಗಿರುವುದು ಕಂಡು ಬಂದಿದೆ.

ಚಿಕ್ಕು+ದಿಮ್ಮೆ ಆಧಾರಿತ ಕೃಷಿ ಅರಣ್ಯ ಪದ್ಧತಿಯ ಪ್ರಯೋಗದಲ್ಲಿ ಹೊನ್ನೆ ಗಿಡದ ಬೆಳವಣಿಗೆಯು (12.25 ಮೀ ಎತ್ತರ ಹಾಗೂ 34.25 ಸೆಂ.ಮೀ ಡಿಬಿಎಚ್) ಇತರೆ ಗಿಡಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಚಿಕ್ಕು ಗಿಡದ ಎತ್ತರವು ಗಣನೀಯವಾಗಿ ಚಿಕ್ಕು+ನಂದಿ (5.15 ಮೀ) ಹಾಗೂ ಚಿಕ್ಕು+ಹೊನ್ನೆ (4.95 ಮೀ) ಗಿಡಗಳ ಜೊತೆಗೆ ಉತ್ತಮವಾಗಿರುವುದು ಗಮನಿಸಲಾಗಿದೆ. ಚಿಕ್ಕು ಹಣ್ಣಿನ ಇಳುವರಿಯು ಬರೀ ಚಿಕ್ಕುಗಿಡಗಳನ್ನು ಅಷ್ಟೇ ಬೆಳೆದಾಗ (32.98 ಕಿ.ಗ್ರಾಂ/ಗಿಡ) ಉತ್ತಮವಾಗಿರುವುದನ್ನು ಗಮನಿಸಬಹುದು ಅಲ್ಲದೇ ಚಿಕ್ಕು ಇಳುವರಿಯ + ನಂದಿ (21.15 ಕಿ.ಗ್ರಾಂ/ಗಿಡ) ಇದ್ದು ಚಿಕ್ಕು + ಬಿಳಿಮತ್ತಿ ಕ್ಕಿಂತ (16.03 ಕಿ.ಗ್ರಾಂ/ಗಿಡ) ಇಳುವರಿ ಹೆಚ್ಚಾಗಿರುವುದು ಕಂಡು ಬಂದಿದೆ.

ಹೆಬ್ಬೇವು ಆಧಾರಿತ ಕೃಷಿ ಅರಣ್ಯ ಪದ್ಧತಿಯಲ್ಲಿ ಹೆಬ್ಬೇವಿನ ಬೆಳವಣಿಗೆಯು ಮತ್ತು ಡಿಬಿಎಚ್ 4X4 ಮೀ ಅಂತರದಲ್ಲಿ ಬೆಳೆದಾಗ (11.25 ಮೀ ಮತ್ತು 21.25 ಸೆ.ಮೀ ಅನುಕ್ರಮವಾಗಿ) ಉತ್ತಮವಾಗಿದ್ದು ಹಾಗೂ 4X1 ಮೀ ಅಂತರದಲ್ಲಿ (10.25 ಮೀ ಮತ್ತು 16.75 ಸೆಂ.ಮೀ ಅನುಕ್ರಮವಾಗಿ) ಬೆಳೆಯುವುದಕ್ಕಿಂತ ಹೆಚ್ಚಾಗಿರುವುದು ಕಂಡುಬಂದಿದೆ.

ಆರು ಅಖಾದ್ಯ ಎಣ್ಣೆ ಕೊಡುವ ಗಿಡಗಳನ್ನು ಪರಿಶೀಲನೆ ಮಾಡಿದಾಗ ಬೇವು (5.90 ಮೀ), ಸೀಮಾರೂಬಾ (5.26 ಮೀ) ಹಾಗೂ ಹೊಂಗೆ (4.66 ಮೀ) ಗಿಡಗಳ ಬೆಳವಣಿಗೆಯು ಸುರಹೊನ್ನೆ ಹಾಗೂ ಇತರೆ ತಳಿಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಸಿಮಾರೂಬ (14.14 ಸೆಮೀ)

ಹಾಗೂ ಬೇವಿನ (13.21 ಸೆಮೀ) ಡಿಬಿಎಚ್ ಹೊಂದಿದ್ದು ಸುರಹೊನ್ನೆ (1.25 ಸೆಂ.ಮೀ) ಗಿಡಗಳಿಗಿಂತ ಉತ್ತಮವಾಗಿ ಹೊಂದಿವೆ.

ಮೇವು ಆಧಾರಿತ ಕೃಷಿ ಅರಣ್ಯ ಪದ್ಧತಿಯಲ್ಲಿ ಸುಮಾರು ಏಳು ವಿವಿಧ ಮೇವಿನ ಮರಗಳ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಲಾಯಿತು. ಈ ಪ್ರಯೋಗದಲ್ಲಿ ನುಗ್ಗೆ, ಸುಬಾಬುಲ್ ಹಾಗೂ ಗೊಬ್ಬರ ಗಿಡದ ಬೆಳವಣಿಗೆಯು ಉತ್ತಮವಾಗಿರುವುದು ಕಂಡುಬಂದಿದೆ. ಇತರೆ ಮೇವಿನ ತಳಿಗಳಿಗೆ ಹೋಲಿಸಿದಾಗ ಕ್ಯಾಲಿಂಡರಾ (1325 ಕಿ.ಗ್ರಾಂ/ಹೆ.) ಹಾಗೂ ಸುಬಾಬುಲ್ (12.25.9 ಕಿ.ಗ್ರಾಂ/ಹೆ.) ಗಳ ಬಯೋಮಾಸ್ ಬಾಗಿ (305.6 ಕಿ.ಗ್ರಾಂ/ಹೆ.) ಗಿಡಗಳಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಸೋಯಾ ಅವರೆ ಇಳುವರಿಯ ಬಾಗಿ (530.7 ಕಿ.ಗ್ರಾಂ/ಹೆ.) ಗಿಡಗಳಲ್ಲಿ ಇತರೆ ಗಿಡಗಳಿಗಿಂತ ಹೆಚ್ಚಾಗಿರುತ್ತದೆ. ಕುಸುಬೆ ಇಳುವರಿಯು ನುಗ್ಗೆ (393.7 ಕಿ.ಗ್ರಾಂ/ಹೆ.) ಗಿಡಗಳಲ್ಲಿ ಇತರೆ ಗಿಡಗಳಿಗಿಂತ ಉತ್ತಮವಾಗಿರುವುದು ಕಂಡುಬಂದಿದೆ.

ನೆಲ್ಲಿ ಆಧಾರಿತ ಕೃಷಿ ಅರಣ್ಯ ಪದ್ಧತಿಯಲ್ಲಿ ವಿವಿಧ ನೆಲ್ಲಿ ತಳಿಗಳನ್ನು ಕೃಷಿ ಅರಣ್ಯ ಸಂಶೋಧನಾ ಕೇಂದ್ರ, ಪ್ರಭುನಗರದಲ್ಲಿ ವಿಶ್ಲೇಷಣೆ ಮಾಡಲಾಯಿತು. ಈ ತಳಿಗಳಲ್ಲಿ ಕಾಂಚನ (1.24 ಮೀ.) ಹಾಗೂ ಧಾರವಾಡ (0.97 ಮೀ.) ತಳಿಗಳು ಉತ್ತಮ ಬೆಳವಣಿಗೆಯನ್ನು ಹೊಂದಿರುವುದು ಕಂಡುಬಂದಿದೆ. ಅಲ್ಲದೆ ಹುಲ್ಲಿನ ಇಳುವರಿಯ ಚಕ್ಕಯ್ಯಾ ತಳಿಯಲ್ಲಿ (1.92 ಟ./ಹೆ.) ಧಾರವಾಡ (1.74 ಟ./ಹೆ.) ಮತ್ತು ಬನಾರಸ್ (1.74 ಟ./ಹೆ.) ದಲ್ಲಿ ಹೆಚ್ಚಾಗಿರುವುದು ತಿಳಿದುಬಂದಿತು.

ಕೃಷಿ ಅರಣ್ಯ ಸಂಶೋಧನಾ ಕೇಂದ್ರ, ಪ್ರಭುನಗರದ ನೈಸರ್ಗಿಕ ಕಾಡಿನಲ್ಲಿ ಬೆಳೆದ ಗಿಡಗಳ ಬಯೋಮಾಸ್ ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ ಕುರಿತು ಪ್ರಯೋಗ ಕೈಗೊಳ್ಳಲಾಯಿತು. ಕಾಡಿನಲ್ಲಿರುವ ವಿವಿಧ ಇಳಿಜಾರು ಪ್ರದೇಶಗಳಲ್ಲಿ ಮಧ್ಯ ಭಾಗದಲ್ಲಿರುವ (3–5 %) ಗಿಡಗಳಿಂದ ಹೆಚ್ಚಿನ ಬಯೋಮಾಸ್ ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ ಹೆಚ್ಚು ದಾಖಲಿಸಲಾಗಿದೆ. ಅತ್ಯಂತ ಹೆಚ್ಚಿನ ಬಯೋಮಾಸ್ (55.64 ಟ./ಹೆ.) ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ (22.82 ಟನ್/ಹೆ) ದಿಂಡಲ ಗಿಡದಲ್ಲಿ ಇದ್ದು ಅತೀ ಕಡಿಮೆ ಸಿಸ್ಸಂ (8.72 ಟನ್/ಹೆ ಹಾಗೂ 4.36 ಟನ್/ಹೆ ಅನುಕ್ರಮವಾಗಿ) ದಲ್ಲಿ ಕಂಡುಬಂದಿದೆ.

ಕೃಷಿ ಅರಣ್ಯ ಸಂಶೋಧನಾ ಕೇಂದ್ರ, ಪ್ರಭುನಗರದಲ್ಲಿ ಚಿಕ್ಕು ಆಧಾರಿತ ಕೃಷಿ ಅರಣ್ಯ ಪದ್ಧತಿಯಲ್ಲಿನ ಗಿಡಗಳ ಬಯೋಮಾಸ್ ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ ಕುರಿತು ಪ್ರಯೋಗ ಕೈಗೊಳ್ಳಲಾಯಿತು. ಅತೀ ಹೆಚ್ಚು ಬಯೋಮಾಸ್ ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ ಸಾಗವಾನಿ (118.0 ಟನ್/ಹೆ ಮತ್ತು 59.0 ಟನ್/ಹೆ) ಮತ್ತು ನೀಲಗಿರಿ (112.6 ಟನ್/ಹೆ ಮತ್ತು 56.3 ಟನ್/ಹೆ) ಆಧಾರಿತ ಕೃಷಿ ಅರಣ್ಯ ಪದ್ಧತಿಗಳಲ್ಲಿ ಕಂಡುಬಂದಿದೆ. ಅಲ್ಲದೇ ಚಿಕ್ಕು ಆಧಾರಿತ ಪದ್ಧತಿಯಲ್ಲಿ ಬಯೋಮಾಸ್ ಹಾಗೂ ಕಾರ್ಬನ್ ಸಿಕ್ವೆಸ್ಟ್ರೇಶನ್ ಬರೀ ಚಿಕ್ಕುವನ್ನು ಬೆಳೆದಾಗ ಅತೀ ಹೆಚ್ಚಾಗಿರುವುದು, ನಂದಿ ಜೊತೆಗೆ ಚಿಕ್ಕು ಬೆಳೆದಾಗ ಕೂಡ ಉತ್ತಮವಾಗಿರುವುದು ಹಾಗೂ ಸಿಸ್ಸಂ ಜೊತೆಗೆ ಚಿಕ್ಕು ಬೆಳೆದಾಗ ಅತೀ ಕಡಿಮೆ ಕಂಡುಬಂದಿದೆ.

ಬಿದಿರು ಕಟಾವು ಮಾಡುವ ಪದ್ಧತಿ ಕುರಿತು ಕೃಷಿ ಅರಣ್ಯ ಸಂಶೋಧನಾ ಕೇಂದ್ರ, ಪ್ರಭುನಗರದಲ್ಲಿ ಪ್ರಯೋಗ ಕೈಗೊಳ್ಳಲಾಯಿತು. ಬಿದಿರನ್ನು ಶೇ. 30 ರಷ್ಟು ಕಟಾವು ಮಾಡಿದಾಗ ಅದರ ಗಳದ ಬೆಳವಣಿಗೆ ಬಿದಿರನ್ನು ಶೇ 10ರಷ್ಟು ಕಟಾವು ಮಾಡುವ ಪದ್ಧತಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ.

ಬಹು ಸ್ಥಳಗಳಲ್ಲಿ ಹೊಂಗೆಯ ಪರೀಕ್ಷಣೆಯ ಪ್ರಯೋಗವನ್ನು ಕೈಗೊಳ್ಳಲಾಯಿತು. ಈ ಅಧ್ಯಯನದಲ್ಲಿ ಹತ್ತು ಹೊಂಗೆ ತಳಿಗಳ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಲಾಯಿತು. ಅವುಗಳಲ್ಲಿ ಹೊಂಗೆ ತಳಿಯಾದ RAK-10 ಬೆಳವಣಿಗೆಯು ಉತ್ತಮವೆಂದು ಕಂಡುಬಂದಿದೆ. ಸೋಯಾಬಿನ್ ಬೆಳೆಯ ಇಳುವರಿಯು RAK-8 (286.6 ಕಿ.ಗ್ರಾಂ/ಹೆ) ಹಾಗೂ RAK-6 (263.3 ಕಿ.ಗ್ರಾಂ/ಹೆ) ಉತ್ತಮವಾಗಿರುವುದು ಕಂಡುಬಂದಿದೆ. ಕುಸುಬೆ ಇಳುವರಿಯು RAK-3 (185.6 ಕಿ.ಗ್ರಾಂ/ಹೆ) ಮತ್ತು RAK-4 (185.5 ಕಿ.ಗ್ರಾಂ/ಹೆ) ಚನ್ನಾಗಿ ಇದ್ದು, ಇತರೆ ತಳಿಗಿಂತ RAK-7 (123.5 ಕಿ.ಗ್ರಾಂ/ಹೆ) ಅತೀ ಕಡಿಮೆಯಾಗಿದ್ದು ಕಂಡುಬಂದಿದೆ.

ಬಹು ಸ್ಥಳಗಳಲ್ಲಿ ಕೃಷಿ ಅರಣ್ಯ ಪದ್ಧತಿ ಆಧಾರಿತ ಹೆಬ್ಬೇವು ತದ್ರೂಪುಗಳ ಮೌಲ್ಯಮಾಪನದಲ್ಲಿ MTP–1 ಹಾಗೂ MTP-2 ತಳಿಗಳಲ್ಲಿ HN ತಳಿಗಿಂತ ಉತ್ತಮ ಬೆಳವಣಿಗೆಯು ಕಂಡುಬಂದಿದೆ. ರಾಗಿ, ನವಣೆ, ಹೆಸರು ಹಾಗೂ ಉದ್ದು ಬೆಳೆಗಳನ್ನು ಹೆಬ್ಬೇವು ಗಿಡಗಳ ಮಧ್ಯದಲ್ಲಿ ಬೆಳೆಯಲಾಯಿತು. ರಾಗಿ ಇಳುವರಿಯನ್ನು ಹೆಬ್ಬೇವು ಗಿಡದ ಜೊತೆಗೆ ಉತ್ತಮವೆಂದು ಗಮನಿಸಲಾಯಿತು. MTP-2 ಹೆಬ್ಬೇವು ಗಿಡದ ಜೊತೆಗೆ ಬೆಳೆದಾಗ ಕಾಳು ಮತ್ತು ಹೊಟ್ಟಿನ ಇಳುವರಿಯು (293.0 ಕಿ.ಗ್ರಾಂ/ಹೆ ಮತ್ತು 357.3 ಕಿ.ಗ್ರಾಂ/ಹೆ) HN ಜೊತೆಗೆ ಬೆಳೆದ ಇಳುವರಿಗಿಂತ (276.4 ಕಿ.ಗ್ರಾಂ/ಹೆ ಮತ್ತು 336 ಕಿ.ಗ್ರಾಂ/ಹೆ) ಹೆಚ್ಚಾಗಿರುವುದು ಕಂಡು ಬಂದಿದೆ.

ಬಹು ಸ್ಥಳಗಳಲ್ಲಿ ಮೇವಿನ ಗಿಡಗಳ ಮೌಲ್ಯಮಾಪನದಲ್ಲಿ, ಐದು ವಿವಿಧ ಮೇವಿನ ಗಿಡಗಳನ್ನು 2.5 x 0.5 x 0.5 ಮೀ ಅಂತರದಲ್ಲಿ ಎರಡು ಸಾಲುಗಳಲ್ಲಿ ಬೆಳೆಯಲಾಯಿತು. ಗೊಬ್ಬರಗಿಡ ಹಾಗೂ ಚೂಗಚೆ ಗಿಡಗಳ ಬೆಳವಣಿಗೆ ಇತರೆ ಮೇವಿನ ತಳಿಗಳಿಗಿಂತ ಉತ್ತಮವಾಗಿರುವುದು ಕಂಡುಬಂದಿದೆ. ಕ್ಯಾಲಿಯಾಂಡ್ರಾ ಹಾಗೂ ಸುಬಾಬಲ್ ಗಿಡಗಳು ಅನುಕ್ರಮವಾಗಿ 3290 ಕಿ.ಗ್ರಾಂ/ಹೆ ಹಾಗೂ 2982.4 ಕಿ.ಗ್ರಾಂ/ಹೆ ಹಸಿರು ಬಯೋಮಾಸ ಹೊಂದಿದ್ದು, ಅತೀ ಕಡಿಮೆ ಬಯೋಮಾಸ ನುಗ್ಗೆ (1862 ಕಿ.ಗ್ರಾಂ/ಹೆ) ಯಲ್ಲಿ ಕಂಡು ಬಂದಿರುತ್ತದೆ.

3.4.20 ಅರಣ್ಯ ಜೀವಶಾಸ್ತ್ರ ಮತ್ತು ವೃಕ್ಷ ಅಭಿವೃದ್ಧಿ ವಿಭಾಗ

ನೂತನವಾಗಿ ಕಂಡುಹಿಡಿದ ಸಸ್ಯ ಮತ್ತು ಶಿಲೀಂಧ್ರಗಳಿಂದ ಕ್ಯಾಂಪೋಥೆಸಿನ ಜೀವರಾಸಾಯಾನಿಕದ ಸುಸ್ಥಿರ ಉತ್ಪಾದನೆ: ಕ್ಯಾಂಪೋಥೆಸಿನ್ ಎಂಬ ಕ್ಯಾನ್ಸರ್ ನಿವಾರಕ ಜೀವ ರಾಸಾಯನಿಕವನ್ನು ಹಿರೇಮದ್ದಿನ ಗಿಡ ಅಥವಾ ಪೈರೆನಾಕಾಂತ ಎಂಬ ಸಸ್ಯದಿಂದ ಅತಿ ಹೆಚ್ಚು ಪ್ರಮಾಣದಲ್ಲಿ ಪಡೆಯಬಹುದು ಎಂದು ಕಂಡುಹಿಡಿಯಲಾಯಿತು. ಅದೂ ಅಲ್ಲದೆ ಬೀಜಗಳಿಂದ ಈ ಜೀವರಾಸಾಯನಿಕ ದೊರೆಯುವುದರಿಂದ ಸಸ್ಯಗಳನ್ನು ನಾಶಪಡಿಸದೇ ಸುಸ್ಥಿರವಾಗಿ ಉತ್ಪಾದನೆ ಮಾಡಬಹುದು.

ಉತ್ತರ ಕನ್ನಡದ ರಾಮಪತ್ರೆ ಜೌಗು ಅಥವಾ ಮಿರಿಸ್ಟಿಕ ಜೌಗುಗಳ ಪ್ರಸ್ತುತ ಸಂರಕ್ಷಣೆ: ಮಿರಿಸ್ಟಿಕ ಜೌಗುಗಳು ಅಥವಾ ರಾಮಪತ್ರೆ ಜೌಗುಗಳು ಪಶ್ಚಿಮ ಘಟ್ಟದ ಅತ್ಯಂತ ಸೂಕ್ಷ್ಮ ಮತ್ತು ಪಾರಿಸಾರಿಕವಾಗಿ ಅತ್ಯಂತ ಪ್ರಾಮುಖ್ಯತೆ ಇರುವ ಜೀವಾವಾಸಗಳು. ಉತ್ತರ ಕನ್ನಡದಲ್ಲಿರುವ ಸುಮಾರು ನೂರು ಇಂತಹ ರಾಮಪತ್ರೆ ಜೌಗುಗಳನ್ನು ಪತ್ತೆ ಹಚ್ಚಿ ಅದರಲ್ಲಿರುವ ಸಸ್ಯ, ಪ್ರಾಣಿಗಳ ಯಾದಿ ತಯಾರಿಸಲಾಯಿತು. ಸುಮಾರು 149 ಸಸ್ಯಗಳು ಮತ್ತು 534 ಪ್ರಾಣಿ ಪ್ರಭೇದಗಳನ್ನು ಗುರುತಿಸಲಾಯಿತು. ಇವುಗಳಲ್ಲಿ 30 ಪ್ರಭೇದಗಳ ಸಸ್ಯಗಳು ಮತ್ತು ನೂರಕ್ಕೆ ಹೆಚ್ಚು ಪ್ರಾಣಿ ಪ್ರಭೇದಗಳು ವಿನಾಶದ ಅಂಚಿನಲ್ಲಿರುವುದು ಗಮನಕ್ಕೆ ಕಂಡು 8 ರಾಮಪತ್ರೆ ಜೌಗುಗಳನ್ನು ಅತ್ಯಂತ ಪ್ರಮುಖ ಜೀವಾವಾಸಗಳೆಂದು ಗುರುತಿಸಲಾಯಿತು. ರಾಮಪತ್ರೆ ಜೌಗುಗಳ ಸಂರಕ್ಷಣೆಯಾಗಿ ಮಧ್ಯಮಾವಧಿಯ ಸಂರಕ್ಷಣಾ ಯೋಜನೆಯೊಂದನ್ನು ತಯಾರುಮಾಡಿ ಕರ್ನಾಟಕ ಅರಣ್ಯ ಇಲಾಖೆಯ ಗಮನಕ್ಕೆ ತರಲಾಯಿತು.

ನೂತನವಾಗಿ ಘೋಷಿಸಲಾದ ಸಂರಕ್ಷಣಾ ಮೀಸಲುಗಳ ಜೀವವೈವಿದ್ಯದ ಅಧ್ಯಯನ: ನೂತನವಾಗಿ ಘೋಷಿಸಲಾದ ಸಂರಕ್ಷಣಾ ಮೀಸಲುಗಳ ಜೀವವೈವಿದ್ಯವನ್ನು ಅಧ್ಯಯನಮಾಡಿ ಅವುಗಳ ಸಂರಕ್ಷಣೆಗಾಗಿ ಉತ್ತರ ಕನ್ನಡದ ಅಘನಾಶಿನಿ ಸಂಕರಕ್ಷಣಾ ಮೀಸಲು ಇವರಿಗೆ ಮಧ್ಯಮ ಅವಧಿ ಯೋಜನೆಯ ಸಲಹೆ ನೀಡಲಾಯಿತು.

3.4.21 ಆಹಾರ ವಿಜ್ಞಾನ ಹಾಗೂ ಪೋಷಣೆ ವಿಭಾಗ

ಅಸಾಂಕ್ರಾಮಿಕ ರೋಗಗಳ ನಿರ್ವಹಣೆಗಾಗಿ ಗಡ್ಡೆ ಗೆಣಸುಗಳ ಮೌಲ್ಯವರ್ಧನೆ: ಗ್ರೇಟರ್ ಯಾಮ್ (ಸಿಂಹ ಕಾಲು ವಿಧ), ಗ್ರೇಟರ್ ಯಾಮ್ (ಕಾಡು ಖಾದ್ಯ ವಿಧ), ಲೆಸ್ಸರ್ ಯಾಮ್, ಟ್ಯಾನಿಯ ಬಲ್ಬಗಳು, ಕೊಲೊಕೇಶಿಯಾಗಳನ್ನು ಆಯ್ಕೆ ಮಾಡಿ, ಅದರಲ್ಲಿ ಗ್ರೇಟರ್ ಯಾಮ್ 39.90 ಸೆಂ.ಮೀ ಉದ್ದ, 1788.33 ಗ್ರಾಂ ಭಾರವಾಗಿ 95 ಪ್ರತಿಶತ ಪ್ರೋಟಿನ್ ಜೀರ್ಣಸಾಧ್ಯತೆಯನ್ನು ಹೊಂದಿರುತ್ತದೆ. ಗಡ್ಡೆಯ ಕಿಚಡಿ ಮಿಕ್ಸ್ ಕಡಿಮೆ ಗ್ಲೈಸಮಿಕ್ ಸೂಚ್ಯಂಕ ಹೊಂದಿ ಮಧುಮೇಹ ನಿರ್ವಹಣೆಗಾಗಿ ಪ್ರಯೋಜನಕಾರಿ ಎಂದು ಕಂಡುಬಂದಿದೆ. ಈ ಸಂಶೋಧನೆ ಅಧ್ಯಯನವು ಸಿರಿಧಾನ್ಯಗಳ ಸಂಸ್ಕರಣೆಯ ದಾಖಲೀಕರಣ, ಸಿರಿಧಾನ್ಯಗಳ ಸಂಗ್ರಹಣೆ ಕುರಿತು ಒಳಪಟ್ಟಿದೆ. ಸಂಸ್ಕರಣೆ ಘಟಕದಲ್ಲಿ ಸಜ್ಜೆ ಹೊರತುಪಡಿಸಿ ಎಲ್ಲ ಸಿರಿಧಾನ್ಯಗಳನ್ನು ಸಂಸ್ಕರಿಸಲಾಗುತ್ತಿದೆ.

ಬಕ್‌ಗೋಧಿಯ ಭೌತಿಕ, ರಾಸಾಯನಿಕ ಗುಣಗಳು ಮತ್ತು ಸಂಯೋಜನೆ: ಬಕ್‌ಗೋಧಿ ತಳಿಗಳಾದ ಪಿ. ಬಿ. ಆರ್–1, ನೀಲಗೇರಿ, ಐ ಸಿ – 79147 ಮತ್ತು ಬ್ರೆಡ್‌ಗೋಧಿ (ನಿಯಂತ್ರಿತ) ತಳಿಗಳಲ್ಲಿ ಸಂಶೋಧನೆ ಕೈಗೊಳ್ಳಲಾಯಿತು. ಸಿಪ್ಪೆ ತೆಗೆದ ಬಕ್ ಮತ್ತು ಗೋಧಿ ತಳಿಗಳಲ್ಲಿ ಭೌತಿಕ, ರಾಸಾಯನಿಕ ಗುಣಗಳು, ಸಂಯೋಜನೆ ಮತ್ತು ನ್ಯೂಟ್ರಾಸಿಟಿಕಲ್ಸನ್ನು ವಿಶ್ಲೇಷಿಸಲಾಯಿತು. ಬಕ್‌ಗೋಧಿ ತಳಿಗಳನ್ನು ಬ್ರೆಡ್‌ಗೋಧಿ ತಳಿಗೆ ಹೋಲಿಸಿದರೆ ನೂರು ಕಾಳಿನ ತೂಕ, ಊತ ಸಾಮರ್ಥ್ಯ, ಊತ ಸೂಚ್ಯಂಕದಲಿ ಗಮನಾರ್ಹ ವ್ಯತ್ಯಾಸ ಕಂಡು ಬಂದಿದೆ. ಬಕ್‌ಗೋಧಿ ತಳಿಯು ಉತ್ತಮ ಭೌತಿಕರಾಸಾಯನಿಕ ಗುಣಗಳು, ಸಂಯೋಜನೆ ಮತ್ತು ನ್ಯೂಟ್ರಾಸಿಟಿಕಲ್ಸನ್ನು ಹೊಂದಿದ್ದು ಇದನ್ನು ಇತರೆ ಆಹಾರ ಖಾಧ್ಯಗಳಲ್ಲಿ ಉಪಯೋಗಿಸಬಹುದು ಎಂದು ಫಲಿತಾಂಶದಿಂದ ತೀರ್ಮಾನಿಸಲಾಯಿತು.

ಅಗಸೆ ತಳಿಗಳ ಮೌಲ್ಯವರ್ಧನೆ: ಏಳು ಹೊಸದಾಗಿ ಅಭಿವೃದ್ಧಿಪಡಿಸಿದ ಅಗಸೆಯ ತಳಿಗಳ ಭೌತಿಕ, ರಸಾಯನಿಕ ಹಾಗೂ ಆ್ಯಂಟಿಆಕ್ಸಿಡಂಟ್ ಪ್ರಮಾಣ ಮತ್ತು ಆ್ಯಕ್ಟಿವಿಟಿಯನ್ನು ಅಭ್ಯಸಿಸಲಾಯಿತು. ಆ್ಯಂಟಿಆಕ್ಸಿಡಂಟ್ ಪ್ರಮಾಣ ಡಿ.ಎಲ್.ವಿ 9 ರಲ್ಲಿ ಹೆಚ್ಚು ಇರುವುದು ಕಂಡುಬಂದಿತು. ಅಗಸೆಯ ಪ್ರಮಾಣ ಹೆಚ್ಚುತ್ತಾ ಹೋದಂತೆ ಅಭಿವೃದ್ಧಿಪಡಿಸಿದ ಉತ್ಪನ್ನಗಳ ಆ್ಯಂಟಿಆಕ್ಸಿಡಂಟ್ ಪ್ರಮಾಣ ಹೆಚ್ಚಾಗಿದ್ದು ಕಂಡುಬಂದಿದೆ. ಹಾಗೂ ಸಂಗ್ರಹಣೆಯ ಅವಧಿ ಹೆಚ್ಚುತ್ತಾ ಹೋದಂತೆ ಕಡಿಮೆಯಾದದ್ದು ಕಂಡುಬಂತು. ಅಗಸೆ ಮೌಲ್ಯವರ್ಧಿತ ಉತ್ಪನ್ನಗಳು 10 ದಿನಗಳ ಸಂಗ್ರಹಣಾ ಸಾಮರ್ಥ್ಯ ಹೊಂದಿವೆ.

ಅನಿಮಿಯಾ ತಡೆಗಟ್ಟಲು ಮೌಲ್ಯವರ್ಧಿತ ಮೈಕ್ರೊಗ್ರೀನ್‌ಗಳು: ಎಲ್ಲಾ ಮೈಕ್ರೋಗ್ರೀನಗಳಲ್ಲಿ ತೇವಾಂಶ, ಅಸ್ಕಾರಬಿಕ್ ಆಮ್ಲ ಹಾಗೂ ಕಬ್ಬಿಣಾಂಶ ಹೆಚ್ಚಿದ್ದು, ಪ್ರತಿರೋಧಗಳಾದ ಕ್ಯಾಲ್ಸಿಯಂ, ಫೈಟಿಕ್ ಆಮ್ಲ, ಆಕ್ಸಾಲಿಕ್ ಆಮ್ಲ ಹಾಗೂ ನಾರಿನಂಶ ಕಡಿಮೆ ಪ್ರಮಾದಲ್ಲಿರುವುದು ಕಂಡುಬಂದಿದೆ. ಆರು ಮೈಕ್ರೋಗ್ರೀನಗಳಲ್ಲಿ ರಾಜಗೀರಿಯಲ್ಲಿ ಕಬ್ಬಿಣಾಂಶದ ಪ್ರಮಾಣ ಅಗ್ರ ಶ್ರೇಣಿಯಲ್ಲಿದ್ದು, ಜೀವಸತ್ವ 'ಸಿ' ಮೂರನೆಯ ಸ್ಥಾನದಲ್ಲಿದ್ದು, ನಿರೋಧಕಗಳಲ್ಲಿ ಆರನೆಯ ಸ್ಥಾನದಲ್ಲಿರುವುದುದೆಂದು ಕಂಡುಬಂದಿದೆ. ಆದ್ದರಿಂದ ಮೈಕ್ರೋಗ್ರೀನ್ ರಾಜಗಿರಿಯನ್ನು ಪಾಸ್ತಾದಲ್ಲಿ ಸೇರಿಸಲು ಆಯ್ಕೆಮಾಡಲಾಯಿತು. ಅಭಿವೃದ್ಧಿ ಪಡಿಸಲಾದ ಪಾಸ್ತಾ ಹೆಚ್ಚಿನ ಒಪ್ಪಿಗೆ ಅಂಕ (86.66%) ಹೊಂದಿದೆ. ಮೈಕ್ರೊಗ್ರೀನ್ ರಾಜಗಿರಿ ಪಾಸ್ತಾದಲ್ಲಿ ಕಬ್ಬಿಣ ಅಂಶವು 5.36 ಮಿಗ್ರಾಂ/100 ಗ್ರಾಂ ಇದ್ದು, 3.76ಮಿಗ್ರಾಂ ನಷ್ಟು ದೇಹಗತವಾಗುತ್ತದೆ. ಅದೇ ಮೈಕ್ರೊಗ್ರೀನ್ ರಾಜಗಿರಿ ರಸವಿಲ್ಲದ ಪಾಸ್ತಾದಲ್ಲಿ 2.89 ಮಿ.ಗ್ರಾಂ

ಇದ್ದು, 1.90 ರಷ್ಟು ದೇಹಗತವಾಗುತ್ತದೆಂದು ಕಂಡುಬಂದಿದೆ. ಮೈಕ್ರೊಗ್ರೀನ್ ರಾಜಗಿರಿ ಪಾಸ್ತಾ ಕಬ್ಬಿಣಾಂಷ ಹೆಚ್ಚಿಸಲು ಒಂದು ಉತ್ತಮ ಆಹಾರವಾಗಿದೆ.

ತೆಂಗಿನ ಹಾಲಿನಿಂದ ಮೌಲ್ಯವರ್ಧಿತ ಅಹಾರ ಪದಾರ್ಥಗಳ ತಯಾರಿಕೆ: ತೆಂಗಿನಕಾಯಿ ತುರಿಯನ್ನು ಬ್ಲಾಂಚ್ ಮಾಡುವುದರಿಂದ ಬ್ಲಾಂಚ್ ಮಾಡದೆ ಇರುವುದಕ್ಕಿಂತ ಶೇಕಡ 12 ರಷ್ಟು ಹೆಚ್ಚಿಗೆ ಹಾಲು ಪಡೆಯಬಹುದು. ತೆಂಗಿನ ವ್ಹೇಪ್ರೋಟೀನ್ ಬಳಸುವದರಿಂದ ತೆಂಗಿನ ಕ್ರಿಮ್‌ನ ಸ್ಥಿರತೆಯನ್ನು ಹೆಚ್ಚಿಸಬಹುದು. ತೆಂಗಿನಕಾಯಿ ಲಸ್ಸಿ ಮತ್ತು ಮಜ್ಜಿಗೆ ಉತ್ಪಾದನೆ ಪ್ರಕ್ರಿಯೆಯನ್ನು ಅಭಿವೃದ್ಧಿ ಪಡಿಸಲಾಯಿತು.

3.4.22 ಮಾನವ ವಿಕಾಸ ಹಾಗೂ ಕುಟುಂಬ ಅಧ್ಯಯನ ವಿಭಾಗ

ಕೌಶಲ್ಯ ಅಭಿವೃದ್ಧಿಯ ಮೂಲಕ ಗ್ರಾಮೀಣ ಮಹಿಳೆಯರ ಸುಸ್ಥಿರ ಜೀವನೋಪಾಯದ ವರ್ಧನೆ: ಹಿಟ್ಟಿನಹಳ್ಳಿ ಮತ್ತು ಅರಕೇರಿ ಗ್ರಾಮದ ಮಹಿಳೆಯರಿಗೆ ಹೊಲಿಗೆ ಕೌಶಲ್ಯ ತರಬೇತಿಯನ್ನು ನೀಡಲಾಯಿತು. ಪೂರ್ವ ಮತ್ತು ನಂತರದ ಪರೀಕ್ಷೆ ನಡೆಸಿದಾಗಾ ಗ್ರಾಮೀಣ ಮಹಿಳೆಯರಲ್ಲಿ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಮಧ್ಯಮ ವರ್ಗದಲ್ಲಿ 28.0 ಪ್ರತಿಶತದಷ್ಟು ಹೆಚ್ಚಳ ಮತ್ತು ಉನ್ನತ ವರ್ಗದಲ್ಲಿ 7.0 ಪ್ರತಿಶತದಷ್ಟು ಹೆಚ್ಚಳ ಗಮನಿಸಲಾಯಿತು. ಸ್ವಯಂ ಗೌರವದ ಮಟ್ಟದಲ್ಲಿ ಮದ್ಯಮ ವರ್ಗದಲ್ಲಿ 27.0 ಪ್ರತಿಶತ ಹೆಚ್ಚಳ ಮತ್ತು ಉನ್ನತ ಮಟ್ಟದ ವರ್ಗದಲ್ಲಿ 11.0 ಪ್ರತಿಶತ ಹೆಚ್ಚಳವನ್ನು ನೋಡಲಾಯಿತು.

ಚಿಕ್ಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪ್ರಚೋಧನಾತ್ಮಕ ಬೋಧನಾ–ಕಲಿಕಾ ಸಾಮಗ್ರಿಗಳ ಉತ್ಪಾದನೆ ಹಾಗೂ ವಾಣಿಜ್ಯಕರಣ: ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಪ್ರಚೋದಿಸುವುದರ ಬಗ್ಗೆ ಬಾಲ್ಯಪೂರ್ವ ಕೇಂದ್ರಗಳ ಶಿಕ್ಷಕರಿಗೆ ತರಬೇತಿ ಮೂಲಕ ಅರಿವು ಮೂಡಿಸಲಾಯಿತು. ಪೂರ್ವ ಪರೀಕ್ಷೆಯಲ್ಲಿ, ಬಹಳಷ್ಟು ಶಿಕ್ಷಕಯರು ಸರಾಸರಿ ಮಟ್ಟದ ತಿಳುವಳಿಕೆಯನ್ನು ಹೊಂದಿದ್ದು, ಕಡಿಮೆ ಮಟ್ಟದ ತಿಳುವಳಿಕೆಯನ್ನು ಯಾರೂ ಹೊಂದಿಲ್ಲ ಎಂಬುದು ತಿಳಿದು ಬಂದಿದೆ. ತರಬೇತಿಯ ನಂತರದ ಪರೀಕ್ಷೆಯಲ್ಲಿ, ಬಹಳಷ್ಟು ಬಾಲ್ಯಪೂರ್ವ ಕೇಂದ್ರಗಳ ಶಿಕ್ಷಕರು ಉತ್ತಮ ಮಟ್ಟದ ತಿಳುವಳಿಕೆಯನ್ನು ಹೊಂದಿರುವುದು ಕಂಡು ಬಂದಿದೆ. ಉತ್ಪಾದಿಸಿದ ಪ್ರಚೋಧನಾತ್ಮಕ ಬೋಧನಾ–ಕಲಿಕಾ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸಲು ಅನೇಕ ಸಂಘ–ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಬೆಳೆಸಲಾಗಿದೆ. ಅಷ್ಟೇ ಅಲ್ಲದೇ, ಉತ್ಪಾದಿಸಿದ ಪ್ರಚೋಧನಾತ್ಮಕ ಬೋಧನಾ–ಕಲಿಕಾ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸಲು ಇವುಗಳನ್ನು ವಾಣಿಜ್ಯಕರಣಿಗೊಳಿಸಲಾಗಿದೆ.

ಗ್ರಾಮೀಣ ಕುಟುಂಬದ ಮಹಿಳೆಯರಲ್ಲಿ ಸಂತಾನೋತ್ಪತ್ತಿ ಆರೋಗ್ಯದ ರಕ್ಷಣೆಯ ಮಾಹಿತಿ: ಗ್ರಾಮೀಣ ಮಹಿಳೆಯರ ಪ್ರಜನನ ಆರೋಗ್ಯ, ತಾಯಿ ಆರೋಗ್ಯ ಹಾಗೂ ಮಗುವಿನ ಕ್ಷೇಮ ಮತ್ತು ಮಾನಸಿಕ ಯೋಗಕ್ಷೇಮದ ಬಗ್ಗೆ ಇರುವ ತಿಳುವಳಿಕೆಯ ಕುರಿತು ಅಧ್ಯಯನ ಮಾಡಲಾಯಿತು. ಬಹಳಷ್ಟು (97%) ಗ್ರಾಮೀಣ ಮಹಿಳೆಯರು ಮಧ್ಯಮ, ಶೇಕಡ 2.7 ರಷ್ಟು ಕಡಿಮೆ ಹಾಗೂ ಶೇ. 0.3 ರಷ್ಟು ಮಹಿಳೆಯರು ಉತ್ತಮ ಮಟ್ಟದ ಸಾಮಾಜಿಕ–ಆರ್ಥಿಕ ಸ್ಥಿತಿಯುಳ್ಳವರಾಗಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಮಾನಸಿಕ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ, ಬಹಳಷ್ಟು ಮಹಿಳೆಯರು ಸರಾಸರಿ ಮಟ್ಟದ ದೈಹಿಕ, ಭಾವನಾತ್ಮಕ, ಆಧ್ಯಾತ್ಮಿಕ ಹಾಗೂ ಬೌದ್ಧಿಕ ಆರೋಗ್ಯವನ್ನು ಹೊಂದಿದ್ದಾರೆ. ಆದರೆ, ಸಾಮಾಜಿಕ ಆರೋಗ್ಯದಲ್ಲಿ ಬಹಳಷ್ಟು ಮಹಿಳೆಯರು ಸರಾಸರಿ ಹಾಗೂ ಉತ್ತಮ ಮಟ್ಟದ ಯೋಗಕ್ಷೇಮ ಹೊಂದಿದ್ದಾರೆ.

3.4.23 ವಸ್ತ್ರ ಮತ್ತು ಉಡುಪು ವಿನ್ಯಾಸ ವಿಭಾಗ

ಸ್ಥಳೀಯ ಕಬ್ಬು ಪ್ರಭೇಧಗಳ ಆಧಾರದ ಮೇಲೆ ಭೌತಿಕ–ರಾಸಾಯನಿಕ ಗುಣಲಕ್ಷಣಗಳ ಪ್ರಯೋಗ (2017–20): ಅಧ್ಯಯನದ ಫಲಿತಾಂಶದ ಪ್ರಕಾರ ಸಾಮಾನ್ಯವಾಗಿ ಹೇಗೆ ಕೊಯ್ಲು ಅವಧಿಯು ಹೆಚ್ಚಾಗುತ್ತದೆಯೋ ಹಾಗೇ ಕಬ್ಬಿನ ತೂಕ ಹೆಚ್ಚಾಗುತ್ತದೆ. ಕಬ್ಬಿನ ರಸ ಹೊರತೆಗೆಯುವಿಕೆ ಶೇಕಡಾವಾರು ಮತ್ತು ಫೈಬರ್ ಇಳುವರಿ ಗಮನಾರ್ಹವಾಗಿ ಹೆಚ್ಚಿದೆ.

ಬಗಾಸ್ / ಕಬ್ಬಿನ ನಾರಿನಿಂದ ಮತ್ತು ಇತರೆ ನೈಸರ್ಗಿಕ ಫೈಬರ್‌ಗಳಿಂದ ಅಭಿವೃದ್ದಿಪಡಿಸಿದ ಕೈ ಕಾಗದಗಳು (ನಾರುಗಳು): ಸಂಸ್ಕರಿಸಿದ ಬಗಾಸ್ ನಾರು ಮತ್ತು ಇತರ ನೈಸರ್ಗಿಕ ನಾರುಗಳನ್ನು ವಿವಿಧ ರೀತಿಯ ಅನುಪಾತದಲ್ಲಿ ಮಿಶ್ರಿಸಿ ಕೈ ಕಾಗದಗಳನ್ನು ತಯಾರಿಸಲಾಯಿತು. ಅವುಗಳೆಂದರೆ ಕಬ್ಬಿನ ನಾರು, ಕಲ್ಲಾರು, ಮೆಕ್ಕೆ ಜೋಳದ ಸಿಪ್ಪೆ, ತ್ಯಾಜ್ಯ ಕಾಗದ ಮತ್ತು ಹತ್ತಿ ಚಿಂದಿಗಳನ್ನು 40:30:30ರ ಅನುಪಾತದಲ್ಲಿ ಮಿಶ್ರಿಸಲಾಯಿತು. ಇವುಗಳಲ್ಲಿ ಮಿಶ್ರಿತ ಕಬ್ಬಿನ ನಾರು / ಕಲ್ಲಾರು / ಹತ್ತಿಯ ಚಿಂದಿಯಿಂದ ತಯಾರಿಸಿದ ಕೈ ಕಾಗದವು ಉತ್ತಮ ಗುಣಮಟ್ಟವನ್ನು ಹೊಂದಿದ್ದು, ಇದನ್ನು ವಿವಿಧ ರೀತಿಯ ಕರಕುಶಲ ಮತ್ತು ಪ್ಯಾಕಿಂಗ್ ವಸ್ತುವಾಗಿ ಉಪಯೋಗಿಸಬಹುದೆಂದು ಸಂಶೋದನೆಯಿಂದ ದೃಡಪಟ್ಟಿದೆ. ಕೈಯಿಂದ ಮಾಡಿದ ಪೇಪರ್ ಪರಿಸರ ಸ್ನೇಹಿ, ಜೈವಿಕ–ವಿಘಟನೀಯ, ಮರುಬಳಕೆ ಮಾಡಬಹುದಾದ, ಗುಣಮಟ್ಟದಲ್ಲಿ ಉತ್ತಮವಾಗಿದೆ.

ಜವಳಿ ಬಣ್ಣದ ಕೈಗಾರಿಕೆಯಿಂದ ಹೊರ ಹೊಮ್ಮುವ ಬಣ್ಣದ ನೀರನ್ನು ಕಬ್ಬಿನ ನಾರಿನಿಂದ ಸಂಸ್ಕರಿಸುವುದು ಮತ್ತು ಗುಣಮಟ್ಟಗಳ ಪ್ರಯೋಗ: ಪರಿಸರ ಸ್ನೇಹಿ ನಾರುಗಳನ್ನು ಜವಳಿ ಕೈಗಾರಿಕೆಯಿಂದ ಹೊರಹೊಮ್ಮುವ ಬಣ್ಣದ ನೀರನ್ನು ಶುದ್ಧೀಕರಿಸಲು ಹೇರಳವಾಗಿ ಉಪಯೋಗಿಸಿ ಕೃತಕ ರಾಸಾಯನಿಕಗಳಿಂದ ನೀರು ಮತ್ತು ಭೂಮಿ ಕಲುಷಿತಗೊಳ್ಳುವುದನ್ನು ತಡೆಗಟ್ಟಬಹುದಾಗಿದೆ.

ಜವಳಿಗಳಿಗೆ ನೈಸರ್ಗಿಕ ಗಿಡಮೂಲಿಕೆಗಳಿಂದ ಮೆರಗುಗೊಳಿಸಿ ಅದರ ಕ್ರಿಯಾತ್ಮಕ ಗುಣಲಕ್ಷಣಗಳ ಮತ್ತು ಒಗೆತ ಗುಣಮಟ್ಟದ ಅಧ್ಯಯನ: ದವನ ಕಳ್ಳಿ ಮತ್ತು ಸೀತಾಫಲ ಎಲೆಯಲ್ಲಿ ಹೇರಳವಾಗಿ OH, H, N-H ಮತ್ತು C-O ಸ್ಟೆಚ್‌ಗಳು ಇರುವುದು ಕಂಡುಬಂದಿದೆ. ದವನ ರಸ, ಕಳ್ಳಿಯಲ್ಲಿ, ಸೀತಾಫಲ ಎಲೆಯಲ್ಲಿ

ಸಸ್ಯ ಸಾರಗಳಿದ್ದು ಇವುಗಳಲ್ಲಿ ಹೆಚ್ಚಿನ 1 ರಿಂದ 6 ಪ್ರತಿಶತ ಸೂಕ್ಷ್ಮಾಣುಗಳ ಬೆಳವಣಿಗೆ ಕಂಡು ಬಂದಿದ್ದು, ಅದೇ ರೀತಿ ಹೆಚ್ಚಿನ 7 ರಿಂದ 10 ಪ್ರತಿಶತ ಸಾರದಲ್ಲಿ ಸೂಕ್ಷ್ಮಾಣುಗಳ ಬೆಳವಣಿಗೆ ಇಲ್ಲದಿರುವುದು ಕಂಡುಬಂದಿದ್ದು, ಈ ಪ್ರತಿಶತ ಸಾರವನ್ನು ಬಟ್ಟೆಗಳ ಮೆರಗುವಿಕೆಗೆ ಉಪಯೋಗಿಸಬಹುದು ಎಂದು ಸಂಶೋಧನೆಯಿಂದ ದೃಢಪಟ್ಟಿದೆ.

ಕೌದಿ ಕಲೆಯ ಮೌಲ್ಯವರ್ದನೆ ಹಾಗೂ ವೈವಿದ್ಯಮಯ ಐಸಟಿ ವಿಧಾನದ ಮೂಲಕ ಕೌದಿ ವಿನ್ಯಾಸಗಳ ಅಭಿವೃದ್ಧೀಕರಣ : ಕೌದಿ ಕಲೆಯನ್ನು ಉಳಿಸಲು ಮತ್ತು ಜನಪ್ರಿಯವಾಗಿಸಲು ಇದರ ಮೌಲ್ಯವರ್ಧನೆ ತುಂಬ ಅತ್ಯಗತ್ಯ. ನಮ್ಮ ಸಾಂಪ್ರದಾಯಿಕ ಕೌದಿಗೆ ಆಧುನಿಕ ವಿನ್ಯಾಸದ ತತ್ವಗಳು ಅಳವಡಿಸಿಕೊಂಡು ಕಾಲಾತ್ಮಕವಾಗಿ ಬಟ್ಟೆಗಳ ತುಂಡುಗಳನ್ನು ಜೋಡಿಸಿ ಇದನ್ನು ಹೆಚ್ಚಿನ ರೀತಿಯಲ್ಲೂ ಜನಪ್ರಿಯಗೊಳಿಸಬಹುದು. ಮಹಿಳೆಯರು ಶೂನ್ಯ ಬಂಡವಾಳದಿಂದ ಈ ಉದ್ಯಮೆಯನ್ನು ತಮ್ಮ ಮನೆಯಲ್ಲೂ ಪ್ರಾರಂಭಿಸಬಹುದಾಗಿದೆ. ಸಾಂಪ್ರದಾಯದ ಸೊಗಡನ್ನು ಆಧುನಿಕ ಮೆರಗಿನಿಂದ ಸಂಯೋಗಿಸಿದಾಗ ಇದು ಒಂದು ಲಾಭದಾಯಕ ಉದ್ದಿಮೆಯಾಗುವುದರಲ್ಲಿ ಸಂದೇಹವಿಲ್ಲ. ಮಹಿಳೆಯರ ಸ್ವ–ಸಹಾಯ ಗುಂಪುಗಳ ಮುಖಾಂತರ ಈ ಉದ್ಯಮವನ್ನು ಸ್ಥಳೀಯವಾಗಿ ಸ್ಥಾಪಿಸಿ ತಮ್ಮ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಸುಧಾರಿಸುವುದರಲ್ಲಿ ಸಂದೇಹವಿಲ್ಲ.

ನೈಸರ್ಗಿಕ ಬಣ್ಣದ ಹತ್ತಿ ಬಟ್ಟೆಗಳ ಉತ್ಪಾದನೆ ಮತ್ತು ಗುಣಮಟ್ಟದ ಮೌಲ್ಯಮಾಪನ : ಕಡಿಮೆ ಸಾಂದ್ರತೆಯುಳ್ಳ ನೈಸರ್ಗಿಕ ಬಣ್ಣದ ಹತ್ತಿಯ ಎಳೆಗಳನ್ನು ಬಲವರ್ಧನೆ ಗೊಳಿಸಲು ಸಂಶ್ಲೇಷಿತ ಎಕ್ಸಲ್ ಎಳೆಗಳನ್ನು 70:30 (ನೈಸರ್ಗಿಕ ಬಣ್ಣದ ಹತ್ತಿ: ಎಕ್ಸಲ್) ಅನುಪಾತದಡಿಯಲ್ಲಿ ಮಿಶ್ರಣಮಾಡಿ ತೆರೆದ ಚರಕದ ಸಹಾಯದಿಂದ ತಯಾರಿಸಿದ ನೂಲು ಹೆಚ್ಚಿನ ಸಾಂದ್ರತೆಯನ್ನು ಒಳಗೊಂಡಿದ್ದು ಈ ನೂಲಿನಿಂದ ವಿವಿಧ ರೀತಿಯ ವಸ್ತ್ರ ಮತ್ತು ಉಡುಪುಗಳನ್ನು ತಯಾರಿಸಬಹುದು.

3.4.24 ಗೃಹ ವಿಜ್ಞಾನ ವಿಸ್ತರಣೆ ಮತ್ತು ಸಂವಹನ ನಿರ್ವಹಣಾ ವಿಭಾಗ

ರೈತ ಮಹಿಳಾ ಜ್ಞಾನ ಗುಂಪುಗಳನ್ನು ಕೃಷಿ ಹಾಗೂ ಕೃಷಿ ಪೂರಕ ಕ್ಷೇತ್ರಗಳಲ್ಲಿ ಸಂವಹನಾ ತಂತ್ರಜ್ಞಾನದ ಮೂಲಕ ಮಾಹಿತಿ ಪಡೆಯಲು ಪ್ರೇರೇಪಿಸುವುದು: ಶೇ. 64 ರಷ್ಟು ರೈತ ಮಹಿಳೆಯರು ತಮ್ಮ ಸ್ವಂತ ಮೊಬೈಲನ್ನು ಹೊಂದಿದ್ದರೆ ಶೇ. 93 ರಷ್ಟು ರೈತ ಮಹಿಳೆಯರು ತಮ್ಮ ಮನೆಯಲ್ಲಿ ಮೊಬೈಲನ್ನು ಹೊಂದಿದ್ದಾರೆ. ಮೊಬೈಲ್‌ನಲ್ಲಿ ಕರೆ ಮಾಡುವುದು, ಸಂದೇಶಗಳನ್ನು ನೋಡುವುದು ಹಾಗೂ ಮೊಬೈಲ್ ಕರೆಗಳನ್ನು ಸ್ವೀಕರಿಸುವುದು ಎಲ್ಲ ಮಹಿಳೆಯರಿಗೂ ತಿಳಿದಿರುತ್ತದೆ. ಶೇ. 45 ರಷ್ಟು ಮಹಿಳೆಯರು ಮೊಬೈಲ್‌ನಲ್ಲಿ ಬರುವ ಸಂದೇಶಗಳನ್ನು ತಾವೇ ಓದುತ್ತಾರೆ, ಶೇ. 11.42 ರಷ್ಟು ಮಹಿಳೆಯರು ಮಾತ್ರ ಮೊಬೈಲ್‌ನಲ್ಲಿ ಅಂತರ್ಜಾಲ ಹಾಗೂ ವ್ಯಾಟ್ಸ ಆ್ಯಪ್ (ಆಗುಹೋಗುಗಳ) ಸೌಲಭ್ಯಗಳನ್ನು ಹೊಂದಿದ್ದಾರೆ. ಎಲ್ಲಾ ರೈತ ಮಹಿಳೆಯರು ಮೊಬೈಲ್ ಬಳಕೆಯ ಜ್ಞಾನದ ಮಟ್ಟವನ್ನು ತಮ್ಮ ಕುಟುಂಬದ ಸದಸ್ಯರಿಂದ ಹಾಗೂ ಅಖಿಲ ಭಾರತ ಸಮನ್ವಯ ಸಂಶೋಧನ ಯೋಜನೆ – ವಿಸ್ತರಣಾ ವಿಭಾಗದಿಂದ ಆಯೋಜಿಸಿದಂತಹ ತರಬೇತಿಗಳಿಂದ ಹೆಚ್ಚಿಸಿಕೊಂಡಿದ್ದಾರೆ. ಶೇ. 100 ರಷ್ಟು ಪುರುಷ ಫಲಾನುಭವಿಗಳು ಮೊಬೈಲನ್ನು ಹೊಂದಿದ್ದಾರೆ ಆದರೆ ಅವರಿಗೆ ಕಂಪ್ಯೂಟರ್, ಕಿಯೋಸ್ಕ ಹಾಗೂ ಇ–ಮೇಲ್ ಬಳಕೆಗೆ ಸೌಲಭ್ಯವಿಲ್ಲ. ಶೇ. 57ರಷ್ಟು ಪುರುಷರು ಮೊಬೈಲ ಸಂದೇಶವನ್ನು ತಾವೇ ಓದುತ್ತಾರೆ ಹಾಗೂ ಉಳಿದ ಶೇ. 43 ಪುರುಷರು ತಮ್ಮ ಕುಟುಂಬದ ಸದಸ್ಯರ ಹಾಗೂ ಸ್ನೇಹಿತರ ಸಹಾಯ ಪಡೆದು ತಿಳಿದುಕೊಳ್ಳುತ್ತಾರೆ.

ಹವಾಮಾನ ಬದಲಾವಣೆಯಲ್ಲಿ ರೈತ ಮಹಿಳೆಯರ ಸಬಲೀಕರಣ: ಶೇ. 100 ರಷ್ಟು ಮಹಿಳೆಯರು ಹವಾಮಾನ ಬದಲಾವಣೆಗೆ ತಕ್ಕಂತೆ ನಾಟಿ ಮಾಡುವ ಕಾಲಾವಧಿಯನ್ನು, ಹೊಲದಲ್ಲಿ ಸರದಿ ಬೆಳೆಗಳು ಹಾಗೂ ಅಂತರ ಬೇಸಾಯ ಪದ್ಧತಿಗಳನ್ನು ಹಾಗೂ. ಶೇ. 88 ರಷ್ಟು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುತಿದ್ದಾರೆ.

ಉತ್ತರ ಕರ್ನಾಟಕದ ಪರಿಸರ ಪ್ರವಾಸೋದ್ಯಮ ಕೇಂದ್ರಗಳ ಅಧ್ಯಯನ: ಪ್ರವಾಸಿಗರ ಅಭಿಪ್ರಾಯ, ನಿರೀಕ್ಷೆ ಹಾಗೂ ಸಂತೃಪ್ತಿಗಳ ಮಟ್ಟವನ್ನು ಅಳತೆ ಮಾಡಿದಾಗ ಹೆಚ್ಚು ಪ್ರವಾಸಿಗಳು ಉತ್ತಮ (59.50%) ಹಾಗೂ ಅತಿ ಉತ್ತಮ (47.50%) ಅಭಿಪ್ರಾಯ ಹೊಂದಿರುವುದು ಕಂಡು ಬಂದಿದೆ. ಸುಮಾರು ಶೇಕಡ 63 ರಷ್ಟು ಪ್ರವಾಸಿಗರು ತಮ್ಮ ನಿರೀಕ್ಷೆಗೆ ತಕ್ಕಂತೆ ಈ ತಾಣಗಳು ಇವೆ ಎಂದು ಅಭಿಪ್ರಾಯಪಟ್ಟರೆ, ಶೇಕಡ 24.50 ರಷ್ಟು ಪ್ರವಾಸಿಗರಿಗೆ ಭೇಟಿ ಅವರ ನಿರೀಕ್ಷೆಗೂ ಮೀರಿದ ಅನುಭವವಾಗಿತ್ತು. ಶೇಕಡ 87 ರಷ್ಟು ಪ್ರವಾಸಿಗರು ಪ್ರವಾಸದ ಬಗ್ಗೆ ಪೂರ್ಣ ಸಂತೃಪ್ತಿ ವ್ಯಕ್ತಪಡಿಸಿದರು.

ಅನ್ನಭಾಗ್ಯ ಯೋಜನೆಯಿಂದ ಗ್ರಾಮೀಣ ಜನರ ಆಹಾರ ಪದ್ಧತಿ ಮತ್ತು ಬದುಕಿನ ಗುಣಮಟ್ಟದ ಮೇಲೆ ಆಗುತ್ತಿರುವ ಪರಿಣಾಮ: ಶೇಕಡ ನೂರಕ್ಕೆ ನೂರರಷ್ಟು ಎಮ್ ನರೇಗಾದ ಗಳಿಕೆಯನ್ನು ಆಹಾರ ಪದಾರ್ಥ, ಔಷಧಿ ಮತ್ತು ಕುಟುಂಬದ ಸದಸ್ಯರ ವಿದ್ಯಾಭ್ಯಾಸಕ್ಕೆ ಬಳಸುತ್ತಿದ್ದಾರೆ. ಧಾನ್ಯಗಳು ಮತ್ತು ತರಕಾರಿಗಳ ಬಳಕೆಯು ಹಾಗೂ ಹಣ್ಣು ಹಂಪಲುಗಳ ಸೇವನೆಯು ಮೊದಲಿಗಿಂತ ಹೆಚ್ಚಾಗಿದೆ ಎಂದು ಎಲ್ಲ ಫಲಾನುಭವಿಗಳು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಾಲು ಮತ್ತು ಮಾಂಸ ಪದಾರ್ಥಗಳ ಬಳಕೆಯು ಮೊದಲಿನಷ್ಟೇ ಇದೆ. ಒಟ್ಟಾರೆ ಅವರ ಬದುಕಿನ ಗುಣಮಟ್ಟ ಶೇಕಡ 43.98 ರಷ್ಟು ಹೆಚ್ಚಾಗಿದೆ.

ಸಮೇತಿ (ಉತ್ತರ) ದ ಕಾರ್ಯಕ್ಷಮತೆ: ಸಮೇತಿ (ಉತ್ತರ) ದ ಕಾರ್ಯಕ್ಷಮತೆ, ವಿಸ್ತರಣಾ ಕಾರ್ಯಕರ್ತರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂದು ಅರಿಯಲು 2018–19 ನೇ ಸಾಲಿನಲ್ಲಿ ಉತ್ತರ ಕರ್ನಾಟಕದ 3 ಜಿಲ್ಲೆಗಳಲ್ಲಿ ಅಂದರೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅಧ್ಯಯನ ಕೈಗೊಳ್ಳಲಾಯಿತು. ಅಧ್ಯಯನದ ಫಲಿತಾಂಶಗಳನ್ನು ಪರಿಗಣಿಸಿದಾಗ, 190 ಮಾದರಿಗಳಲ್ಲಿ 74 ಶೇಕಡಾವಾರು ಜನರ ಜ್ಞಾನಮಟ್ಟ ಹೆಚ್ಚಾಯಿತು. ಕೆಲಸದಲ್ಲಿ ಅವರ ಸಾಧನೆ ಪರಿಗಣಿಸಿದಾಗ, 85 ಶೇಕಡಾವಾರು ಮತ್ತು ತರಬೇತಿಗಳ ಉಪಯೋಗ, 77 ಶೇಕಡಾವಾರು ಆಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

3.4.25 ಕುಟುಂಬ ಸಂಪನ್ಮೂಲ ನಿರ್ವಹಣೆ ವಿಭಾಗ

ತರಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ಲಿಂಗ ಸಮಾನತೆಗಾಗಿ ಶ್ರಮ ಕಡಿಮೆಗೊಳಿಸುವ ತಾಂತ್ರಿಕತೆಗಳು: ಶ್ರಮ ಕಡಿಮೆಗೊಳಿಸುವ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದೊಂದಿಗೆ ಲಿಂಗ ಸ್ನೇಹಿಯಾಗಿರುವ ತಾಂತ್ರಿಕತೆಗಳ ಪ್ಯಾಕೆಜನ್ನು ತರಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ಗುರುತಿಸಲಾಗಿದೆ.

ಸಸಿ ನಾಟಿ ಮಾಡುವ ಸಾಧನ: ಸಾಂಪ್ರದಾಯಿಕ ಪದ್ಧತಿಗೆ (108 ಸಸಿಗಳು/ಘಂಟೆಗೆ) ಹೋಲಿಸಿದಾಗ ನಾಟಿ ಮಾಡುವ ಸಾಧನದ ಉಪಯೋಗದಿಂದ ಕಾರ್ಯದಕ್ಷತೆಯ ಹೆಚ್ಚುವಿಕೆ (133 ಸಸಿಗಳು/ಘಂಟೆಗೆ) ಹಾಗೂ ಕೆಲಸದ ದೈಹಿಕ ಶ್ರಮ ಕಡಿಮೆಯಾಗಿರುವುದು ಹಾಗೂ ಅಹಿತಕರ ಕೆಲಸದ ಭಂಗಿಯನ್ನು ತೆಗೆದು ಹಾಕಿರುವುದು ತಿಳಿದು ಬಂದಿದೆ.

ಮೋಟಾರ್ ಆಧಾರಿತ ಶೇಂಗಾಕಾಯಿ ಬಿಡಿಸುವ ಸಾಧನದ ಅಭಿವೃದ್ಧಿ ಪಡಿಸುವಿಕೆ/ ಯಾಂತ್ರೀಕೃತ ಶೇಂಗಾಕಾಯಿ ಬಿಡಿಸುವ ಸಾಧನದ ಅಭಿವೃದ್ಧಿ: ಸಾಂಪ್ರದಾಯಕ ಪದ್ಧತಿಗೆ ಹೊಲಿಸಿದಾಗ (2 ಕೆ.ಜಿ/ ಘಂಟೆ) ಒಂದು ತಾಸಿನಲ್ಲಿ 25 ಕೆ.ಜಿ ಶೇಂಗಾ ಕಾಯಿಗಳನ್ನು ಈ ಯಂತ್ರದ ಮೂಲಕ ಸರಾಗವಾಗಿ ಕೀಳಬಹುದು.

ಬಿದಿರು ಉತ್ಪನ್ನಗಳನ್ನು ತಯಾರಿಸುವ ಉದ್ಯಮದಲ್ಲಿ ತೊಡಗಿರುವ ಮಹಿಳೆಯರ/ಕಾರ್ಮಿಕರ ಉತ್ತಮ ಆರೋಗ್ಯಕ್ಕಾಗಿ ಹಾಗೂ ಕೆಲಸ / ಕಾರ್ಯ ಸುಧಾರಣೆಗಾಗಿ ದಕ್ಷತಾ ಶಾಸ್ತ್ರದ ಅಳವಡಿಕೆ: ಬಿದಿರು ಉತ್ಪಾದನಾ ವಸ್ತುಗಳ ಮಾರಾಟವನ್ನು ಮಹಿಳೆಯರು ಹಾಗೂ ಪುರುಷರು ಸೇರಿ ನಿರ್ವಹಿಸುತ್ತಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ. ಈ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಮೊಣಚಾದ / ಚೂಪಾದ ಮತ್ತು ಭಾರವಾದ (ಅರ್ಧ ಕೆ.ಜಿ. ಯಿಂದ ಒಂದು ಕೆ.ಜಿ. ತೂಕವುಳ್ಳ) ಬಿದಿರು ಕತ್ತರಿಸುವ ಹಾಗೂ ಎಳೆ ತೆಗೆಯುವ ಸಲಕರಣೆ – ಕೊಯಿತಾ / ಉಪಕರಣ ಉಪಯೋಗಿಸುತ್ತಿರುವುದು ಕಂಡುಬಂದಿದೆ. ಸರಾಸರಿ ಮಹಿಳೆಯರು ಹೆಚ್ಚಿನ ಸಂಖ್ಯೆಯ ಕೆಲಸದ ದಿನಗಳನ್ನು ಬಿದಿರು ಬುಟ್ಟಿ ಹೆಣೆಯುವ ಚಟುವಟಿಕೆಯಲ್ಲಿ (162.75) ನಂತರ ಬಿದಿರು ಸೀಳುವ/ಎಳೆತೆಗೆಯುವ ಚಟುವಟಿಕೆ (40.08) ಮತ್ತು ಬಿದಿರು ಕತ್ತರಿಸುವ ಚಟುವಟಿಕೆಯಲ್ಲಿ (3.12) ತೊಡಗಿಸಿಕೊಂಡಿರುವುದು ತಿಳಿದುಬಂದಿದೆ. ಬಿದಿರು ವಸ್ತುಗಳ ತಯಾರಿಕಾ ಉತ್ಪಾದನಾ ಚಟುವಟಿಕೆಯಲ್ಲಿ ಮಹಿಳೆಯರ ಶ್ರಮದ ಅನುಭವದ ಗ್ರಹಿಕೆಯ ಕುರಿತು ಹೇಳುವುದಾದರೆ ಬಿದಿರು ಸೀಳುವ/ಎಳೆತೆಗೆಯುವ ಹಾಗೂ ಬಿದಿರು ಕತ್ತರಿಸುವ ಚಟುವಟಿಕೆಗಳು ಹೆಚ್ಚು ಶ್ರಮದಾಯಕವಾಗಿರುವುದು (ಶ್ರಮದ ಸೂಚ್ಯಾಂಕ:21.86 & 21.99 ಅನುಕ್ರಮವಾಗಿ ಹೊಂದಿದೆ) ತಿಳಿದು ಬಂದಿದೆ.

ಬಿದಿರು ಕತ್ತರಿಸುವ ಹಾಗೂ ಎಳೆ ತೆಗೆಯುವ ಚಟುವಟಿಕೆಗಳ ಎರ್ಗಾನಾಮಿಕ್ಸ್ ವಿಶ್ಲೇಷಣೆ: ಹೆಚ್ಚಿನ ಪ್ರಮಾಣದ ಮಹಿಳೆಯರು ದೇಹದ ಬೇರೆ ಬೇರೆ ಭಾಗಗಳಲ್ಲಿ ಅಂದರೆ ಕೆಳಬೆನ್ನು, ಕಾಲು/ಪಾದ, ಅಂಗೈಗಳಲ್ಲಿ (ಶೇ. 66.66) ಎಲುಬು ಮತ್ತು ಸ್ನಾಯುಗಳ ತೊಂದರೆಗಳನ್ನು ಅನುಭವಿಸುತ್ತಿರುವುದು, ನಂತರ ಬೆನ್ನಿನ ಮೇಲ್ಭಾಗ, ಕೆಳ ಕಾಲುಗಳಲ್ಲಿ (ಶೇ. 63.33) ಹಾಗೂ ಭುಜ, ಬೆರಳುಗಳಲ್ಲಿ (ಶೇ. 60) ಎಲುಬು ಮತ್ತು ಸ್ನಾಯುಗಳ ತೊಂದರೆಗಳನ್ನು ಅನುಭವಿಸುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಬಿದಿರು ಕತ್ತರಿಸುವ ಹಾಗೂ ಸೀಳುವ/ಎಳೆತೆಗೆಯುವ ಚಟುವಟಿಕೆಯ ಎರ್ಗಾನಾಮಿಕ್ಸ್ ವಿಶ್ಲೇಷಣೆಯ ಫಲಿತಾಂಶದಿಂದ ಕೆಲಸಗಾರರು ದೈಹಿಕ ಶ್ರಮದ ಹಾಗೂ ಕೆಲಸದಲ್ಲಿ ಅನುಸರಿಸುವ ಭಂಗಿಯಲ್ಲಿ ತೊಂದರೆಯನ್ನು ಅನುಭವಿಸುತ್ತಿರುವುದು ತಿಳಿದುಬಂದಿದೆ.

ಜವಳಿ ಉದ್ಯಮಗಳಲ್ಲಿ ಕಾರ್ಮಿಕರ ಔದ್ಯೋಗಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುವುದು: ನೂಲುವ ಘಟಕ, ರಿಂಗ್ ಫ್ರೇಮ್, ರೀಲಿಂಗ್, ಡ್ರಾಯಿಂಗ್ ಮತ್ತು ಕೋಂಬಿಂಗ್ ವಿಭಾಗಗಳು 86–95 ಡಿಬಿಎ ದಿಂದ ಹೆಚ್ಚಿನ ಶಬ್ದ ಮಟ್ಟವನ್ನು ಹೊಂದಿದ್ದ ನೇಯ್ಗೆ ಘಟಕಗಳ 92–99 ಡಿಬಿಎ ಶಬ್ದವನ್ನು ಗಮನಿಸಲಾಗಿದೆ ಎಂದು ಫಲಿತಾಂಶಗಳು ತೋರಿಸಿವೆ. ನೂಲುವ ಮತ್ತು ನೇಯ್ಗೆ ಘಟಕಗಳೆರಡರಲ್ಲೂ ಶಬ್ದ ಮಟ್ಟವು ಅಧಿಕವಾಗಿತ್ತು ಮತ್ತು ಗಮನಿಸಲಾದ ಶಬ್ದ ಮಟ್ಟವು ಅನುಮತಿ ಮಿತಿಗಿಂತಲೂ ಹೆಚ್ಚಾಗಿತ್ತು. ಭಾರಿ ಕೆಲಸಗಾರರು ಹೆಚ್ಚಿನ ಶಬ್ದಕ್ಕೆ ಒಡ್ಡಿಕೊಳ್ಳುವುದರಿಂದ ತಲೆನೋವು, ಒತ್ತಡ, ಸಂವಹನ ಅಡಚಣೆ ಮತ್ತು ವಿಚಾರಣೆಯ ಸಾಮರ್ಥ್ಯದ ತೊಂದರೆಗಳನ್ನು ಎದುರಿಸುತ್ತಿದ್ದಾರೆ.

3.5 ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ 2018–19ನೇ ಸಾಲಿನಲ್ಲಿ ಅನುಮೋದನೆಗೊಂಡ ಅರೆಕಾಲಿಕ ಯೋಜನೆಗಳು

ಕ್ರ.ಸಂ.	ಯೋಜನೆಯ ಶೀರ್ಷಿಕೆ	ಮುಖ್ಯ ಸಂಶೋಧಕರು	ಅವಧಿ (ವರ್ಷಗಳಲ್ಲಿ)	ಮೊತ್ತ (ರೂ.ಗಳಲ್ಲಿ)	ಧನಸಹಾಯ ಸಂಸ್ಥೆ
1	Analysis on the impact of Bt transgenic events on the predators of aphid	ಸಿದ್ದಲಿಂಗಾ ವಿ. ಹೂಗಾರ	3	27.50	ಡಿಎಸ್‌ಟಿ
2	Exploitation of insect gut microbes for biodegradation of gossypol in cottonseed meal	ಎಸ್. ಎಮ್‌ಡಿ. ಅಕ್ಬರ್	3	7.00	ಡಿಎಸ್‌ಟಿ
3	Evaluation and assessment of farmer's wheat variety for yield, insects and disease resistance in different agro-ecological zones of Karnataka	ಸುಮಾ ಎಸ್. ಬಿರಾದಾರ	1	1.30	ಡಿಎಸ್‌ಟಿ

4	On Impact of LU/LC and catchment characteristics on runoff and Ground water dynamics of Western Ghats, Karnataka	ಎಚ್. ಶಿವಣ್ಣ	3	8.31	ಜಿಒಐ
5	Use of CRISPR-Cas9 to control chilli leaf curl virus associated with murda complex disease	ಬಸವರಾಜ ಬಾಗೇವಾಡಿ	3	33.88	ಜಿಒಐ
6	Hypergravity as a novel tool for enhancing germination and seedling vigour in selected crops	ರವಿಕುಮಾರ ಹೊಸಮನಿ	3	32.99	ಜಿಒಐ
7	Network project on conservation of lac insect genetic resources	ರೂಪಾ ಎಸ್. ಪಾಟೀಲ	2	5.50	ಜಿಒಐ
8	Development of thermo-tolerant variety	ಆರ್. ಕೃಷ್ಣವೇಣಿ	3	25.50	ಜಿಒಐ
9.	Effect of homobrassinolide on yield and quality of soybean and groundnut crops	ಯು. ವಿ. ಮಮ್ಮಿಗಟ್ಟಿ	2	10.00	ಇತರೆ
10	Diversification of floral resources to augment insect pollinators for sustainable yield enhancement	ಡಿ. ಎನ್. ಕಾಂಬ್ರೇಕರ್	1	21.71	ಇತರೆ
11	Agrivoltaic Project for growing crops under solar panels	ಎಚ್. ವೆಂಕಟೇಶ	3	101.00	ಇತರೆ
12	Standardization and optimization of recent molecules in the effective management major foliar diseases of tomato and cucumber under climate resilience in northern Karnataka	ಎಸ್. ಎ. ಅಷ್ಟಪುತ್ರೆ	2	12.27	ಇತರೆ
13	Evaluation of bioefficacy and phytotoxicity of Metiram 70% WG against frog eye leaf spot, target leaf spot and Myrothecium leaf spot diseases of Soybean and Purple blotch, Stemphylium blight diseases of Onion	ವಿ. ಆರ್. ಕುಲಕರ್ಣಿ	2	6.50	ಇತರೆ
14	Evaluation of Bioefficacy and phytotoxicity of Topramezone 336 g/l SC against weeds in Maize and its effect on succeeding crop	ಬಿ. ಎನ್. ಅರವಿಂದ ಕುಮಾರ	1	2.95	ಇತರೆ
15	Effect of one time land application of treated distillery spentwash on soil health and crop yield	ಎಮ್. ಬಿ. ದೊಡ್ಡಮನಿ	5	30.35	ಇತರೆ
16	Evaluation of new sugarbeet varieties/different sugar beet genotypes to sowing dates on growth, yield and quality under transitional tract of Karnataka	ಜೆ. ಎ. ಹೊಸಮಠ	2	8.00	ಇತರೆ
17	Water saving techniques in sugarcane	ಎಸ್. ಎಸ್. ನೂಲಿ	2	4.00	ಇತರೆ
18	Efficacy evaluation and optimization of new molecules in the management of major weeds of wheat in northern Karnataka	ಕೆ. ಎನ್. ಪವಾರ	2	13.36	ಇತರೆ
19	Evaluation of Lactoperoxidase enzyme for its effect on intake of Casuarina Leaves by Livestock	ಜಿ.ಕೆ. ಅನಿಲ ಕುಮಾರ	1	5.42	ಇತರೆ
20	Novel approaches in the management of diseases and insect pests of wheat using UPFI 115 a seed treatment option under changing climate	ಶಾಮರಾವ್ ಜಹಾಗೀರದಾರ	2	8.58	ಇತರೆ
21	Evaluation of Emamectin Benzoate + Lufenuron, Cyantraniliprole + Thiamethoxan and Chlorantraniliprole + Lambdacyhalothrin combination against insect pests of corn	ಎಚ್. ಎಮ್. ಶೈಲಾ	2	10.00	ಇತರೆ

22	Identifying the genomic regions and genes for drought and heat tolerance in groundnut	ರಮೇಶ ಭಟ್	4	201.00	ಐಸಿಎಆರ್
23	Management of bollworms and sucking pests of cotton with selective advanced generation insecticide	ಎಸ್. ಎಸ್. ಗುಡಿಕೇರಿ	2	9.00	ಐಸಿಎಆರ್
24	Management of pod borer (Helicoverpa armigera Hub.) using avermectin insecticide (emamectin benzoate 5% SG) in pigeonpea and chickpea	ಸುಭಾಷ್ ಕಂದಕೂರ	1	8.00	ಐಸಿಎಆರ್
25	Awareness Creation and Popularization of Community Science	ಶೋಭಾ ನಾಗನೂರ	1	15.00	ಐಸಿಎಆರ್
26	Assessment of faculty Teaching Competencies in Farm Universities and Strategies to Enhance	ಕೆ. ವಿ. ಆಶಾಲತಾ	1	5.90	ಐಸಿಎಆರ್
27	Nutrient composition, value addition and commercialization of lesser exploited millets	ಸರೋಜಿನಿ ಕರಕಣ್ಣವರ್	3	182.69	ಐಸಿಎಆರ್
ಒಟ್ಟು				**797.71**	

3.6 ಕೃಷಿ ರಾಸಾಯನಿಕಗಳು / ಬೆಳೆಗಳ ಹೈಬ್ರೀಡ್ ಮೂಲಕ ಕ್ರೋಢಿಕರಿಸಿದ ಮೊತ್ತ (ರೂ. ಲಕ್ಷಗಳಲ್ಲಿ)

ಉತ್ಪನ್ನಗಳು/ ಪ್ರಾತ್ಯಕ್ಷಿಕೆಗಳು	2013-14		2014-15		2015-16		2016-17		2017-18		2018-19	
	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ	ಪ್ರಯೋಗಗಳು/ ಮಿಶ್ರತಳಿಗಳ ಸಂಖ್ಯೆ	ಮೊತ್ತ
ರಾಸಾಯನಿಕಗಳು	167	148.73	121	129.65	144	304.05	133	273.08	200	286.97	140	249.57
ಬೆಳೆ ಹೈಬ್ರಿಡ್‌ಗಳು	193	73.63	231	84.72	138	85.52	101	70.73	132	91.99	181	135.11
ಬಿ.ಟಿ. ಹತ್ತಿ ಹೈಬ್ರಿಡ್‌ಗಳು	39	39.33	45	42.25	67	76.68	37	41.52	04	4.60	04	4.72
ಕೃಷಿ ಉಪಕರಣಗಳು	12	2.36	28	2.70	-	-	-	-	-	-	02	0.47
ಪ್ರಾತ್ಯಕ್ಷಿಕೆಗಳು	10	3.00	09	2.70	-	-	-	-	-	-	-	-
ಒಟ್ಟು	**421**	**267.05**	**435**	**262.02**	**349**	**466.25**	**271**	**385.53**	**336**	**383.57**	**327**	**389.87**

3.7 2018–19ಲ್ಲಿ ಕೈಗೊಂಡ ಬೀಜೋತ್ಪಾದನೆ

ಕ್ರ.ಸಂ.	ವರ್ಗೀಕರಣ	ಉತ್ಪಾದಿಸಿದ ಬೀಜಗಳ ಪ್ರಮಾಣ (ಕ್ವಿ.)
1	ತಳಿ ವರ್ಧಕ ಬೀಜ	6210.85
2	ಫೌಂಡೇಶನ್ ಬೀಜ	3151.80
3	ಪ್ರಮಾಣೀಕೃತ/ಟಿಎಲ್ ಬೀಜ	10986.00
4	ತರಕಾರಿ (ಟಿಎಲ್)	80.00
ಒಟ್ಟು ಮೊತ್ತ (ಮುಂಗಾರು ಮತ್ತು ಹಿಂಗಾರು)		**20428.65**

ವಿಸ್ತರಣೆ

4

ವಿಸ್ತರಣೆ

4.1 ಪ್ರಸ್ತಕ ಸಾಲಿನ ಮುಖ್ಯ ಸಾಧನೆಗಳು

I	ಕೃಷಿ ವಿಜ್ಞಾನ ಕೇಂದ್ರ
1	ವಿವಿಧ ಬೆಳೆಗಳಲ್ಲಿ ಸ್ಥಳೀಯ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು, ಕೃಷಿ ವಿಜ್ಞಾನ ಕೇಂದ್ರವು ಒಟ್ಟು ಏಳು ಕ್ಷೇತ್ರ ಪರೀಕ್ಷೆಗಳನ್ನು 10 ರೈತರ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿದೆ.
2	ವಿಶ್ವವಿದ್ಯಾಲಯದಿಂದ ಅಭಿವೃದ್ದಿ ಪಡಿಸಿದ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸಲು ಒಟ್ಟು 22 ಪ್ರಾತ್ಯಕ್ಷಿಕೆಗಳಲ್ಲಿ 16 ಮುಂಚೂಣಿ ಪ್ರಾತ್ಯಕ್ಷಿಕೆ ಹಾಗು 6 ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು 466 ರೈತರ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗಿದೆ.
3	ವಿವಿಧ ವಿಷಯಗಳಲ್ಲಿ ಒಟ್ಟು 91 ತರಬೇತಿಗಳನ್ನು 2679 ಜನರಿಗೆ (73–ರೈತ/ರೈತ ಮಹಿಳೆಯರಿಗೆ, 17–ಗ್ರಾಮೀಣ ಯುವಕರಿಗೆ, 1–ವಿಸ್ತರಣಾ ಅಧಿಕಾರಿಗೆ ಹಾಗೂ 2 ಶುಲ್ಕ ಸಹಿತ) ತರಬೇತಿಗಳನ್ನು ಆಯೋಜಿಸಲಾಗಿತ್ತು.
4	ಧಾರವಾಡ ಜಿಲ್ಲೆಯ ಸಸ್ಯತಳಿ ಸಂರಕ್ಷಣೆಯಲ್ಲಿ ಪಾಲ್ಗೊಂಡ ರೈತ ಹಾಗೂ ಪಾಲುದಾರರ ಸಾಮರ್ಥ್ಯ ವೃದ್ಧಿಸಲು "ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯ ಜಾಗೃತಿ" ಕುರಿತು ತರಬೇತಿ ಕಾರ್ಯಕ್ರಮವನ್ನು ಕೇಂದ್ರದ ಆವರಣದಲ್ಲಿ ನವದೆಹಲಿಯ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ ಸಹಯೋಗದೊಂದಿಗೆ ಆಯೋಜಿಸಲಾಗಿದೆ.
5	ಕೃಷಿ ವಿಜ್ಞಾನ ಕೇಂದ್ರವು ವಿವಿಧ ವಿಸ್ತರಣಾ ಚಟುವಟಿಕೆಗಳಾದ ಕ್ಷೇತ್ರೋತ್ಸವಗಳು–5, ದೂರದರ್ಶನ ಕಾರ್ಯಕ್ರಮಗಳು–13, ವಿಶ್ಲೇಷಣಾತ್ಮಕ ಭೇಟಿ–43, ಗುಂಪು ಸಭೆ–14, ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸಗಳು–13, ದೂರವಾಣಿ ಮುಖಾಂತರ ರೈತರಿಗೆ ಸಲಹೆ–47, ವಿಜ್ಞಾನಿಗಳ ಕ್ಷೇತ್ರ ಭೇಟಿಗಳು–141, ಕೃಷಿ ವಿಜ್ಞಾನ ಕೇಂದ್ರಕ್ಕೆ ರೈತರ ಭೇಟಿ–47, ಪ್ರಮುಖ ದಿನಗಳ ಆಚರಣೆ–17, ಪದ್ಧತಿ ಪ್ರಾತ್ಯಕ್ಷಿಕೆ–21, ಚಲನಚಿತ್ರ ಪ್ರದರ್ಶನ–2, ಆಕಾಶವಾಣಿಯಲ್ಲಿ ಮಾಹಿತಿ ಪ್ರಸರಣ–24, ವಸ್ತುಪ್ರದರ್ಶನ–4, ಹಸ್ತ ಪತ್ರಿಕೆಗಳು–10, ವಾರ್ತಾ ಪತ್ರಗಳು–8, ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಣೆ–30, ಜನಪ್ರಿಯ ಲೇಖನಗಳು–8, ಸಂಶೋಧನಾ ಲೇಖನಗಳು–2, ಸಂಶೋಧನಾ ಲೇಖನದ ಸಾರಾಂಶಗಳು–14, ತಾಂತ್ರಿಕ ಕೈಪಿಡಿ–1, ತರಬೇತಿ ಕೈಪಿಡಿಗಳು–3 ಮುಂತಾದವುಗಳ ಮೂಲಕ ರೈತ ಸಮುದಾಯಕ್ಕೆ ತಾಂತ್ರಿಕ ವರ್ಗಾವಣೆಗಾಗಿ ಶ್ರಮಿಸಿದೆ.
6	ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರದಲ್ಲಿ ಒಟ್ಟು 6.5 ಕ್ವಿಂಟಾಲ್ (ಹಿಂಗಾರಿ ಹೆಸರಿನ ತಳಿ ಐಪಿಎಮ್–02–14: 0.5 ಕ್ವಿಂ. ಹಾಗೂ ಗೋದಿ ತಳಿ ಡಿಡಬ್ಲೂಆರ್–162: 6 ಕ್ವಿಂ.) ಬೆಳೆಗಳ ಬೀಜೋತ್ಪಾದನೆ ಹಾಗೂ ಸಿಡ್ ಹಬ್ ಯೋಜನೆಯಡಿ ರೈತರ ಹೊಲಗಳಲ್ಲಿ ಒಟ್ಟು 340.7 ಕ್ವಿಂಟಾಲ್ (ಹೆಸರು ತಳಿ ಡಿಜಿಜಿವಿ–2: 279.05 ಕ್ವಿಂ. ಹಾಗೂ ಉದ್ದು ತಳಿ ಡಿಯು–1: 61.65 ಕ್ವಿಂ.) ಬೆಳೆಗಳ ಬೀಜೋತ್ಪಾದನೆ ಕೈಗೊಳ್ಳಲಾಗಿದೆ.
7	ಕೃಷಿ ವಿಜ್ಞಾನ ಕೇಂದ್ರವು ರೂ. 4,60,570/– ಮೊತ್ತದಷ್ಟು ವಿವಿಧ ಜಾತಿಯ ಒಟ್ಟು 30806 ತೋಟಗಾರಿಕಾ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಮಾರಾಟ ಮಾಡಲಾಗಿದೆ.
8	ಕೇಂದ್ರದ ವತಿಯಿಂದ ಒಟ್ಟು 1158 ಮಣ್ಣಿನ, 155 ನೀರಿನ ಹಾಗೂ 145 ಸಸ್ಯ ಮಾದರಿಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.
9	ವಿವಿಧ ವಿಷಯಗಳಿಂದ ಒಟ್ಟು 112 ಮೊಬೈಲ್ ಪಠ್ಯ ಸಂದೇಶಗಳನ್ನು 34,031 ರೈತರಿಗೆ ನೀಡಲಾಗಿದೆ.
10	ತಂತ್ರಜ್ಞಾನ ವರ್ಗಾವಣೆ: ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರದಿಂದ ರೈತರಿಗಾಗಿ ವಿವಿಧ ಕೃಷಿ ತಂತ್ರಜ್ಞಾನ ವರ್ಗಾವಣೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿ ಇವುಗಳಲ್ಲಿ ಸುಮಾರು 20 ಒಳ ಆವರಣ ತರಬೇತಿ, 31 ಹೊರ ಆವರಣ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇವುಗಳಲ್ಲದೆ ಕ್ಷೇತ್ರ ಭೇಟಿ, ಕ್ಷೇತ್ರೋತ್ಸವ, ಕ್ಷೇತ್ರ ಪರೀಕ್ಷೆ ಹಾಗೂ ಕ್ಷೇತ್ರ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಗುಂಪು ಚರ್ಚೆಯ ಮುಖಾಂತರ ಆಯೋಜಿಸಲಾಗಿದೆ.
11	ಮಹಿಳಾ ಕಿಸಾನ್ ದಿವಸ: ಡಿಸೆಂಬರ್ 04ರಂದು ಮಹಿಳಾ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ವನಶ್ರೀ (NGO) ಯೋಜನೆ ಸಂಯೋಗದಿಂದ ಕುಂಚೂರ ಗ್ರಾಮದಲ್ಲಿ ಆಚರಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ, ಕೃಷಿಯಲ್ಲಿ ಮಹಿಳೆಯರ ಪಾತ್ರ ಮತ್ತು ಅವರ ಜೀವನ ಶೈಲಿಯ ವಿಷಯಗಳ ಕುರಿತು ಚರ್ಚಿಸಲಾಯಿತು.
12	ವಿಶ್ವ ಆಹಾರ ದಿನ: ಅಕ್ಟೋಬರ್ 16 ರಂದು, 2018ರಂದು ವಿಶ್ವ ಆಹಾರ ದಿನವನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ 50 ಕ್ಕಿಂತ ಹೆಚ್ಚು ರೈತರು, ರೈತರ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕೇಂದ್ರದ ವಿಜ್ಞಾನಿಗಳು ಈ ಕಾರ್ಯಕ್ರಮದ ಪ್ರಾಮುಖ್ಯತೆ ಕುರಿತು ರೈತರಿಗೆ ಮತ್ತು ವಿದ್ಯಾರ್ಥಿಗಳ ಜೊತೆ ಮಾಹಿತಿ ಹಂಚಿಕೊಂಡರು.
13	24–02–19 ರಂದು ಪ್ರಧಾನ ಮಂತ್ರಿ ಸಮ್ಮಾನ ನಿಧಿ ಯೋಜನೆಯನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹನುಮನಮಟ್ಟಿ, ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು, ಕೃಷಿ ಇಲಾಖೆಯ ಸಿಬ್ಬಂದಿಗಳು ಮತ್ತು 100 ಕ್ಕೂ ಹೆಚ್ಚು ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.
14	ಕೃಷಿ ಮೇಳ–2018 : ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು 2018ನೇ ಸಾಲಿನ ಧಾರವಾಡ ಕೃಷಿ ವಿಶ್ವವಿದ್ಯಾಲಯ, ಕೃಷಿ ಮೇಳ (22–09–2018 ರಿಂದ 25–09–2018) ಮತ್ತು ಜಿಲ್ಲಾ ಸಾವಯವ ಹಾಗೂ ಸಿರಿಧಾನ್ಯ ಮೇಳ ಮತ್ತು ಹಿರೇಕೆರೂರ ತಾಲೂಕಿನಲ್ಲಿ (04–01–2019 ರಿಂದ 05–01–2019) ನಡೆದ ಮೇಳಗಳಲ್ಲಿ ಭಾಗವಹಿಸಿದ್ದರು.

15	ವಿಶ್ವ ಮಣ್ಣು ಆರೋಗ್ಯ ದಿನ: ಡಿಸೆಂಬರ್ 5 ರಂದು ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಆಚರಿಸಲಾಗಿತ್ತು, ಮಣ್ಣು ವಿಜ್ಞಾನಿಗಳು ವಿಶ್ವ ಮಣ್ಣು ಆರೋಗ್ಯ ದಿನದ ಮಹತ್ವದ ಕುರಿತು ವಿವರವಾಗಿ ತಿಳಿಸಿದರು. ಮಣ್ಣು ಮಾದರಿ ಮತ್ತು ಪರೀಕ್ಷೆಯನ್ನು ಪ್ರಾತ್ಯಕ್ಷಿಕೆಯಿಂದ ತಿಳಿಸಿದರು. ಸುಮಾರು 30 ಮಣ್ಣಿನ ಕಾರ್ಡಗಳನ್ನು ರೈತರಿಗೆ ವಿತರಿಸಲಾಯಿತು.
16	ವಿಶ್ವ ಮಹಿಳಾ ದಿನ: ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದೊಂದಿಗೆ ರಾಣೇಬೆನ್ನೂರ ತಾಲೂಕಿನ ಕುರುಬಗೇರಿಯಲ್ಲಿ ಆಚರಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಹಿಳೆಯ ಪಾತ್ರ ಮತ್ತು ಜೀವನ ಶೈಲಿ ಬಗ್ಗೆ ಸಂವಾದ ಹಮ್ಮಿಕೊಳ್ಳಲಾಯಿತು.
17	ಇತರೆ ಕಾರ್ಯಗಳು: ಸ್ವಚತಾ ಹಿ ಸೇವ (15–09–2018 ರಿಂದ 21–10–2018) ಮತ್ತು ಸ್ವಚತಾ ಪಖವಾಡ (18–12–2018 ರಿಂದ 01–01–2019) ಕಾರ್ಯಕ್ರಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು ಸಕ್ರೀಯವಾಗಿ ಪಾಲ್ಗೊಂಡು ಭ್ರಷ್ಟಾಚಾರದ ವಿರುದ್ಧ ಎಲ್ಲಾ ವಿಜ್ಞಾನಿಗಳು ಅರಿವು ಮೂಡಿಸಿ, ಭ್ರಷ್ಟಾಚಾರದ ವಿರುದ್ಧ ಪ್ರತಿಜ್ಞೆ ತೆಗೆದುಕೊಂಡರು. ಇಂಡಿ ತಾಲೂಕಿನ ವಿವಿಧ ಸ್ಥಳಗಳಲ್ಲೂ ಭ್ರಷ್ಟಾಚಾರದ ಕುರಿತು ತಿಳುವಳಿಕೆಯನ್ನು ನೀಡಲು 29–10–2018 ರಿಂದ 03–11–2018ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.
18	ವಿಶ್ವ ಜಲ ದಿನಾಚರಣೆ: ಮಾರ್ಚ್ 22, 2019 ರಂದು ವಿಶ್ವ ಜಲ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ವತಿಯಿಂದ ಕಾಕೋಳ ಗ್ರಾಮದಲ್ಲಿ ಆಚರಿಸಲಾಯಿತು.
19	2018–19 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಯುವಕರಿಗೆ ಒಟ್ಟು 61 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು 3145 ರೈತರು ತರಬೇತಿ ಪಡೆದಿರುತ್ತಾರೆ. ಈ ತರಬೇತಿಗಳಲ್ಲಿ 26 ಒಳ ಆವರಣ ಹಾಗೂ 35 ಹೊರ ಆವರಣ ತರಬೇತಿಗಳಾಗಿವೆ. ಒಳ ಆವರಣ ತರಬೇತಿಗಳಲ್ಲಿ 3 ಉತ್ಪಾದನಾ ತಾಂತ್ರಿಕತೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ ಹಾಗೂ ಸಮಗ್ರ ಕೀಟ ಹಾಗೂ ರೋಗಗಳ ನಿರ್ವಹಣೆ ತರಬೇತಿಗಳನ್ನು ನೀಡಲಾಯಿತು. 10 ವೃತ್ತಿಪರ ತರಬೇತಿಗಳನ್ನು, ಕುರಿ ಮತ್ತು ಮೇಕೆ ಸಾಕಾಣಿಕೆ, ಹೈನುಗಾರಿಕೆ, ಮೌಲ್ಯವರ್ಧನೆ, ಟೈಲರಿಂಗ್, ಕಸೂತಿ, ಎರೆಹುಳುಗೊಬ್ಬರ ತಯಾರಿಕೆಯ ಕುರಿತು ನೀಡಲಾಯಿತು.
20	ಇಪ್ಪತ್ತೊಂದು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ವಿವಿಧ ತಾಂತ್ರಿಕತೆಗಳಾದ ತೇವಾಂಶ ಸಂರಕ್ಷಣೆ, ಸಮಗ್ರ ಬೆಳೆ ನಿರ್ವಹಣೆ, ಸಮಗ್ರ ಕೀಟ ಹಾಗೂ ರೋಗ ನಿರ್ವಹಣೆ, ಸಾವಯವ ಕೃಷಿ ಇವುಗಳ ಮೇಲೆ ಹಮ್ಮಿಕೊಳ್ಳಲಾಗಿದ್ದು, 160 ರೈತರು ಇದರ ಲಾಭವನ್ನು ಪಡೆದರು. ಸಜ್ಜೆಯಲ್ಲಿ ಅಗಲ ಸಾಲು ಪದ್ಧತಿ ಹಾಗೂ ಕೃಷಿ ಹೊಂಡಗಳಲ್ಲಿ ಮೀನು ಸಾಕಾಣಿಕೆಯ ಮೂಂಚುಣಿ ಪ್ರಾತ್ಯಕ್ಷಿಕೆಗಳನ್ನು ಮಾಡಲಾಯಿತು. ಅಗಸಿಯ ಹೊಸ ತಳಿಯನ್ನು ಪರಿಚಯಿಸಿ ಪರಿಶೀಲಿಸಲಾಯಿತು. 35 ರೈತರ ತರಬೇತಿಗಳು, 05 ದೂರದರ್ಶನ ಕಾರ್ಯಕ್ರಮಗಳು, 4 ವಸ್ತು ಪ್ರದರ್ಶನ ಮತ್ತು 12 ಕ್ಷೇತ್ರೋತ್ಸವ ಕಾರ್ಯಕ್ರಮಗಳನ್ನು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಹಮ್ಮಿಕೊಳ್ಳಲಾಯಿತು.
21	ದಾಳಿಂಬೆಯಲ್ಲಿ ಸಮಗ್ರ ರೋಗ ನಿರ್ವಹಣೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿದ್ದು ಇದರಿಂದ ಪ್ರತಿ ಹೆಕ್ಟೇರಿಗೆ 2.5 ಲಕ್ಷಗಿಂತ ಹೆಚ್ಚು ಲಾಭವನ್ನು ರೈತರು ಗಳಿಸಿರುತ್ತಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯ ನೀಡಿದ ಈ ತಂತ್ರಜ್ಞಾನವನ್ನು ರೈತರು ಜಿಲ್ಲೆಯಾದ್ಯಂತ ಅಳವಡಿಸಿಕೊಂಡಿರುತ್ತಾರೆ. ಕಡಲೆಯಲ್ಲಿ ಬಿಜಿಡಿ–11 ತಳಿಯು ಒಳ್ಳೆಯ ಇಳುವರಿಯನ್ನು ನೀಡಿರುತ್ತದೆ. ಹೊಸ ತಳಿಗಳಾದ ಈರುಳ್ಳಿಯಲ್ಲಿ ಭೀಮಾ ಸುಪರ್, ಶೇಂಗಾದಲ್ಲಿ ಜಿಪಿಬಿಡಿ–4 ತಳಿಗಳನ್ನು ರೈತರಿಗೆ ಪರಿಚಯಿಸಲಾಯಿತು.
22	ಒಂಬತ್ತು ಸಮಸ್ಯಾಧಾರಿತ ಕ್ಷೇತ್ರ ಪ್ರಯೋಗಳನ್ನು ಹಮ್ಮಿಕೊಂಡಲಾಗಿದ್ದು ತೊಗರಿಯಲ್ಲಿ ಹೆಚ್ಚಿನ ಇಳುವರಿ ಕೊಡುವ ತಳಿಯಾದ ಜಿಆರ್ ಜಿ–152 ಮತ್ತು ಯಾಂತ್ರಿಕ ಕೊಯ್ಲಿಗೆ ಸೂಕ್ತವಾದ ಜಿಬಿಎಮ್–2 ತಳಿಗಳು, ಒಣ ಬೇರು ಕೊಳೆರೋಗ ನಿರ್ವಹಣೆ, ಜೋಳದಲ್ಲಿ ಇದ್ದಲು ಕೊಳೆರೋಗ ನಿರ್ವಹಣೆ, ಹೆಚ್ಚಿನ ಇಳುವರಿ ಹಾಗೂ ಶಾಖ ಸಂಹಿಷ್ಣುತೆ, ಚಂಡು ಹೂವಿನಲ್ಲಿ ಹೊಸ ತಳಿ(ಅರ್ಕಾ ಬಂಗಾರ ಮತ್ತು ಅರ್ಕಾ ಬಂಗಾರ 2), ತೊಗರಿಯಲ್ಲಿ ತೇವಾಂಶ ಸಂರಕ್ಷಣೆ, ಹೈಬ್ರಿಡ್ ನೆಪಿಯರ್ ಕೋ–5 ಹಾಗೂ ಡಿ.ಹೆಚ್.ನ್–6 ಮೌಲ್ಯಮಾಪನ, ವಿಟ್ಯಾಮಿನ್ – ಸಿ ಗಳ ಪರಿಶೀಲನೆ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಳ್ಳಾಯಿತು. ಬೀಜಗಳ ಉತ್ಪಾದನಾ ಕಾರ್ಯಕ್ರಮದಡಿಯಲ್ಲಿ 110 ಕ್ವಿಂಟಾಲ್ ಟಿ.ಎಸ್.3ಆರ್ ತೊಗರಿ ಹಾಗೂ 120 ಕ್ವಿಂಟಾಲ್ ಜೆಜಿ–11 ಕಡಲೆಯನ್ನು ಉತ್ಪಾದಿಸಲಾಯಿತು.
23	ಬೀಜ ಘಟಕ ಯೋಜನೆಯಡಿಯಲ್ಲಿ, 110 ಕ್ವಿಂಟಲ್ ತೊಗರಿ–ಟಿ.ಎಸ್.–3ಆರ್ (ಪ್ರಮಾಣಿತ ಬೀಜ) ಮತ್ತು 120 ಕ್ವಿಂಟಲ್ ಕಡಲೆ–ಜೆ.ಜಿ–11 ಬೀಜೋತ್ಪಾದನೆ ಮಾಡಲಾಯಿತು. ಮ್ಯಾನೇಜ್ ಸಂಸ್ಥೆ ಹೈದರಾಬಾದನಿಂದ ಮಂಜೂರಾದ ಸುಸ್ಥಿರ ಕೃಷಿಗಾಗಿ ಸಮಗ್ರ ಕೃಷಿ ತರಬೇತಿಯನ್ನು ಕೃಷಿ ವಿಜ್ಞಾನ ಕೇಂದ್ರ, ವಿಜಯಪುರದಲ್ಲಿ ನಡೆಸಲಾಯಿತು ಹಾಗೂ ಭಾರತ ಸರ್ಕಾರವು ಯುವ ರೈತರಿಗೆ ಹಾಗೂ ನಿರೂದ್ಯೋಗ ಯುವಕರಿಗೆ ವೃತ್ತಿಪರ ತರಬೇತಿ ನೀಡಲು 25 ದಿನಗಳ ಎರಡು **"**ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ತರಬೇತಿ**"**ಗಳನ್ನು ಕೃಷಿ ವಿಜ್ಞಾನ ಕೇಂದ್ರ, ವಿಜಯಪುರದಲ್ಲಿ ನಡೆಸಲಾಯಿತು. ವಿಜ್ಞಾನಿಗಳು 05 ದೂರದರ್ಶನ ಕಾರ್ಯಕ್ರಮಗಳಲ್ಲಿ ಮತ್ತು 16 ಬಾನುಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.
24	ವಿಸ್ತರಣಾ ಚಟುವಟಿಕೆಗಳಲ್ಲಿ ಮುಖ್ಯವಾಗಿ ವಿಶ್ವ ಮಣ್ಣು ದಿನಾಚರಣೆ, ರೈತ ದಿನಾಚರಣೆ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿ ಯೋಜನೆ , ಸ್ವಚ್ಚತಾ ಪಕ್ವಾಡಾ, ಭಾರತ ಕಿಸಾನ್ ಸಂಗಮಗಳನ್ನು ಯಶಸ್ವಿಯಾಗಿ ನಡೆಸಲಾಗಿದ್ದು 4 ಲಕ್ಷಕ್ಕಿಂತಲೂ ಹೆಚ್ಚು ರೈತರು ಭಾಗವಹಿಸಿದ್ದರು.
25	ಬಾಗಲಕೋಟೆ ಕೃಷಿ ವಿಜ್ಞಾನ ಕೇಂದ್ರದಿಂದ ಇಸವಿ 2018–19ರಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಮುಖ್ಯವಾಗಿ ತಂತ್ರಜ್ಞಾನ ವರ್ಗಾವಣೆಯಲ್ಲಿ ನೀರಾವರಿ ಅಡಿಯಲ್ಲಿ ಉಷ್ಣ ನಿರೋಧಕ ಕಡಲೆ ತಳಿ ಜೆ.ಜಿ.–14 ಪರಿಶೀಲನೆ, ಅರಿಷಿಣ ಬೆಳೆಯಲ್ಲಿ ಬೇರು ಕೊಳೆಯುವ ರೋಗದ ನಿರ್ವಹಣೆಯ ಪರಿಶೀಲನೆ, ಪ್ರೋಜೆಸ್ಟಾನ ಸ್ಪಂಜನ್ನು ಬಳಸಿ ಕುರಿಗಳ ಬೇದೆಯನ್ನು ಒಗ್ಗೂಡಿಸುವ ಪ್ರಕ್ರಿಯೆಯ ಪರಿಶೀಲನೆ ರೈತಾಪಿ ಕುಟುಂಬದ ಪೌಷ್ಟಿಕಾಂಶ ಅಗತ್ಯತೆ ಕುರಿತು ಪರಿಶೀಲನೆ ಹೀಗೆ 4 ಕ್ಷೇತ್ರ ಪರಿಶೀಲನೆಗಳನ್ನು 25 ರೈತರ ಹೊಲಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದರಂತೆ 5 ಮುಖ್ಯವಾದ ಬೆಳೆಗಳಲ್ಲಿ ಹೆಸರು, ತೊಗರಿ, ಕಡಲೆ ಶೇಂಗಾ ಹಾಗೂ ಅಗಸೆ ಬೆಳೆಗಳಲ್ಲಿ ಸಂಪೂರ್ಣ ಕ್ಷೇತ್ರ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಂಡಿದ್ದು 595 ರೈತರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ಜೊತೆಗೆ 24 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕಡಲೆ, ಕಬ್ಬು, ಈರುಳ್ಳಿ, ಅಲಸಂದಿ, ಮೇವಿನ ಬೆಳೆಗಳು, ಫಾಲ್ ಸೈನಿಕ ಹುಳು, ಮತ್ತು ಗೊಣ್ಣೆ ಹುಳುವಿನ ನಿರ್ವಹಣೆ, ದಾಳಿಂಬೆಯಲ್ಲಿ ರೋಗ ನಿರ್ವಹಣೆ, ಜವೆಗೋಧಿ ಮತ್ತು ಕಬ್ಬಿನಲ್ಲಿ ಯಂತ್ರೀಕೃತ ಕಟಾವಿನ ಪ್ರಾತ್ಯಕ್ಷಿಕೆ ಹೀಗೆ ಅನೇಕ ವಿಷಯಗಳನ್ನೊಳಗೊಂಡ ಪ್ರಾತ್ಯಕ್ಷಿಕೆಗಳನ್ನು 170 ರೈತರ ಕ್ಷೇತ್ರಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿಶ್ವವಿದ್ಯಾಲಯದಿಂದ ಪ್ರಾಯೋಜಿತ 23 ಕ್ಷೇತ್ರ ಪ್ರಯೋಗಗಳನ್ನು ರೈತರ ಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು. ಒಟ್ಟು 43 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 1025 ರೈತರಿಗೆ ಜ್ಞಾನಾರ್ಜನೆ ಮಾಡಲಾಯಿತು. ಆರು ಬಾನುಲಿ ಕಾರ್ಯಕ್ರಮ ಮತ್ತು 2 ದೂರದರ್ಶನ ಕಾರ್ಯಕ್ರಮಗಳನ್ನು ನೀಡಲಾಯಿತು. 173 ಶ್ರವಣ ದೃಶ್ಯ ಸಾಧನಗಳನ್ನು ತಯಾರಿಸಿ ರೈತರಿಗೆ ತೋರಿಸಲಾಯಿತು.

26	ನೇರ ಪ್ರಸಾರ : ದಿನಾಂಕ 10–06–18 ರಂದು ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ ಭಾರತದ ಮಾನ್ಯ ಪ್ರಧಾನ ಮಂತ್ರಿ ವಿಡಿಯೋ ಕಾನ್ಫೆರೆನ್ಸ ಮೂಖಾಂತರ ರೈತರೊಂದಿಗೆ ನೇರ ಸಂವಾದ ಮಾಡಲಾಯಿತು. ಸುಮಾರು 100ಕ್ಕೂ ಹೆಚ್ಚು ರೈತರು ಮತ್ತು ರೈತ ಮಹಿಳೆಯರು ಪಾಲ್ಗೊಂಡಿದ್ದರು.
27	ವಿಶ್ವ ಪರಿಸರ ದಿನಾಚರಣೆ: ದಿನಾಂಕ 05–06–2018 ರಂದು ಅರಣ್ಯ ಮರಗಳನ್ನು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ನಾಟಿ ಮಾಡಿ ನಮ್ಮ ಪರಿಸರಕ್ಕೆ ಹಸಿರನ್ನು ಹೆಚ್ಚಿಸುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.
28	ಲೈವ್ ಪ್ರಸಾರ: ದಿನಾಂಕ 12–07–18 ರಂದು ಕೃಷಿ ವಿಜ್ಞಾನ ಕೇಂದ್ರ ಬಾಗಲಕೋಟೆಯಲ್ಲಿ ಭಾರತದ ಮಾನ್ಯ ಪ್ರಧಾನ ಮಂತ್ರಿ ನೇರ ವಿಡಿಯೋಕಾನ್ಫೆರೆನ್ಸ ಮೂಖಾಂತರ ಸ್ವಸಹಾಯ ಸಂಘದ ಸದಸ್ಯರೊಂದಿಗೆ ಸಂವಾದ ಮಾಡಲಾಗಿದ್ದು ಸುಮಾರು 70 ಸ್ವ ಸಹಾಯ ಸಂಘದ ಸದಸ್ಯರು ಪಾಲ್ಗೊಂಡಿದ್ದರು.
29	ಮಹಿಳಾ ಕಿಸಾನ್ ದಿವಸ: ಅಕ್ಟೋಬರ್ 15 ರಂದು ಮಹಿಳಾ ದಿನಾಚರಣೆಯನ್ನು ಬಾಗಲಕೋಟೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಚರಿಸಲಾಗಿತ್ತು. ಸುಮಾರು 28 ಕೃಷಿ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
30	ವಿಶ್ವ ಮಣ್ಣು ಆರೋಗ್ಯ ದಿನ: ಡಿಸೆಂಬರ್ 5ರಂದು ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ ಆಚರಿಸಲಾಗಿತ್ತು. ವಿಶ್ವ ಮಣ್ಣು ಆರೋಗ್ಯ ದಿನ ಕುರಿತು ವಿವರವಾಗಿ ತಿಳಿಸಿದರು. ಮಣ್ಣು ಪರೀಕ್ಷೆಯ ಹಾಗೂ ಮಣ್ಣಿನ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಸುಮಾರು 100 ಹೆಚ್ಚು ರೈತರು ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡದು.
31	ವಿಶ್ವ ಮಹಿಳಾ ದಿನ: ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಬಾಗಲಕೋಟೆ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಚರಿಸಲಾಯಿತು. ಕೃಷಿಯಲ್ಲಿ ಮಹಿಳೆಯ ಪಾತ್ರ ಮತ್ತು ಜೀವನ ಶೈಲಿ ಕುರಿತು ಸಂವಾದ ನಡೆಯಿತು. ಸುಮಾರು 30 ಕೃಷಿ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
32	ಕೃಷಿ ಮೇಳ–2018: ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು 2018ನೇ ಸಾಲಿನ ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಕೃಷಿ ಮೇಳ (22–09–2018 ರಿಂದ 25–09–2018) ಮತ್ತು ಭಾರತೀಯ ಸಂಸ್ಕೃತಿ ಉತ್ಸವ ಕಗ್ಗೋಡ ಗ್ರಾಮ, (24–12–2018 ರಿಂದ 31–12–2018) ವಿಜಯಪುರ ಜಿಲ್ಲೆಯ ಮೇಳಗಳಲ್ಲಿ ಭಾಗವಹಿಸಿದ್ದರು.
33	ಹಿಂಗಾರು ಬೆಳೆಗಳ ಆಂದೋಲನೆ: ದಿನಾಂಕ 01–02–19 ರಂದು ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ, ಹಿಂಗಾರು ಬೆಳೆಗಳ ಆಂದೋಲನವನ್ನು ಆಯೋಜಿಸಲಾಯಿತು. ಹಿಂಗಾರು ಬೆಳೆಗಳಾದ ಶೇಂಗಾ, ಕಡಲೆ, ಕಬ್ಬು, ಜೋಳ ಮತ್ತು ತೋಟಗಾರಿಕೆ ಬೆಳೆಗಳಾದ ಲಿಂಬೆ ಮತ್ತು ದಾಳಿಂಬೆ ಬೆಳೆಗಳ ಕುರಿತು ವಿಜ್ಞಾನಿಗಳ ಮತ್ತು ರೈತರ ನಡುವೆ ಚರ್ಚೆ ನಡೆಯಿತು. ವಸ್ತು ಪ್ರದರ್ಶನವನ್ನು ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ ಇಂದ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 325 ರೈತರು ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.
34	ದಿನಾಂಕ 24–02–19 ರಂದು ಪ್ರಧಾನ ಮಂತ್ರಿ ಸಮ್ಮಾನ ನಿದಿ ಯೋಜನೆಯನ್ನು ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆಯಲ್ಲಿ ಹಮ್ಮಿಕೊಳ್ಳಲಾಗಿದ್ದು ಕೇಂದ್ರದ ಎಲ್ಲಾ ಸಿಬ್ಬಂದಿಗಳು ಮತ್ತು 70 ರೈತರು ಭಾಗವಹಿಸಿದ್ದರು.
35	ಇತರೆ ಕಾರ್ಯಗಳು: ಸ್ವಚತಾ ಹಿ ಸೇವ (16–09–2018 ರಿಂದ 02–10–2018) ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು ಸಕ್ರಿಯವಾಗಿ ಪಾಲಗೊಂಡು, ಸ್ವಚ್ಚತೆ ಹಾಗೂ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಿದರು.
36	ತಂತ್ರಜ್ಞಾನ ವರ್ಗಾವಣೆ: ಇಂಡಿ ತಾಲೂಕಿನ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ತಂತ್ರಜ್ಞಾನ ವರ್ಗಾವಣೆಯನ್ನು ಕ್ಷೇತ್ರ ಭೇಟಿ, ಕ್ಷೇತ್ರೋತ್ಸವ, ಹೊರ ಹಾಗೂ ಒಳಾವರಣ ತರಬೇತಿ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕೆ ಪದ್ಧತಿ ಪ್ರಾತ್ಯಕ್ಷಿಕೆಗಳು ಮತ್ತು ಗುಂಪು ಚರ್ಚೆಯ ಮುಖಾಂತರ ಆಯೋಜಿಸಿದ್ದಾರೆ.
37	ಇತರೆ ಕಾರ್ಯಗಳು: ಸ್ವಚತಾ ಹಿ ಸೇವ (15–09–2018 ರಿಂದ 21–10–2018) ಮತ್ತು ಸ್ವಚತಾ ಪಖವಾಡ (18–12–2018 ರಿಂದ 01–01–2019) ಕಾರ್ಯಕ್ರಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು ಸಕ್ರಿಯವಾಗಿ ಪಾಲಗೊಂಡಿದ್ದರು. ಭ್ರಷ್ಟಾಚಾರ ವಿರುದ್ಧ ಎಲ್ಲಾ ವಿಜ್ಞಾನಿಗಳು ಅರಿವು ಮೂಡಿಸಿದರು. ಭ್ರಷ್ಟಾಚಾರ ತೊಲಗಿಸಿ–ನವ ಭಾರತ ನಿರ್ಮಿಸಲು ಕರೆ ನೀಡಿದರು. ಭ್ರಷ್ಟಾಚಾರ ವಿರುದ್ಧ ಪ್ರತಿಜ್ಞೆ ತೆಗೆದುಕೊಂಡರು.
38	ವಿಶ್ವ ಜೇನು ಹುಳು ದಿನಾಚರಣೆ: ಮೇ 22 ರಂದು ವಿಶ್ವ ಜೇನು ಹುಳು ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ, ಇಂಡಿಯಲ್ಲಿ ಆಚರಿಸಲಾಗಿತ್ತು.
39	ಪುಣೆಯಲ್ಲಿ ನಡೆದ ಕಿಸಾನ್ ಮೇಳ 2018 ರಲ್ಲಿ ಕೃವಿವಿ ಧಾರವಾಡವು ಕೃಷಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.
II	**ಕೃಷಿ ವಿಸ್ತರಣಾ ಶಿಕ್ಷಣ ಘಟಕಗಳು**
40	ಕೃಷಿ ವಿಶ್ವವಿದ್ಯಾಲಯ ಧಾರವಾಡದ ವತಿಯಿಂದ ಪೂನಾ ಕಿಸಾನ 2018 ರಲ್ಲಿ ಭಾಗವಹಿಸಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು
41	ಕೃಷಿ ವಿಶ್ವವಿದ್ಯಾಲಯ ಧಾರವಾಡದ ವತಿಯಿಂದ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಇವರು 2018 ರಲ್ಲಿ ಆಯೋಜಿಸಿದ ಕೃಷಿ ಮೇಳದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆಯಲಾಯಿತು.
42	ಸಿ.ಸಿ ಎ.ಆರ್.ಐ. ಐ.ಸಿ.ಎ.ಆರ್. ಗೋವಾದಲ್ಲಿ ಜರುಗಿದ ಕರಾವಳಿ ಕೃಷಿ ಮೇಳ–2019 ದಲ್ಲಿ ಭಾಗವಹಿಸಲಾಗಿತ್ತು
43	ನೂತನ ಶೇಂಗಾ ತಳಿ ಡಿಎಚ್–256ನ್ನು 2018–19ನೆಯ ಮುಂಗಾರು ಹಂಗಾಮಿನಲ್ಲಿ ಗದಗ ಜಿಲ್ಲೆಯ ಎರಡು ಹಳ್ಳಿಗಳಲ್ಲಿ ಕ್ಷೇತ್ರ ಪ್ರಯೋಗದ ಮೂಲಕ ಕೊಡಲಾಗಿತ್ತು. ಈ ನೂತನ ತಳಿಯು ಟಿಎಂವಿ–2 ಗಿಂತ ಶೇ. 10 ರಷ್ಟು ಅಧಿಕ ಇಳುವರಿ ನೀಡಿದೆ. ಈ ಪ್ರಾತ್ಯಕ್ಷಿಕೆ ನೋಡಿದ ಆರು ರೈತರು ಮೂರು ಹಳ್ಳಿಗಳಲ್ಲಿ ಅದೇ ವರ್ಷದ ಬೇಸಿಗೆ ಹಂಗಾಮಿನಲ್ಲಿ ನೂತನ ಶೇಂಗಾ ತಳಿ ಬೆಳೆದಿದ್ದಾರೆ. ಹಾಗೆಯೇ ಈ ವರ್ಷದ (2019–20) ಮುಂಗಾರಿನಲ್ಲಿಯೂ ಸಹಾ ಇನ್ನೂ 4 ಹಳ್ಳಿಗಳಲ್ಲಿ ಈ ತಳಿಯನ್ನು ರೈತರು ಬೆಳೆದಿದ್ದಾರೆ.
44	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು 2018–19 ನೇ ಪ್ರಸಕ್ತ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ 3, 8 ಮತ್ತು 9 ವಲಯದ ಗೋಕಾಕ, ಸವದತ್ತಿ, ರಾಮದುರ್ಗ, ರಾಯಭಾಗ, ಅಥಣಿ, ಹುಕ್ಕೇರಿ, ಬೈಲಹೊಂಗಲ, ಚಿಕ್ಕೋಡಿ, ಬೆಳಗಾವಿ ಮತ್ತು ಖಾನಾಪೂರ ರೈತರಿಗಾಗಿ ಹಲವಾರು ಕೃಷಿ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ರೈತರಿಗಾಗಿ ಸಮಸ್ಯಾತ್ಮಕ ಕ್ಷೇತ್ರ ಭೇಟಿ ಕಾರ್ಯಕ್ರಮ, ವಿವಿಧ ಬೆಳೆಗಳಲ್ಲಿ ಬರುವ ಕೀಟ, ರೋಗ, ಪೋಷಕಾಂಶಗಳ ಕೊರತೆ ಹಾಗೂ ಸಮಗ್ರ ಬೇಸಾಯದ ಬಗ್ಗೆ ಸಲಹೆಗಳನ್ನು ರೈತರಿಗೆ ನೀಡಲಾಗಿದೆ. ಕಬ್ಬು ಮತ್ತು ಗೋವಿನಜೋಳದಲ್ಲಿ ಸಮಗ್ರ ಬೇಸಾಯದ ಬಗ್ಗೆ ರೈತರ – ವಿಜ್ಞಾನಿಗಳ ಪರಸ್ಪರ ಸಂವಾದ/ಚರ್ಚಾಗೋಷ್ಠಿ, ವಿವಿಧ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಬರುವ ಸಮಸ್ಯಾತ್ಮಕ ತೊಂದರೆಗಳಿಗೆ ತಾಂತ್ರಿಕ ವೈಜ್ಞಾನಿಕ ಸಲಹೆಗಳನ್ನು ರೈತಾಪಿ ಜನರಿಗೆ ನೀಡಲಾಗಿದೆ. ಗೋವಿನಜೋಳ ಬೇಸಾಯ ಪದ್ಧತಿ, ಸಮಗ್ರ ಕೀಟ ನಿರ್ವಹಣೆ ಮತ್ತು ಹೆಚ್ಚಿನ ಇಳುವರಿಯ ಲಕ್ಷಣಗಳ

	ಬಗ್ಗೆ, ಜಿಲ್ಲೆಯಲ್ಲಿ ವಿವಿಧ ಬೆಳೆಗಳಿಗೆ ಬರುತ್ತಿದ್ದ ಕೀಟ ಮತ್ತು ರೋಗಗಳನ್ನು ಸಕಾಲದಲ್ಲಿ ನಿರ್ವಹಣೆ ಮಾಡಲು ಪೀಡೆ ಸರ್ವೇಕ್ಷಣಾ ಮತ್ತು ಸಲಹಾ ಘಟಕ ಜೊತೆ ಸೇರಿಕೊಂಡು ಸತತ 2 ತಿಂಗಳಗಳ ಕಾಲ ನೀಡಿದ್ದಾರೆ.
45	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ರೈತರಿಗಾಗಿ ಹಲವು ಕೃಷಿ ತೋಟಗಾರಿಕೆ, ಹೈನುಗಾರಿಕೆ, ಮೀನು ಸಾಕಾಣಿಕೆ, ಮಣ್ಣು ಮತ್ತು ನೀರು ನಿರ್ವಹಣೆ ಬಗ್ಗೆ, ಕೃಷಿಯಲ್ಲಿ ಕೃಷಿ ಯಾಂತ್ರೀಕರಣ ಹಾಗೂ ಸಮಗ್ರ ಕೃಷಿ ಪದ್ಧತಿ ಮತ್ತು ವಿವಿಧ ಬೆಳೆಗಳಲ್ಲಿ ಉನ್ನತ ಕೃಷಿ ತಂತ್ರಜ್ಞಾನ ಅಳವಡಿಕೆ, ವಿವಿಧ ಬೆಳೆ ಪದ್ಧತಿ ಮತ್ತು ಸಮಗ್ರ ಬೆಳೆ ನಿರ್ವಹಣೆ ಬಗ್ಗೆ ವಿವಿಧ ತಾಲೂಕಿನ ರೈತರಿಗೆ ಕೃಷಿ ಸಂಶೋಧನಾ ಕೇಂದ್ರಗಳು, ಕೃಷಿ ಮಹಾವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಪ್ರಗತಿಪರ ರೈತರ ಕ್ಷೇತ್ರಗಳಿಗೆ ಮತ್ತು ಖಾಸಗಿ ಕೃಷಿ ಇಲಾಖೆಗಳ ಫಾರ್ಮ/ಕ್ಷೇತ್ರ/ತೋಟಗಳಿಗೆ ಪ್ರವಾಸ ಭೇಟಿ ಮತ್ತು ತರಬೇತಿಯನ್ನು ನೀಡಲಾಯಿತು.
46	2018–19ನೇ ಸಾಲಿನ ಕೃಷಿ ಪರಿಕರ ಮಾರಾಟಗಾರರ ಡಿಪ್ಲೋಮಾ ಕೋರ್ಸಿನ (ದೇಶಿ ಬ್ಯಾಚ್ 3) ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.
47	2018–19 ನೇ ಸಾಲಿನಲ್ಲಿ ಧಾರವಾಡ, ಬಾಗಲಕೋಟ, ಬೆಂಗಳೂರು, ಕಗ್ಗೋಡನಲ್ಲಿ ನಡೆದ ಕೃಷಿ ಮೇಳ ಕಾರ್ಯಕ್ರಮಗಳಲ್ಲಿ "ಕೃಷಿ ವಸ್ತುಗಳ ಪ್ರದರ್ಶನ" ಆಯೋಜಿಸಲಾಯಿತು.
48	ಕಡಲೆ ಬೆಳೆಯಲ್ಲಿ ಮುಂಚೂಣಿ ಪ್ರಾತ್ಯಕ್ಷತೆಯನ್ನು 65 ಎಕರೆ ಕ್ಷೇತ್ರದಲ್ಲಿ ಹಮ್ಮಿಕೊಂಡು ತಳಿತಾಂತ್ರಿಕತೆಯನ್ನು ವಿಸ್ತರಿಸಲಾಯಿತು.
49	ಕಬ್ಬಿನ ಗೊಣ್ಣೆಹುಳುವಿನ ಹತೋಟಿ ಕ್ರಮಗಳ ಕುರಿತು ರೈತರ ಕ್ಷೇತ್ರದಲ್ಲಿ ಪ್ರಾತ್ಯಕ್ಷತೆ ಮೂಲಕ ತಿಳಿಸಲಾಯಿತು.
50	ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಮುಧೋಳದಲ್ಲಿ ವಸ್ತು ಪ್ರದರ್ಶನ ಪ್ರಯೋಗಾಲಯ ಉದ್ಘಾಟನೆ ಮಾಡಲಾಯಿತು. ವಿಜ್ಞಾನಿಗಳು ರೈತರ ಹೊಲಕ್ಕೆ ಭೇಟಿಕೊಟ್ಟು ಹೊಸ ತಾಂತ್ರಿಕತೆಯ ಬಗ್ಗೆ ಮಾಹಿತಿ ನೀಡಿದರು.
51	2018–19 ಸಾಲಿನ ದೇಸಿ ಬ್ಯಾಚ್–3 ದಿನಾಂಕ 17–05–2018 ರಂದು ಅನಾವರಣ ಗೊಳಿಸಲಾಯಿತು ಮತ್ತು 19–05–2018 ರಿಂದ ಇಲ್ಲಿಯವರೆಗೆ ಪ್ರತಿ ಶನಿವಾರದಂದು ತರಗತಿಗಳು ನಡೆಯುತ್ತಿವೆ.
52	ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ 26–05–2018 ರಂದು ನಡೆದ ಸ್ಟೇಟ್ ಲೆವೆಲ್ ಕಾನ್ಫರನ್ಸ್ – Prospects and progress of DAESI Programme" ಭಾಗವಹಿಸಲಾಯಿತು. ನಂತರ ಸಾವಯವ ಸಂಸ್ಥೆಗೆ ಭೇಟಿಕೊಟ್ಟು ಸಮಗ್ರ ಮಾಹಿತಿಯನ್ನು ಪಡೆಯಲಾಯಿತು. ಈ ಭೇಟಿಯಲ್ಲಿ ದೊಡ್ಡ ಪ್ರಮಾಣದ *ಮೆಟಾರೈಜಿಯಂ, ಸುಡೋಮೊನಾಸ್, ಅಜೋಸ್ಪಿರಿಲಂ* ಮತ್ತಿತರ ಜೈವಿಕ ಸೂಕ್ಷ್ಮಾಣುಗಳ ತಯಾರಿಕೆಯ ಬಗ್ಗೆ ವೀಕ್ಷಿಸಲಾಯಿತು.
53	ದಿನಾಂಕ 07–07–2018 ರಂದು ಮಣ್ಣಿನ ಮಹತ್ವ ಮತ್ತು ಆರೋಗ್ಯದ ಬಗ್ಗೆ ಕೃಷಿ ಅಧಿಕಾರಿಗಳಾದ ಶ್ರೀ. ಬುಜರುಕ ಅವರು ಕೃಷಿ ಪರಿಕರ ಮಾರಾಟಗಾರರಿಗೆ ಮಾಹಿತಿ ಒದಗಿಸಿದರು.
54	ದಿನಾಂಕ 15–09–2018 ರಂದು ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿನ ರೋಗಗಳ ಬಗ್ಗೆ ಡಾ. ಪ್ಹಿ. ಆಯ್ ಬೆಣಗಿ, ನಿವೃತ್ತ ಕುಲಪತಿಗಳು ಅವರು ಕೃಷಿ ಪರಿಕರ ಮಾರಾಟಗಾರರಿಗೆ ಮಾಹಿತಿ ಒದಗಿಸಿದರು.
55	ದಿನಾಂಕ 22–09–2018 ರಂದು ಕೃಷಿ ಮೇಳ, ಧಾರವಾಡದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.
56	ಎರಡು ದೇಶಿ ಬ್ಯಾಚ್‌ಗಳನ್ನು ಮುಕ್ತಾಯಗೊಳಿಸಲಾಗಿದ್ದು ಹಾಗೂ 2 ಹೊಸ ದೇಸಿ ತರಬೇತಿ ಕಾರ್ಯಕ್ರಮಗಳನ್ನು ಕೃಷಿ ವಿಸ್ತರಣಾ ಕೇಂದ್ರದಿಂದ ಹಾಗೂ ಕೃಷಿ ಮಹಾವಿದ್ಯಾಲಯದ ವತಿಯಿಂದ ಹಮ್ಮಿಕೊಳ್ಳಲಾಯಿತು. ಪ್ರತಿ ಬ್ಯಾಚ್‌ನಲ್ಲಿ 40 ತರಬೇತಿದಾರರಿದ್ದರು.
57	ದಿನಾಂಕ 24–31 ಡಿಸೆಂಬರ್ 2018ರ ವರೆಗೆ ಕಗ್ಗೋಡದಲ್ಲಿ ಜರುಗಿದ 5ನೇ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಕೃಷಿ ಸಂಗಮದ ಅಡಿಯಲ್ಲಿ 101 ವಿವಿಧ ಬೆಳೆ ತಳಿಗಳು ಹಾಗೂ ಸಮಗ್ರ ಬೇಸಾಯ ಪದ್ಧತಿಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ರೈತರಿಗೆ ತಿಳಿಸಲಾಯಿತು. ದಿನಾಂಕ 27–12–2018 ರಂದು ಡಾ. ವೀರೇಂದ್ರ ಹೆಗ್ಗಡೆ ಹಾಗೂ ಶ್ರೀ ಬಿ. ಎಸ್. ಯಡಿಯೂರಪ್ಪ ಇವರುಗಳು ಕೃಷಿ ಸಂಗಮದ ಉದ್ಘಾಟನೆ ಮಾಡಿದರು.
58	ರೈತರಿಗೆ ಕೃಷಿ ವಿಶ್ವ ವಿದ್ಯಾಲಯದ ವಿವಿಧ ತಂತ್ರಜ್ಞಾನಗಳನ್ನು ರೈತರ ಹೊಲದಲ್ಲಿ ಪ್ರಾತ್ಯಕ್ಷಿತೆಗಳ ಮೂಲಕ ತೋರಿಸಲಾಯಿತು. ಉದಾಹರಣೆಗೆ ಸುದಾರಿತ ತಳಿಗಳಾದ ತೊಗರಿ, ಹೆಸರು, ಕಡಲೆ, ಶೇಂಗಾ, ಹಿಂಗಾರಿ ಜೋಳ, ಗೋಧಿ, ಸದಕ. ರೈತರಿಗೆ ಮಣ್ಣು ಪರೀಕ್ಷೇಗೆ ಮಾದರಿ ತೆಗೆಯುವ ಬಗ್ಗೆ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ, ನೀರು ಮತ್ತು ಮಣ್ಣು ಸಂರಕ್ಷಣೆ ಬಗ್ಗೆ ಪ್ರಾತ್ಯಕ್ಷಿತೆಗಳ ಹಾಗೂ ತರಬೇತಿಗಳ ಮೂಲಕ ರೈತರಿಗೆ ಮಾಹಿತಿ ಒದಗಿಸಲಾಯಿತು.
59	ವಿಜಯಪುರ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವು ಕೃಷಿ ಸಂಬಂಧಿತ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಶುಸಂಗೋಪನೆ ಇಲಾಖೆಗಳ ಸಹಯೋಗದೊಂದಿಗೆ ತರಬೇತಿ, ಕ್ಷೇತ್ರ ಭೇಟಿ, ಪ್ರಾತ್ಯಕ್ಷಿಕೆ, ವಸ್ತು ಪ್ರದರ್ಶನದ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.
60	ಒಳಾ ಆವರಣ ಹಾಗೂ ಹೊರ ಆವರಣ ತರಬೇತಿಗಳನ್ನು ವಿಜಯಪುರ ಜಿಲ್ಲೆಯ ತಾಲೂಕುಗಳಲ್ಲಿ ಪ್ರಮುಖ ಬೆಳೆಗಳ ಸಮಸ್ಯೆಗಳ ಬಗ್ಗೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಹಮ್ಮಿಕೊಂಡಿತ್ತು.
61	ಕೃಷಿ ವಿಸ್ತರಣಾ ಸೇವೆಯಲ್ಲಿ ಕೃಷಿ ಪರಿಕರ ಮಾರಟಗಾರರಿಗೆ ಡಿಪ್ಲೋಮಾ –2018–19: ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಪರಿವೃತ್ತದಲ್ಲಿ ಬರುವ ಒಟ್ಟು 31 ತಂಡಗಳಲ್ಲಿ ಡಿಪ್ಲೋಮಾ ಕಾರ್ಯಕ್ರಮವನ್ನು ಪ್ರಾರಂಬಿಸಲಾಗಿತ್ತು. ಅದರಲ್ಲಿ ಒಟ್ಟು 21 ತಂಡಗಳಲ್ಲಿ ಕೃಷಿ ಪರಿಕರ ಮಾರಾಟಗಾರರು ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿ ಒಟ್ಟು 804 ಮಾರಾಟಗಾರರು ಪ್ರಮಾಣ ಪತ್ರ ಪಡೆದಿರುತ್ತಾರೆ. ಇನ್ನು 8 ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.

4.2 ತಂತ್ರಜ್ಞಾನ ವರ್ಗಾವಣೆ ಮತ್ತು ವಿಶ್ಲೇಷಣೆ

4.2.1 ತಂತ್ರಜ್ಞಾನ ಪರಿಶೀಲನೆ (ಕೃಷಿ ವಿಜ್ಞಾನ ಕೇಂದ್ರದಿಂದ)

ಕ್ರ. ಸಂ.	ತಂತ್ರಜ್ಞಾನ ಪರಿಶೀಲನೆ (ಓಎಫ್‌ಟಿ)
1	**ಅಧಿಕ ಉತ್ಪಾದಕತೆ ಹಾಗೂ ಯಾಂತ್ರೀಕೃತ ಕೊಯ್ಲಿಗೆ ಸೂಕ್ತವಾದ ಸುಧಾರಿತ ಕಡಲೆ ತಳಿಗಳ ಪರಿಶೀಲನೆ:** ಜಾಕಿ–9218 ತಳಿಯು ಜೆಜಿ–11 ತಳಿಗೆ ಹೋಲಿಸಿದಾಗ ಶೇ. 4.68 ರಷ್ಟು ಹಾಗೂ ಜಿಬಿಎಮ್–2 ತಳಿಗೆ ಹೋಲಿಸಿದಾಗ ಸುಮಾರು ಶೇ. 16.03 ರಷ್ಟು (15.63 ಕ್ವಿ/ಹೆ) ಅಧಿಕ ಇಳುವರಿ ನೀಡಿದೆ.
2	**ಶೇಂಗಾದಲ್ಲಿ ಅಲ್ಪಾವಧಿ ತಳಿಗಳ ಪರಿಶೀಲನೆ:** ಜೆಲ್–1085 ತಳಿಯು ಜೆಲ್–24 ತಳಿಗೆ ಹೋಲಿಸಿದಾಗ ಶೇ. 29.74 ರಷ್ಟು ಹಾಗೂ ಜಿಪಿಬಿಡಿ–4 ಶೇಂಗಾ ತಳಿಗೆ ಹೋಲಿಸಿದಾಗ ಶೇ. 3.68 ರಷ್ಟು (25.30 ಕ್ವಿ/ಹೆ) ಹೆಚ್ಚಿನ ಇಳುವರಿ ನೀಡಿದೆ.
	ಈರುಳ್ಳಿಯ ಥ್ರಿಪ್ಸ ನುಸಿ ಬಾಧೆ ಹತೋಟಿಗಾಗಿ ಲೆಕ್ಯಾನಿಸಿಲಿಯಂ ಲೆಕ್ಯಾನಿ ಪರಿಶೀಲನೆ: ಪ್ರತಿ ಲೀಟರ್ ನೀರಿಗೆ 2 ಗ್ರಾಂ ಲೆಕ್ಯಾನಿಸಿಲಿಯಂ ಲೆಕ್ಯಾನಿ + 2 ಗ್ರಾಂ ನೀರಿನಲ್ಲಿ ಕರಗುವ ಬೋರಾನ್‌ನ್ನು ಬೆರೆಸಿ 2 ಬಾರಿ ಸಿಂಪರಣೆ ಮಾಡಿರುವುದರಿಂದ ಈರುಳ್ಳಿಯಲ್ಲಿ ಥ್ರೀಪ್ಸ್ ಬಾಧೆಯು ಚೆನ್ನಾಗಿ ಹತೋಟಿಯಾಗಿ ಶೇ. 17.89 ರಷ್ಟು ಅಧಿಕ (171.33 ಕ್ವಿ/ಹೆ) ಇಳುವರಿ ನೀಡಿದೆ
4	**ಥ್ರಿಪ್ಸ ನುಸಿ ಬಾಧೆ ಹತೋಟಿಗಾಗಿ ಮೆಣಸಿನಕಾಯಿ ತಳಿಗಳ ಪರಿಶೀಲನೆ:** ಅರ್ಕಾ ಮೆಘನಾ ತಳಿಯು ಬ್ಯಾಡಗಿ ಕಡ್ಡಿ ತಳಿಗೆ ಹೋಲಿಸಿದಾಗ ಶೇ. 35.44 ರಷ್ಟು ಹಾಗೂ ಹಾಗೂ ಡಿ.ಸಿ–1007 ತಳಿಗೆ ಹೋಲಿಸಿದಾಗ ಶೇ. 15.80 ರಷ್ಟು (9.82 ಕ್ವಿ/ಹೆ) ಹೆಚ್ಚಿನ ಇಳುವರಿ ನೀಡಿದೆ.
5	**ವಿವಿಧ ಬೆಂಡಿ ಹೈಬ್ರೀಡ್‌ಗಳ ಪರಿಶೀಲನೆ:** ಅರ್ಕಾ ನಿಖಿತಾ ತಳಿಯು ಸ್ಥಳೀಯ ತಳಿಗೆ ಹೋಲಿಸಿದಾಗ ಶೇ. 40.66 ರಷ್ಟು ಹಾಗೂ ಹಾಗೂ ಅರ್ಕಾ ಅನಾಮಿಕಾ ತಳಿಗೆ ಹೋಲಿಸಿದಾಗ ಶೇ. 15.38 ರಷ್ಟು (20.03 ಕ್ವಿ/ಹೆ) ಅಧಿಕ ಇಳುವರಿ ನೀಡಿದೆ
6	**ಕಾಂಪೋಸ್ಟ ತಯಾರಿಕೆಯಲ್ಲಿ ಗೊಬ್ಬರ ಕಳಿಸುವಿಕೆ ಅಣುಜೀವಿಗಳ ಪರಿಶೀಲನೆ:** ಧಾರವಾಡ ಕೃಷಿ ವಿಶ್ವವಿದ್ಯಾಲಯ, ಕಾಂಪೋಸ್ಟ್ ಕಲ್ಚರ್ – ಗೊಬ್ಬರ ಕಳಿಸುವ ಅಣುಜೀವಿಯು ಅರ್ಕಾ ಡಿಕಾಂಪೋಸರ್ ಮತ್ತು ವೇಸ್ಟ್ ಡಿಕಾಂಪೋಸರ್‌ಗಳಿಗೆ ಹೋಲಿಸಿದಾಗ ಕಾಂಪೋಸ್ಟ್ ತಯಾರಿಕೆಗೆ ಕಡಿಮೆ ಸಮಯ (100 ದಿನಗಳು) ನೀಡಿದೆ.
7	**ಹೆಚ್ಚಿನ ಇಳುವರಿಯ ಬಹುವಾರ್ಷಿಕ ಮೇವು ಬೆಳೆಗಳ ಪರಿಶೀಲನೆ:** ಡಿಎಚ್‌ಎನ್–6 (148.92 ಟ/ಹೆ) ಹೈಬ್ರಿಡ್ ಎನ್‌ಬಿ–21 (113.20 ಟ/ಹೆ) ಹೈಬ್ರಿಡ್‌ಗಿಂತಲೂ ಶೇ. 31.55 ರಷ್ಟು ಹಾಗೂ ಸಿಓ–5 (143.60 ಟ/ಹೆ) ಹೈಬ್ರಿಡ್‌ಗಿಂತಲೂ ಶೇ. 3.70 ರಷ್ಟು ಅಧಿಕ ಇಳುವರಿ ನೀಡಿದೆ.
8	**ಭತ್ತದ ಬೆಳೆಯಲ್ಲಿ ಬೋರಾನ್ ಬಳಕೆಯ ಪರಿಶೀಲನೆ:** ಲಘುಪೋಷಕಾಂಶಗಳಬಳಕೆಯಿಂದ ಹೂಗೊಂಚಲುಗಳ ಸಂಖ್ಯೆ ಹಾಗೂ ಕಾಳುಗಳ ಸಂಖ್ಯೆ ಹೆಚ್ಚಾಗಿದ್ದು ಸ್ಥಳೀಯ ಪದ್ಧತಿಗಿಂತ ಶೇ. 15.48 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
9	**ನೀರಾವರಿಯಲ್ಲಿ ಹೈಬ್ರಿಡ್ ಮೆಣಸಿಕಾಯಿ ಬೆಳೆಯ ಪರಿಶೀಲನೆ:** ಶಿಫಾರಸ್ಸು ಮಾಡಿದ ಸಂಕರಣ ತಳಿಗಳ ಜೊತೆಗೆ ಸ್ಥಳೀಯ ಪದ್ಧತಿಯನ್ನು ಹೋಲಿಸಿದಾಗ ಸಂಕರಣ ತಳಿ ಅರ್ಕಾಮೇಘನದಿಂದ ಹೆಚ್ಚಿನ ಇಳುವರಿ (330.0 ಕ್ವಿ/ಹೆ.) ಪಡೆಯಲಾಗಿದೆ. ರೈತರ ಪದ್ಧತಿ ಗಿಂತ ಶೇ. 37.5 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
10	**ಮಾವಿನ ಬೆಳೆಯಲ್ಲಿ ಹಸಿರು ಜಿಗಿ ಹುಳು ಮತ್ತು ಬೂದಿ ರೋಗದ ನಿರ್ವಹಣೆ ಕ್ರಮಗಳ ಪರಿಶೀಲನೆ:** ಮಾವಿನಲ್ಲಿ ಜಿಗಿಹುಳು ಮತ್ತು ಬೂದುರೋಗ ನಿರ್ವಹಣೆಗಾಗಿ ಲ್ಯಾಮ್ಡಾಸಿಹ್ಯಾಲೊಥ್ರಿನ್ 0.5 ಮೀ.ಲಿ + ಡೈಪೆನಕೊನಜೋಲ್ 1.0 ಮಿ.ಲೀಯಂತೆ ಪ್ರತಿ ಲೀಟರ್ ನೀರಿಗೆ ಬೇರೆಸಿ ದ್ರಾವಣವನ್ನು ಹೂವಾಡುವ ಸಮಯದಲ್ಲಿ ಹಾಗೂ ಕಾಯಿಕಟ್ಟುವ ಹಂತದಲ್ಲಿ ಸಿಂಪಡಿಸಿದ ಪರಿಣಾಮವಾಗಿ ಹೆಚ್ಚಿನ ಹಣ್ಣಿನ ಇಳುವರಿ (68.5 ಕ್ವಿ/ಹೆ) ಪಡೆಯಲಾಗಿದೆ. ಅಲ್ಲದೆ ರೈತರ ಪದ್ಧತಿಗಿಂತ ಈ ಉಪಚಾರವು 48.1% ಹೆಚ್ಚಿನ ಇಳುವರಿ ನೀಡಿದೆ.
11	**ಭತ್ತದಲ್ಲಿ ಸಿಲಿಕಾನ್ ಬಳಕೆಯ ಪರಿಶೀಲನೆ:** ಭತ್ತದಲ್ಲಿ ಸಿಲಿಕಾನ್‌ನ ನಿರ್ವಹಣೆಯ ಪ್ರಮಾಣ 2. ಮಿ.ಲೀ ಅನ್ನು 3 ಬಾರಿ ಅಂದರೆ 25, 40 ಮತ್ತು 50 ದಿನಗಳ ಪ್ರಯೋಗದ ಪರಿಣಾಮವಾಗಿ ಹೆಚ್ಚಿನ ಇಳುವರಿಯು (68.2 ಕ್ವಿ/ಹೆ.) ಬಂದಿರುತ್ತದೆ.
12	**ಕಬ್ಬಿನ ಬೆಳೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ ಪರಿಶೀಲನೆ:** ಕಬ್ಬಿಣ ಮತ್ತು ಜಿಂಕ ಸಲ್ಫೇಟನ್ನು ಪ್ರತಿ ಹೆಕ್ಟೇರಿಗೆ 2.5 ಕಿ.ಗ್ರಾಂ ಹಾಗೂ ಯೂರಿಯಾ ಪ್ರತಿ ಹೆಕ್ಟೇರಿಗೆ 250 ಲೀಟರ್ ನೀರಿನೊಂದಿಗೆ 50 ಮತ್ತು 100 ದಿನಗಳಲ್ಲಿ ಸಿಂಪರಣೆಯ ಪರಿಣಾಮವಾಗಿ ಹೆಚ್ಚಿನ ಇಳುವರಿಯು (103 ಟ/ಹೆ). ಬಂದಿರುತ್ತದೆ.
13	**ಕುರಿ ಮರಿಗಳಲ್ಲಿ ಕರಂಜ ಕೀಕ್ ಬಳಕೆಯ ಪರಿಶೀಲನೆ:** ಕುರಿ ಮರಿಗಳಲ್ಲಿ ನಿರವಿಷಗೊಳಿಸಿದ ಹಿಂಡಿಯಿಂದ ತಯಾರಿಸಿದ ಆಹಾರ ಬಳಕೆಯಿಂದ ಮರಿಗಳ ಬೆಳವಣಿಗೆ ಹೆಚ್ಚುತ್ತದೆ. ಪ್ರತಿ ದಿನ ಈ ಆಹಾರವನ್ನು ಬಳಸುವುದರಿಂದ 3 ತಿಂಗಳಲ್ಲಿ ಸರಾಸರಿ ಮರಿಗಳ ಬೆಳವಣಿಗೆ 22 ಕೆ.ಜಿ. ಇರುತ್ತದೆ. ಮತ್ತು ರೈತರ ಪದ್ಧತಿಯಲ್ಲಿ ಮರಿಗಳ ತೂಕ ಸರಾಸರಿ 14 ಕಿ.ಗ್ರಾಂ ಇರುತ್ತದೆ.
14	**ಜೈವಿಕ ರಸಗೊಬ್ಬರಗಳು ಮತ್ತು ಜೈವಿಕ ಶಿಲೀಂಧ್ರನಾಶಕದಿಂದ ಬೀಜಗಳ ಉಪಚಾರ:** ತೊಗರಿ ಪ್ರಾತ್ಯಕ್ಷಿಕೆ ತಾಕಿನಲ್ಲಿ ಶೇ.5.45 ಮತ್ತು ರೈತರ ಪದ್ಧತಿಯ ತಾಕಿನಲ್ಲಿ ಶೇ.15.65 ಸೊರಗುರೋಗ ಇರುವುದು ಕಂಡುಬಂದಿತು.
15	**ಮೋಹಕ ಬಲೆಗಳ ಅಳವಡಿಕೆ:** ಕೀಟಗಳ ಸಮೀಕ್ಷೇಯಲ್ಲಿ ಮತ್ತು ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.
16	**ಬೋರ್ಡೋಕ್ಸ್ ಮಿಶ್ರಣ ತಯಾರಿಕೆ:** ದಾಳಿಂಬೆಯ ಪ್ರಾತ್ಯಕ್ಷಿಕೆ ತಾಕಿನಲ್ಲಿ :10.55% ಮತ್ತು ರೈತರ ಪದ್ದತಿ ತಾಕಿನಲಿ ್ಲ:18.15% ರೋಗ ಇರುವುದು ಕಂಡುಬಂದಿದೆ.
17	**ದಾಳಿಂಬೆ, ನುಗ್ಗೆ & ಪೇರಲ ಚಾಟನಿ ಪದ್ಧತಿ:** ರೋಗ ರಹಿತ ಸಸಿಗಳ ಉತ್ಪಾದನೆಯಿಂದ ಮುಖ್ಯ ಭೂಮಿಯಲ್ಲಿ ಶಿಫಾರಿತ ಸಂಖ್ಯೆಗಳನ್ನು ನಿರ್ವಹಿಸಲು ಅನುಕೂಲ.

18	***ಮೆಟಾರೈಜಿಯಂ ಅನಿಸೋಪ್ಲಿಯೆ* ಮಣ್ಣಿನೊಂದೊಗೆ ಬೆರೆಸುವದು:** ಗೊಣ್ಣೆ ಹುಳುಗಳ ನಿರ್ವಹಣೆ ಪ್ರಾತ್ಯಕ್ಷಿಕೆಯ ತಾಕಿನಲ್ಲಿ ಶೇ.6% ಮತ್ತು ರೈತರ ಪದ್ಧತಿಯ ತಾಕಿನಲ್ಲಿ ಶೇ.16% ಇರುವದು ಕಂಡುಬಂದಿದೆ.
19	**ಜಲ ಕೃಷಿ ಘಟಕದಿಂದ ಮೇವು ಉತ್ಪಾದನೆ:** ಹೈಡ್ರೋಪೊನಿಕ್ ಜಲ ಕೃಷಿ ಘಟಕ ತಾಂತ್ರಿಕ ಉಪಯೋಗಿಸುವುದರಿಂದ ಹೆಚ್ಚಿನ ಹಸಿರು ಮೇವು (24 ಕಿ.ಗ್ರಾಂನಷ್ಟು) ಉತ್ಪಾದನೆಯಾಗುತ್ತಿದೆ.
20	**ಅಝೊಲ್ಲಾ ಉತ್ಪಾದನೆ ಪ್ರಾತ್ಯಕ್ಷಿಕೆ:** ಅಝೊಲ್ಲಾ ಉತ್ಪಾದನಾ ತಾಂತ್ರಿಕತೆ ಅಳವಡಿಸಿಕೊಂಡಿರುವುದರಿಂದ ಪ್ರತಿದಿನ ಪ್ರತಿ ಘಕಟದಿಂದ 2 ಕಿ.ಗ್ರಾಂ ಯಷ್ಟು ಅಝೋಲ್ಲಾ ಲಭ್ಯವಾಗುತ್ತಿರುವದು.
21	**ಮೇವಿನ ಬೀಜ/ ಗಣಿಕೆ ಉತ್ಪಾದನೆ:** ರೈತರು ನಿರಂತರವಾಗಿ ಬಹುವಾರ್ಷಿಕ ಮೇವಿನ ಬೆಳೆಗಳನ್ನು ಬೆಳೆಯುತ್ತಿದ್ದು, ಬೀಜೋತ್ಪಾದನೆಯನ್ನು ಕೂಡಾ ಕೈಗೊಂಡು ಅಕ್ಕ ಪಕ್ಕದ ರೈತರಿಗೆ ಮಾರಾಟ ಮಾಡುತ್ತಿದ್ದಾರೆ.
22	**ರಸಮೇವು ಉತ್ಪಾದನೆ:** ರಸಮೇವು ಉತ್ಪಾದನೆ ಮಾಡುತ್ತಿರುವುದರಿಂದ ಆಫ್ ಸೀಸನ್ ನಲ್ಲಿಯು ಸಹ ಪೌಷ್ಟಿಕಯುಕ್ತ ಮೇವು ಜಾನುವಾರುಗಳಿಗೆ ದೊರಕುತ್ತಿದೆ.
23	**ಅಡಿಕೆ ತೋಟಗಳಲ್ಲಿ ಸೂಕ್ತವಾದ ಹೊದಿಕೆ ಬೆಳೆ ಪರಿಶೀಲನೆ:** ವೆಲ್ವೆಟ್ ಬೀನ್ಸ (ಮುಕುನಾ) ಬೆಳೆಯನ್ನು ಅಡಿಕೆ ತೋಟಗಳಲ್ಲಿ ಹೊದಿಕೆ ಬೆಳೆಯಾಗಿ ಶಿಫಾರಸ್ಸು ಮಾಡಬಹುದಾಗಿದೆ.
24	**ಕಾಳು ಮೆಣಸು ಹಬ್ಬಿಸಲು ಸೂಕ್ತ ಬಹುಪಯೋಗಿ ಮರಗಳ (ಹೆಬ್ಬೇವು, ಸಿಲ್ವರ್ ಓಕ್) ಮೌಲ್ಯಮಾಪನ:** ಬಹುಪಯೋಗಿ ಮರಗಳ ತೊಗಟೆಯನ್ನು ಹೋಲಿಸಿದಾಗ ಹೆಬ್ಬೇವಿನ ತೊಗಟೆಯು ತುಂಬಾ ಮೃದುವಾಗಿದೆ.
25	**ಪರಿಸರ ಸ್ನೇಹಿ ವಿಧಾನಗಳ ಮೂಲಕ ಕಾಳುಮೆಣಸಿನಲ್ಲಿ ರಸ ಹೀರುವ ಕೀಟಗಳ ನಿರ್ವಹಣೆ:** ಅಡಿಕೆಯಲ್ಲಿ ರಸಹೀರುವ ಕೀಟಗಳ ನಿರ್ವಹಣೆಗೆ ಬೇವಿನ ಎಣ್ಣೆ ಬಳಕೆ ಉತ್ತಮ ಪರಿಸರ ಸ್ನೇಹಿ ವಿಧಾನವಾಗಿದೆ.
26	**ನೀರಾವರಿ ಅಡಿಯಲ್ಲಿ ಉಷ್ಣ ನಿರೋಧಕ ಕಡಲೆ ತಳಿ ಜೆ.ಜಿ.–14 ಪರಿಶೀಲನೆ:** ಉಷ್ಣ ನಿರೋಧಕ ಕಡಲೆ ತಳಿ ಜೆ.ಜಿ.–14 ನೀರಾವರಿ ಪದ್ಧತಿಯಲ್ಲಿ ತಡವಾಗಿ ಬಿತ್ತನೆ ಮಾಡಿದರು ಒಳ್ಳೆಯ ಇಳುವರಿ ನೀಡುತ್ತದೆ. ಜೆಜಿ–14 ಇಳುವರಿಯು 18.58 ಕ್ವಿ/ಹೆ ನಷ್ಟು ಬಂದಿದ್ದು, ಜೆಜಿ–11 ರ ಇಳುವರಿಗೆ ಹೋಲಿಸಿದಾಗ 18.58 ಪ್ರತಿಶತ ಹೆಚ್ಚಾಗಿರುತ್ತದೆ.
27	**ಅರಿಷಿಣ ಬೆಳೆಯಲ್ಲಿ ಬೇರು ಕೊಳೆಯುವ ರೋಗದ ನಿರ್ವಹಣೆಯ ಪರಿಶೀಲನೆ:** ಅರಿಶಿಣ ಬೆಳೆಯಲ್ಲಿ 0.3% COC +3 ಗ್ರಾಂ /ಲೀ. ಮೆಟಾಲಾಕ್ಸಿಲ್ 75 WP ಮತ್ತು ಟ್ರೈಕೋಡರ್ಮಾ ಮತ್ತು ಸುಡೋಮೋನಸ್ ಜೈವಿಕ ನಿಯಂತ್ರಕಗಳನ್ನು ಪ್ರತಿ ಎಕರೆಗೆ 2.5 ಕಿ.ಗ್ರಾಂ ನಂತೆ ಕೊಂಬುಗಳನ್ನು ಅದ್ದಿ ನಾಟಿ ಮಾಡುವುದರಿಂದ 35.69 ಪ್ರತಿಶತ ಇಳುವರಿ ಕಂಡುಬಂದಿದೆ.
28	**ದೇಶಿಯ ಪ್ರೋಜಿಸ್ಟ್ಯಾನ ಸ್ವಂಜನ್ನು ಬಳಸಿ ಕುರಿಗಳ ಬೇದೆಯನ್ನು ಒಗ್ಗೂಡಿಸುವ ಪ್ರಕ್ರಿಯೆಯ ಪರಿಶೀಲನೆ:** ದೇಶಿಯ ಪ್ರೋಜೆಸ್ಟ್ಯಾನ ಸ್ವಂಜನ್ನು ಬಳಸಿ ಕುರಿಗಳ ಬೆದೆಯನ್ನು ಒಗ್ಗೂಡಿಸುವ ತಂತ್ರಜ್ಞಾನದಿಂದ ನೂರಕ್ಕೆ ನೂರರಷ್ಟು ಬೆದೆಯ ಒಗ್ಗೂಡುವಿಕೆಯು ಕಂಡುಬಂದಿದ್ದು ರ್ಯತರ ಪದ್ಧತಿಯಲ್ಲಿ ಕೇವಲ 33.33 ಪ್ರತಿಶತದಷ್ಟು ಮಾತ್ರ ಕಂಡುಬಂದಿದೆ.
29	**ರೈತಾಪಿ ಕುಟುಂಬದ ಪೌಷ್ಟಿಕಾಂಶ ಅಗತ್ಯತೆ ಕುರಿತು ಪರಿಶೀಲನೆ:** ಹೆಚ್. ಡಿ. ಡಿ. ಎಸ್. ಮತ್ತು ಎಫ್. ಎಫ್. ಕ್ಯೂ. ಗಳಿಗೆ ಹೋಲಿಸಿದಾಗ, 24 ಘಂಟೆ ರಿಕಾಲ್ ಪದ್ಧತಿಯು ರೈತಾಪಿ ಕುಟುಂಬಗಳ ಆಹಾರ ಪದ್ಧತಿಯ ಬಗ್ಗೆ ಮಾಹಿತಿ ಪಡೆಯಲು ಸೂಕ್ತವಾಗಿದೆ ಎಂದು ತಿಳಿದು ಬಂದಿದೆ.
30	**ಹಿಂಗಾರು ಜೋಳದಲ್ಲಿ ಇದ್ದಿಲು ಕೊಳೆರೋಗ ನೀರೋಧಕ ತಳಿಯ ಪರಿಶೀಲನೆ:** ಎಮ್35–1 (21.25%) ತಳಿಗೆ ಹೋಲಿಸಿದರೆ, ಬಿ.ಜೆ.ವಿ.–44 (10.87%) ತಳಿಯು ಇದ್ದಲುಕಾಂಡ ಕೊಳೆ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ.
31	**ತೊಗರಿಯಲ್ಲಿ ಒಣಬೇರು ಕೊಳೆರೋಗ ನೀರೋಧಕ ತಳಿಯ ಪರಿಶೀಲನೆ:** ಜಿ ಆರ್ ಜಿ–811 (5.40%) ಒಣ ಬೇರು ಕೊಳೆ ರೋಗಕ್ಕೆ ಕಡಿಮೆ ತುತ್ತಾಗುತ್ತದೆ. ಇದರ ನಂತರ ಸ್ಥಾನದಲ್ಲಿ ಜಿ ಆರ್ ಜಿ –152 (9.80%) ತಳಿಯು ಬೇಗ ಮಾಗುವ ಮತ್ತು ಅಧಿಕ ಇಳುವರಿ ಕೊಡುವ ತಳಿಯಾಗಿದೆ.
32	**ಬೇಸಿಗೆ ಹಂಗಾಮಿಗಾಗಿ ಶೇಂಗಾ ಬೆಳೆಗಳ ಪರಿಶೀಲನೆ:** ಜಿಕೆವಿಕೆ–5 (ಪ್ರತಿ ಹೆಕ್ಟರಿಗೆ 15.24 ಕ್ವಿಂಟಲ್) ಹೋಲಿಸಿದರೆ ಜಿ2–52 ಹೆಚ್ಚಿನ ಇಳುವರಿ (ಪ್ರತಿ ಹೆಕ್ಟೇರಿಗೆ 17.86 ಕ್ವಿಂಟಲ್) ಹೆಚ್ಚಿನ ಇಳುವರಿ ಕೊಡುವ ಹಾಗೂ ಒಂದು ವಾರ ಮೊದಲೆ ಕಟಾವಿಗೆ ಬರುವ ತಳಿಯಾಗಿದೆ.
33	**ಹೆಚ್ಚಿನ ಇಳುವರಿ ಮತ್ತು ರೋಗ ನಿರೋಧಕತೆಗಾಗಿ ಹಸಿ ಮೆಣಸಿನಕಾಯಿಯ ಸಂಕರಣ ತಳಿಗಳ ಪರಿಶೀಲನೆ:** ಅರ್ಕಾಖ್ಯಾತಿ ತಳಿಯು ಹಸಿರು ಮೆಣಸಿನ ಕಾಯಿಗೆ ಸೂಕ್ತವಾಗಿದ್ದು, ಮಧ್ಯಮಖಾರವನ್ನು ಹೊಂದಿದ್ದು, ಅಧಿಕ ಇಳುವರಿ ಕೊಡುವ ಸಾಮಾರ್ಥ್ಯ ಹೊಂದಿದೆ. ರೋಗ ಮತ್ತು ಕೀಟ ಬಾಧೆ (<5%) ಕಡಿಮೆ ಇರುವುದರಿಂದ ಬೇಸಾಯದ ಖರ್ಚು ಕಡಿಮೆಯಾಗಿದೆ.
34	**Co-5 ಮೇವಿನ ತಳಿಯ ಪರಿಶೀಲನೆ:** Co –5 ಅಧಿಕ ಇಳುವರಿ ನೀಡುವ ಸೋಂಕು ರಹಿತ ತಳಿಯಾಗಿದೆ. ಈ ಮೇವಿನ ಬಳಕೆಯಿಂದ ಪ್ರತಿ ದಿನಕ್ಕೆ, ಹಾಲಿನ ಇಳುವರಿಯಲ್ಲಿ 0.5–1 ಲೀ. ಹೆಚ್ಚಳವಾಗಿದೆ.
35	**ಮಕ್ಕಳ / ಮಹಿಳೆ ಆರೋಗ್ಯಕ್ಕಾಗಿ ಜೀವಸತ್ವ–ಸಿ ಸಮೃದ್ಧ ಆಹಾರಗಳ ಮೌಲ್ಯ ಮಾಪನ:** ಒಂದು ತಿಂಗಳ ಹೊರಗಿನಿಂದ ಪೂರೈಸಿದ ಜೀವಸತ್ವಗಳ ಪೂರಕದಿಂದ ಮಕ್ಕಳಲ್ಲಿ ಜೀವಸತ್ವ 'ಸಿ' ಪ್ರಮಾಣದ ಸೇವನೆಯನ್ನು ಮೊದಲಿಗಿಂತ ಹೆಚ್ಚಿಸಲಾಯಿತು ಮತ್ತು ಜೀವಸತ್ವ 'ಸಿ' ಆಹಾರಗಳ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲಾಯಿತು

4.2.2 ಪದ್ಧತಿ ಪ್ರಾತ್ಯಕ್ಷಿಕೆಗಳು

4.2.2.1 ಕೃಷಿ ವಿಜ್ಞಾನ ಕೇಂದ್ರ

ಕ್ರ ಸಂ.	ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳು, ಭಾಗವಹಿಸಿದವರ ಸಂಖ್ಯೆ ಮತ್ತು ಪರಿಣಾಮಗಳು
1	**ಅಝೋಲ್ಲಾ ಬೇಸಾಯದ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (76):** ಅಝೋಲ್ಲಾ ಬೇಸಾಯವನ್ನು ಸುಮಾರು 10 ರೈತರು ವಿವಿಧ ಪಶುಸಂಗೋಪನೆ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ.
2	**ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆಗೆ ಮೀನಿನ ಆಹಾರವನ್ನು ತಯಾರಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (20):** 4 ರೈತರು ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆಯನ್ನು ಕೈಗೊಂಡು ಮೀನಿನ ಆಹಾರವನ್ನು ತಯಾರಿಸುವ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ.
3	**ಬಹುವಾರ್ಷಿಕ ಮೇವಿನ ಬೆಳೆಗಳ ಬೇಸಾಯದ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (10):** 6 ರೈತರು ಅಧಿಕ ಇಳುವರಿ ಕೊಡುವ ಬಹು ವಾರ್ಷಿಕ ಮೇವಿನ ಬೆಳೆಯನ್ನು ಅಳವಡಿಸಿಕೊಂಡು ಹೈನುಗಾರಿಕೆಯನ್ನು ಕೈಗೊಂಡಿದ್ದಾರೆ.
4	**ಹೆಸರು ಬೆಳೆಯಲ್ಲಿ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ (ರಾ.ಆ.ಭ., ಯೋಜನೆಯಡಿಯಲ್ಲಿ) (20):** 50 ಕ್ಕೂ ಹೆಚ್ಚು ರೈತರು ಬೀಜೋಪಚಾರದ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.
5	**ಹೆಸರು ಬೆಳೆಯಲ್ಲಿ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ (ರಾ.ಆ.ಭ., ಯೋಜನೆಯಡಿಯಲ್ಲಿ) (16):** 30 ಕ್ಕೂ ಹೆಚ್ಚು ರೈತರು ಬೀಜೋಪಚಾರದ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.
6	**ಹತ್ತಿ ಬೆಳೆಯಲ್ಲಿ ಕೀಟಗಳ ಸಮೀಕ್ಷೆಗಾಗಿ ಸೋಲಾರ್ ಆಕರ್ಷಕ ಬಲೆ ಅಳವಡಿಕೆಯ ಪದ್ಧತಿ ಪ್ರಾತ್ಯಕ್ಷಿಕೆ (36):** 5 ಕ್ಕೂ ಹೆಚ್ಚು ರೈತರು ಸೋಲಾರ್ ಆಕರ್ಷಕ ಬಲೆ ಅಳವಡಿಸಿಕೊಂಡು ಹತ್ತಿಯಲ್ಲಿ ಇರುವ ಕೀಟಗಳನ್ನು ಸಮೀಕ್ಷಿಸಿ ಸಕಾಲದಲ್ಲಿ ನಿರ್ವಹಣಾ ಕ್ರಮಗಳನ್ನು ಕೈಗೊಂಡಿರುತ್ತಾರೆ.
7	**ಹೆಸರಿನಲ್ಲಿ ಮೌಲ್ಯವರ್ಧನೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (24):** ರೈತ ಮಹಿಳೆಯರು ಹೆಸರು ಕಾಳಿನ ಮೌಲ್ಯವರ್ಧನೆ ಕುರಿತು ತಿಳಿದುಕೊಂಡರು.
8	**ಸೇವಂತಿಗೆ ಹೂವಿನಲ್ಲಿ ಸೈಕಲ್ ವೀಡರ್ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (40):** ರೈತರು ಸೇವಂತಿಗೆ ತಾಕಿನಲ್ಲಿ ಸೈಕಲ್ ವೀಡರ್ ಉಪಯೋಗದ ವಿಧಾನದ ಕುರಿತು ತಿಳಿದುಕೊಂಡರು.
9	**ಫಿನೈಲ್ ತಯಾರಿಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (44):** ರೈತ ಮಹಿಳೆಯರು ಫಿನೈಲ್ ತಯಾರಿಕೆ ಕುರಿತು ತಿಳಿದುಕೊಂಡರು.
10	**ಕೋಳಿ ಸಾಕಾಣಿಕೆಗೆ ಕೋಳಿಯ ಆಹಾರವನ್ನು ತಯಾರಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (56):** 20 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
11	**ಹೊರ ಪರಾವಲಂಬಿ ಜೀವಿಗಳ ಹತೋಟಿಗೆ ಕುರಿ ಮತ್ತು ಮೇಕೆಗಳನ್ನು ದ್ರಾವಣದಲ್ಲಿ ಎದ್ದುವುದರ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (150):** 50 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
12	**ಅಝೋಲ್ಲಾ ಬೇಸಾಯದ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (150):** ಅಝೋಲ್ಲಾ ಬೇಸಾಯವನ್ನು 60 ರೈತರು ವಿವಿಧ ಪಶುಸಂಗೋಪನೆ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ.
13	**ಕುರಿ ಮತ್ತು ಮೇಕೆ ಸಾಕಾಣಿಕೆಗೆ ದಾಣಿ ಮಿಶ್ರಣವನ್ನು ತಯಾರಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (150):** 70 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
14	**ಜಲ ಕೃಷಿ ಮೇವು ತಯಾರಿಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (150):** 30 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
15	**ಮೇಕೆಗಳಲ್ಲಿ ಜಂತು ನಾಶಕಗಳನ್ನು ಉಪಯೋಗಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (40):** 35 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
16	**ಗಿರಿರಾಜ ಮತ್ತು ಕಡಕನಾಥ ಕೋಳಿಗಳಲ್ಲಿ ಕೊಕ್ಕೆಯನ್ನು ಕತ್ತರಿಸುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (40):** 20 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
17	**ಬಿ.ಎಸ್ಸಿ (ಕೃಷಿ) ವಿದ್ಯಾರ್ಥಿಗಳಿಗೆ ಲಿಂಬೆ ಹಣ್ಣು ಹಾಗೂ ಪ್ಯಾಷನ್ ಫ್ರೂಟ್ ಸ್ಕ್ವಾಷ್ ತಯಾರಿಕೆ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (34):** ವಿದ್ಯಾರ್ಥಿಗಳು ಲಿಂಬೆ ಹಣ್ಣು ಹಾಗೂ ಪ್ಯಾಷನ್ ಫ್ರೂಟ್ ಸ್ಕ್ವಾಷ್ ತಯಾರಿಕೆ ಕುರಿತು ಅರಿತುಕೊಂಡರು.
18	**ನವಣೆಯ ನಿಪ್ಪಟ್ಟು ಹಾಗೂ ಸಾವೆ ಚಕ್ಕುಲಿ ಕುರಿತು ದೂರದರ್ಶನ ಚಂದನ ಚಾನಲ್‌ಗೆ ಪದ್ಧತಿ ಪ್ರಾತ್ಯಕ್ಷಿಕೆ ಕಾರ್ಯಕ್ರಮದ ವೀಕ್ಷಕರು:** ವೀಕ್ಷಕರಿಗೆ ಸಿರಿಧಾನ್ಯಗಳ ಮೌಲ್ಯವರ್ಧನೆ ಕುರಿತು ಅರಿತಿರಬಹುದು.
19	**ಲಕ್ಷ್ಮೀ ನಾರಾಯಣ ಹತ್ತಿ ಕಾರ್ಖಾನೆಯಲ್ಲಿ ಗುಲಾಬಿ ಕಾಯಿಕೊರಕದ ಸಮೀಕ್ಷೆಗಾಗಿ ಸೋಲಾರ್ ಆಕರ್ಷಕ ಬಲೆ ಅಳವಡಿಕೆಯ ಪದ್ಧತಿ ಪ್ರಾತ್ಯಕ್ಷಿಕೆ (14):** 5 ಕ್ಕೂ ಹೆಚ್ಚು ರೈತರು ಸೋಲಾರ್ ಆಕರ್ಷಕ ಬಲೆ ಅಳವಡಿಸಿಕೊಂಡು ಹತ್ತಿಗೆ ಬರುವ ಕೀಟಗಳನ್ನು ಸಮೀಕ್ಷಿಸಿ ಸಕಾಲದಲ್ಲಿ ನಿರ್ವಹಣಾ ಕ್ರಮಗಳನ್ನು ಕೈಗೊಂಡಿರುತ್ತಾರೆ.
20	**ಕೃಷಿ ವಿಜ್ಞಾನ ಕೇಂದ್ರದಲ್ಲಿ ಸೋಲಾರ್ ಆಕರ್ಷಕ ಬಲೆ ಅಳವಡಿಕೆಯ ಪದ್ಧತಿ ಪ್ರಾತ್ಯಕ್ಷಿಕೆ (12):** ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದ ರೈತರು ಕೀಟಗಳ ಸಮೀಕ್ಷೆಗಾಗಿ ಸೋಲಾರ್ ಆಕರ್ಷಕ ಬಲೆಯು ಹೇಗೆ ಲಾಭದಾಯಕ ಎಂದು ತಿಳಿದುಕೊಂಡರು.
21	**ಕಡಕನಾಥ ಕೋಳಿ ಮರಿಗಳಿಗೆ ಲಸಿಕೆಯನ್ನು ಹಾಕುವ ಕುರಿತು ಪದ್ಧತಿ ಪ್ರಾತ್ಯಕ್ಷಿಕೆ (12):** 10 ರೈತರು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ.
22	**ಜೈವಿಕ ರಸಗೊಬ್ಬರಗಳು ಮತ್ತು ಜೈವಿಕ ಶಿಲೀಂಧ್ರನಾಶಕದಿಂದ ಬೀಜಗಳ ಉಪಚಾರ (75):** ತೊಗರಿ ಪ್ರಾತ್ಯಕ್ಷಿಕೆತಾಕಿನಲ್ಲಿ ಶೇ.5.45% ಮತ್ತು ರೈತರ ಪದ್ಧತಿಯ ತಾಕಿನಲ್ಲಿ ಶೇ.15.65% ರಷ್ಟು ಸೊರಗುರೋಗ ಇರುವದು ಕಂಡುಬಂದಿತು.

23	**ಮೋಹಕ ಬಲೆಗಳ ಅಳವಡಿಕೆ (46):** ಕೀಟಗಳ ಸಮೀಕ್ಷೆಯಲ್ಲಿ ಮತ್ತು ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.
24	**ಬೋರ್ಡೋಕ್ಸ ಮಿಶ್ರಣ ತಯಾರಿಕೆ (35):** ದಾಳಿಂಬೆಯ ಪ್ರಾತ್ಯಕ್ಷಿಕೆ ತಾಕಿನಲ್ಲಿ 10.55% ಮತ್ತು ರೈತರ ಪದ್ಧತಿ ತಾಕಿನಲ್ಲಿ 18.15% ರೋಗ ಇರುವದು ಕಂಡುಬಂದಿದೆ.
25	**ದಾಳಿಂಬೆ, ನುಗ್ಗೆ ಮತ್ತು ಪೇರಲ ಚಾಟನಿ ಪದ್ಧತಿ (50):** ಈ ಬೆಳೆಗಳಲ್ಲಿ ಚಾಟನಿ ಪದ್ಧತಿಯಿಂದ ರೋಗ ರಹಿತ ಸಸಿಗಳ ಉತ್ಪಾದನೆಯಾಗಿದೆ.
26	***ಮೆಟಾರೈಜಂ ಅನಿಸೋಪ್ಲಿಯೆ* ಮಣ್ಣಿನೊಂದಿಗೆ ಬೆರೆಸುವದು (20):** ಗೊಣ್ಣೆ ಹುಳುಗಳು ಪ್ರಾತ್ಯಕ್ಷಿಕೆಯ ತಾಕಿನಲ್ಲಿ ಶೇ. 6% ಮತ್ತು ರೈತರ ಪದ್ಧತಿಯ ತಾಕಿನಲ್ಲಿ ಶೇ.16% ಇರುವದು ಕಂಡುಬಂದಿದೆ.
27	**ಜಲ ಕೃಷಿ ಘಟಕದಿಂದ ಮೇವು ಉತ್ಪಾನೆ (70):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ ಸುಮಾರು 15 ಜನ ರೈತರು ಅಳವಡಿಸಿಕೊಂಡಿದ್ದಾರೆ. ಪ್ರತಿದಿನ ಪ್ರತಿ ಘಟಕದಿಂದ ಸರಾಸರಿ 24 ಕಿ.ಗ್ರಾಂ ಯಷ್ಟು ಹಸಿರು ಮೇವು ಲಭ್ಯವಾಗುತ್ತಿರುವದು.
28	**ಅಝೊಲ್ಲಾ ಉತ್ಪಾದನೆ ಪ್ರಾತ್ಯಕ್ಷಿಕೆ (90:** ಸುಮಾರು 26 ಜನ ರೈತರು ಅಳವಡಿಸಿಕೊಂಡಿದ್ದಾರೆ. ಪ್ರತಿದಿನ ಪ್ರತಿ ಘಕಟದಿಂದ 2 ಕಿ.ಗ್ರಾಂ ಯಷ್ಟು ಅಲೋಲ್ಲಾ ಲಭ್ಯವಾಗುತ್ತಿರುವದು.
29	**ಮೇವಿನ ಬೀಜ/ ಗಣಿಕೆ ಉತ್ಪಾದನೆ (40):** 40 ರೈತರ ಪೈಕಿ 25 ಜನ ರೈತರು ನಿರಂತರವಾಗಿ ಬಹುವಾರ್ಷಿಕ ಮೇವಿನ ಬೆಳೆಗಳನ್ನು ಬೆಳೆಯುತ್ತಿದ್ದು ಬೀಜೋತ್ಪಾದನೆಯನ್ನು ಕೂಡಾ ಕೈಗೊಂಡು ಅಕ್ಕ ಪಕ್ಕದ ರೈತರಿಗೆ ಮಾರಾಟಮಾಡುತ್ತಿದ್ದಾರೆ.
30	**ರಸಮೇವು ಉತ್ಪಾದನೆ (40):** ಇಬ್ಬರು ರೈತರು ರಸ ಮೇವನ್ನು ತಯಾರಿಸುತ್ತಿದ್ದಾರೆ.
31	**ಸಾವಯವ ಅರಿಶಿಣದಲ್ಲಿ ಬೀಜೋಪಚಾರ (14):** ಶಿಲೀಂದ್ರ ರೋಗಗಳಿಂದ ಸಸಿಗಳು ಮುಕ್ತವಾಗಿವೆ. ಪ್ರಾತ್ಯಕ್ಷಿಕೆಯಲ್ಲಿ 26.2 ಟನ್/ಹೆ ಹಾಗೂ ರೈತರ ಪದ್ಧತಿಯಿಂದ 20.5 ಟನ್ನ/ಹೆ. ಇಳುವರಿ ಕಂಡು ಬಂದಿದ್ದು, 27.80% ಇಳುವರಿಯಲ್ಲಿ ಹೆಚ್ಚಳವಾಗಿದೆ.
32	**ಭತ್ತದಲ್ಲಿ ಬೀಜೋಪಚಾರ (13):** ಪ್ರಾಥಮಿಕ ಹಂತದಲ್ಲಿ ಬೆಂಕಿ ರೋಗವನ್ನು ಹತೋಟಿ ಮಾಡಲಾಗಿದೆ. ಪ್ರಾತ್ಯಕ್ಷಿಕೆಯಲ್ಲಿ 61.5 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 58.7 ಕ್ವಿ/ಹೆ ಇಳುವರಿ ಕಂಡು ಬಂದಿದ್ದು, 4.77% ಇಳುವರಿಯಲ್ಲಿ ಹೆಚ್ಚಳವಾಗಿದೆ.
33	**ಮಣ್ಣು ಮಾದರಿ ತೆಗೆಯುವ ವಿಧಾನಗಳು(ಭತ್ತ) (21):** ವೈಜ್ಞಾನಿಕವಾಗಿ ಮಣ್ಣು ಮಾದರಿ ತೆಗೆಯುವ ವಿಧಾನವನ್ನು ಅರಿತರು. ಪ್ರಾತ್ಯಕ್ಷಿಕೆಯಲ್ಲಿ 25.10% ಇಳುವರಿಯಲ್ಲಿ ಹೆಚ್ಚಳವಾಗಿದೆ.
34	**ಸ್ಯೆಲೋ ಹುಲ್ಲಿನ ಬೀಜಗಳ ಬೀಜೋಪಚಾರ (4):** ಹುಲ್ಲಿನ ಬೀಜದ ಉತ್ತಮ ಮೊಳಕೆ ಪ್ರಮಾಣ ಕಂಡುಬಂದಿದೆ. ಪ್ರಾತ್ಯಕ್ಷಿಕೆಯಲ್ಲಿ 35 ಟನ್/ಹೆ ಹಾಗೂ ರೈತರ ಪದ್ಧತಿಯಿಂದ 20 ಟನ್/ಹೆ ಇಳುವರಿ ಕಂಡು ಬಂದಿದ್ದು ಸುಮಾರು 75% ಇಳುವರಿಯಲ್ಲಿ ಹೆಚ್ಚಳವಾಗಿದೆ.
35	**ಮಣ್ಣು ಮಾದರಿ ವಿಧಾನಗಳು (ಅಡಿಕೆ) (6):** ವೈಜ್ಞಾನಿಕವಾಗಿ ಮಣ್ಣು ಮಾದರಿ ತೆಗೆಯುವ ವಿಧಾನವನ್ನು ಅರಿತರು. ಪ್ರಾತ್ಯಕ್ಷಿಕೆಯಲ್ಲಿ 31.3 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 25.52 ಕ್ವಿ/ಹೆ ಇಳುವರಿ ಕಂಡುಬಂದಿದ್ದು ಸುಮಾರು 22.65% ಇಳುವರಿಯಲ್ಲಿ ಹೆಚ್ಚಳವಾಗಿದೆ.
36	**ಮಣ್ಣು ಮಾದರಿ ವಿಧಾನಗಳು (ಭತ್ತ) (4):** ವೈಜ್ಞಾನಿಕವಾಗಿ ಮಣ್ಣು ಮಾದರಿ ತೆಗೆಯುವ ವಿಧಾನವನ್ನು ಅರಿತರು. ಪ್ರಾತ್ಯಕ್ಷಿಕೆಯಲ್ಲಿ 55.5 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 48.2 ಕ್ವಿ/ಹೆ ಇಳುವರಿ ಕಂಡುಬಂದಿದ್ದು, ಸುಮಾರು 15.15% ಇಳುವರಿಯಲ್ಲಿ ಹೆಚ್ಚಳವಾಗಿದೆ.
37	**ನಾಟಿ ಯಂತ್ರದ ಮೂಲಕ ಭತ್ತದ ನಾಟಿ ಹಾಗೂ ಸತುವಿನ ಸಲ್ಫೇಟ್ ಬಳಕೆ (8):** ಪ್ರಾತ್ಯಕ್ಷಿಕೆಯಲ್ಲಿ 65.6 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 60.6 ಕ್ವಿ/ಹೆ ಇಳುವರಿ ಕಂಡುಬಂದಿದ್ದು, ಸುಮಾರು 8.25% ಇಳುವರಿಯಲ್ಲಿ ಹೆಚ್ಚಳವಾಗಿದೆ.
38	**ಮುಸುಕಿನ ಜೋಳದಲ್ಲಿ ಕಳೆ ನಾಶಕಗಳ ಬಳಕೆ (8):** ಆಳುಗಳ ಖರ್ಚು ಕಡಿಮೆಯಾಗಿದ್ದು ಇಳುವರಿ ಹೆಚ್ಚಳಗೊಂಡಿದೆ. ಪ್ರಾತ್ಯಕ್ಷಿಕೆಯಲ್ಲಿ 60 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 55 ಕ್ವಿ/ಹೆ ಇಳುವರಿ ಕಂಡುಬಂದಿದ್ದು, ಸುಮಾರು 9.09% ಇಳುವರಿಯಲ್ಲಿ ಹೆಚ್ಚಳವಾಗಿದೆ.
39	**ಟ್ರೈಕೊಡರ್ಮಾ ಬಳಸಿ ಬೇವಿನ ಹಿಂಡಿಯನ್ನು ಶ್ರೀಮಂತಗೊಳಿಸುವುದು (ಕಾಳು ಮೆಣಸು) (7): ಶಿಲೀಂಧ್ರ ರೋಗಗಳ ಸಮರ್ಪಕ ಹತೋಟಿ.** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ ಸುಮಾರು 22.22% ಇಳುವರಿಯಲ್ಲಿ ಹೆಚ್ಚಳವಾಗಿದೆ.
40	**ಮಣ್ಣು ಮಾದರಿ ವಿಧಾನಗಳು (ಭತ್ತ) (234):** ವೈಜ್ಞಾನಿಕವಾಗಿ ಮಣ್ಣು ಮಾದರಿ ತೆಗೆಯುವ ವಿಧಾನವನ್ನು ಅರಿತರು. ಪ್ರಾತ್ಯಕ್ಷಿಕೆಯಲ್ಲಿ 55.6 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 51.29 ಕ್ವಿ/ಹೆ ಇಳುವರಿ ಕಂಡು ಬಂದಿದ್ದು, 8.59% ರಿಂದ 19.27% ಇಳುವರಿಯಲ್ಲಿ ಹೆಚ್ಚಳವಾಗಿದೆ.
41	**ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕ ಬಲೆಗಳ ಸ್ಥಾಪನೆ (9):** ಪ್ರಾತ್ಯಕ್ಷಿಕೆಯಲ್ಲಿ 14.8 ಕ್ವಿ/ಹೆ ಹಾಗೂ ರೈತರ ಪದ್ಧತಿಯಿಂದ 13 ಕ್ವಿ/ಹೆ ಇಳುವರಿ ಕಂಡುಬಂದಿದ್ದು, ಸುಮಾರು 13.85% ಇಳುವರಿಯಲ್ಲಿ ಹೆಚ್ಚಳವಾಗಿದೆ.
42	**ಮೋಹಕ ಬಲೆಗಳ ಅಳವಡಿಕೆ (10):** ಭತ್ತದಲ್ಲಿ ಹಳದಿ ಕಾಂಡಕೊರಕದ ಸಮೀಕ್ಷೆಯಿಂದ ಸಕಾಲದಲ್ಲಿ ನಿರ್ವಹಣೆ ಕ್ರಮಗಳನ್ನು ಕೈಗೊಂಡ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ ಸುಮಾರು 1.28% ಇಳುವರಿಯಲ್ಲಿ ಹೆಚ್ಚಳವಾಗಿದೆ.
43	**ಮೃದು ಕಾಂಡ ಕಸಿ (7):** ವೈಜ್ಞಾನಿಕ ಸಸ್ಯಾಭಿವೃದ್ಧಿ ವಿಧಾನದ ಅರಿವು ಪಡೆದರು. ಪ್ರಾತ್ಯಕ್ಷಿಕೆಯಲ್ಲಿನ ಯಶಸ್ವಿನ ಪ್ರಮಾಣ 90% ಹಾಗೂ ರೈತರ ಪದ್ಧತಿಯಲ್ಲಿ 55% ಕಂಡುಬಂದಿದೆ.
44	**ಒಣ ಮೇವಿನ ಪೌಷ್ಟೀಕರಣ (10):** 0.5 ಲೀ/ಪ್ರತಿ ದಿನ/ಪ್ರತಿ ರಾಸಿನಲ್ಲಿ ಹೆಚ್ಚಿನ ಹಾಲಿನ ಇಳುವರಿ ಕಂಡುಬಂದಿದೆ ಹಾಗೂ ಒಣಮೇವಿನ ವ್ಯರ್ಥವಾಗುವಿಕೆಯನ್ನು 20–30% ಕಡಿತಗೊಂಡಿದೆ.
45	**ಯಾಂತ್ರೀಕೃತ ಅಡಿಕೆ ಗೊನೆ ಕೊಯ್ಲು (35):** ಅಡಿಕೆ ಗೊನೆ ಕೊಯ್ಲು ಮಾಡಲು ಲಭ್ಯವಿರುವ ಯಂತ್ರದ ಕುರಿತು ಮಾಹಿತಿ ಪಡೆದರು.
46	**ಸಿ.ಎಮ್.ಟಿ. ತಂತ್ರಜ್ಞಾನ ಬಳಸಿ ಮಸ್ಟಾಟಿಸ್ ಪರೀಕ್ಷೆ (13):** ಸಿ.ಎಮ್.ಟಿ. ತಂತ್ರಜ್ಞಾನ ಬಳಸಿ ಮಸ್ಟಾಟಿಸ್ ಪರೀಕ್ಷೆ ಮಾಡುವ ವಿಧಾನ ಅರಿತರು. ಕ್ಲಿನಿಕಲ್ ಮಸ್ಟಾಟಿಸ್ ಪ್ರಮಾಣ 85% ಕಡಿತಗೊಂಡಿದೆ.
47	**ಜೀವಾಮೃತ, ಪಂಚಗವ್ಯ ಹಾಗೂ ಎರೆಹುಳು ಗೊಬ್ಬರ ತಯಾರಿಕೆ (40):** ಜೀವಾಮೃತ, ಪಂಚಗವ್ಯ ಹಾಗೂ ಎರೆಹುಳು ಗೊಬ್ಬರ ತಯಾರಿಕೆ ಕುರಿತು ಮಾಹಿತಿ ಪಡೆದರು. ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ ಸುಮಾರು 21.18% ಇಳುವರಿಯಲ್ಲಿ ಹೆಚ್ಚಳವಾಗಿದೆ.

48	**ಅಣಬೆ ಕೃಷಿ (42):** 10 ಜನ ಯುವಕರು ಅಣಬೆ ಕೃಷಿಯನ್ನು ಒಂದು ಉದ್ಯೋಗವನ್ನಾಗಿ ತೆಗೆದುಕೊಳ್ಳಲು ಇಚ್ಛೆ ಪಟ್ಟಿದ್ದಾರೆ. 1.5 ಕಿ.ಗ್ರಾಂ/ಚೀಲ ಕ್ಕೆ ಇಳುವರಿ ಬಂದಿದೆ.
49	**ಮಣ್ಣು ಮಾದರಿ ವಿಧಾನಗಳು (ಭತ್ತ) (60):** ವೈಜ್ಞಾನಿಕವಾಗಿ ಮಣ್ಣು ಮಾದರಿ ತೆಗೆಯುವ ವಿಧಾನವನ್ನು ಅರಿತರು. ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ ಸುಮಾರು 19.27% ಇಳುವರಿಯಲ್ಲಿ ಹೆಚ್ಚಳವಾಗಿದೆ.
50	**ಜೈವಿಕ ಗೊಬ್ಬರ ಹಾಗೂ ಜೈವಿಕ ಅಣುಜೀವಿಗಳಿಂದ ಬೀಜೋಪಚಾರ (15):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 80 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
51	**ಮಣ್ಣು ಮಾದರಿ ಸಂಗ್ರಹಿಸುವ ವಿಧಾನ ಮತ್ತು ಮಣ್ಣು ಪರೀಕ್ಷೆ ವಿಧಾನ (30):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 150 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
52	**ಜೈವಿಕ ಗೊಬ್ಬರಗಳ ಬಳಕೆಯ ವಿಧಾನ ಮತ್ತು ಅರ್ಕಾ ಲಿಂಬೆ ಸ್ಪೇಷಲ್ ಸಿಂಪರಣೆ (10):** ಕೇಂದ್ರದ ಕಾರ್ಯ ವ್ಯಾಪ್ತಿಯಲ್ಲಿರುವ 50 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
53	**ಜೈವಿಕ ಗೊಬ್ಬರಗಳ ಬಳಕೆಯ ವಿಧಾನ (20):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 30 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
54	**ತೊಗರಿಯಲ್ಲಿ ಮೊಹಕ ಬಲೆಗಳನ್ನು ಬಳಸಿ ಕಾಯಿ ಕೊರಕದ ನಿರ್ವಹಣೆ (20):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ30 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
55	**ಸರ್ಫ್ ಫಿಲ್ಡ ಕೆಚ್ಚಲು ಬಾವು ಪರೀಕ್ಷೆಯಂದ ಕೆಚ್ಚಲು ಬಾವು ಕಂಡು ಹಿಡಿಯುವ ಪ್ರಾತ್ಯಕ್ಷಿಕೆ (55):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 20 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ.
56	**ಮೇವಿನ ಅಚ್ಚು ತಯಾರಿಸುವುದು ಮತ್ತು ಅಜೋಲ್ಲಾವನ್ನು ಪ್ರರ್ಯಾಯ ಪಶು ಆಹಾರವಾಗಿ ಉಪಯೋಗಿಸುವ ಪ್ರಾತ್ಯಕ್ಷಿಕೆ (10):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 30 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ
57	**ಬೆಳೆ ಮಾಡುವಯಂತ್ರ, ರವಾ ಮಾಡುವಯಂತ್ರ ಮತ್ತು ಸಿರಿಧಾನ್ಯಗಳನ್ನು ಸಂಸ್ಕರಣೆ ಮಡುವ ಯಂತ್ರಗಳನ್ನು ಬಳಸಿ ಮೌಲ್ಯವರ್ಧನೆ ಮಾಡುವುದು (50):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 20 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿದ್ದಾರೆ

4.2.2.2 ಕೃಷಿ ವಿಸ್ತರಣಾ ಮತ್ತು ಶಿಕ್ಷಣ ಕೇಂದ್ರಗಳು

ಕ್ರ. ಸಂ.	ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳು ಮತ್ತು ಪರಿಣಾಮ
1	**ಹೆಸರು ಬೆಳೆಯಲ್ಲಿ ರಸಹೀರುವ ಕೀಟಗಳ ನಿರ್ವಹಣೆಗೆ ಇಮಿಡಾಕ್ಲೋಪ್ರಿಡ್ ಕೀಟನಾಶಕದಿಂದ ಬೀಜೋಪಚಾರ (80):** ದೇಶಿ ಡೀಲರ್ಸಗೆ ತರಗತಿಯಲ್ಲಿ ಪದ್ಧತಿ ಪ್ರಾತ್ಯಕ್ಷಿಕೆ ನೀಡಿದ್ದರಿಂದ ಅವರುಗಳು ಕೀಟನಾಶಕವನ್ನು ಬೀಜೋಪಚಾರಕ್ಕಾಗಿ ಮಾರಾಟ ಮಾಡಿ ಸಾಕಷ್ಟು ಸಲಹೆಗಳನ್ನು ಜಿಲ್ಲೆಯ ರೈತರಿಗೆ ನೀಡಿರುತ್ತಾರೆ. ಉಪಚಾರ ಕೈಗೊಂಡ ರೈತರು ಶೇ.5 ರಿಂದ 10 ರಷ್ಟು ಹೆಚ್ಚಿನ ಇಳುವರಿ ಪಡೆದಿರುತ್ತಾರೆ.
2	**ಎಲೆಕೋಸಿನಲ್ಲಿ ಕೀಟಗಳು, ರೋಗಗಳು, ಪೋಷಕಾಂಶಗಳ ಕೊರತೆಯ ನಿರ್ವಹಣೆ ಮತ್ತು ಹೆಚ್ಚಿನ ಇಳುವರಿ ಪ್ರಾತ್ಯಕ್ಷಿಕೆ (2):** ಒಳ್ಳೆಯ ಕೀಟ, ರೋಗ ಮತ್ತು ಪೋಷಕಾಂಶಗಳ ನಿರ್ವಹಣೆಯಿಂದ ಅಧಿಕ ಇಳುವರಿ ಪಡೆಯಲಾಯಿತು.
3	**ಸೋಯಾ ಅವರೆಯಲ್ಲಿ ಸಮಗ್ರ ಬೇಸಾಯ ಕ್ರಮಗಳನ್ನು ಅನುಸರಿಸಿ ಹೆಚ್ಚಿನ ಇಳುವರಿ (2): ಅಧಿಕ** ಇಳುವರಿ ಪಡೆಯಲಾಯಿತು ಮತ್ತು ರೈತರು ಒಪ್ಪಬಹುದಾದ ತಂತ್ರಜ್ಞಾನ ಆಗಿದೆ.
4	**ಹತ್ತಿಯಲ್ಲಿ ಸಮಗ್ರ ಕೀಟ, ರೋಗಗಳ ಪರಿಣಾಮಕಾರಿ ಹತೋಟಿ ಮತ್ತು ಪೋಷಕಾಂಶಗಳ ಕೊರತೆ ಲಕ್ಷಣಗಳ ಬಗ್ಗೆ ಪ್ರಾತ್ಯಕ್ಷಿತೆ (2):** ಹತ್ತಿ ಸಮಗ್ರ ಬೆಳೆ ನಿರ್ವಹಣೆಯಿಂದ ಅಧಿಕ ಇಳುವರಿ ಪಡೆಯಲಾಯಿತು.
5	**ಕಡಲೆ ತಳಿ (ಜೆಜೆ–11)ಯ ಸಮಗ್ರ ಬೇಸಾಯ ಕ್ರಮಗಳು ಮತ್ತು ಹೆಚ್ಚಿನ ಇಳುವರಿಯ ಬಗ್ಗೆ ಪ್ರಾತ್ಯಕ್ಷಿಕೆ (2):** ಶೇ. 17.38 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಯಿತು ಮತ್ತು ರೈತರು ಒಪ್ಪಬಹುದಾದ ತಂತ್ರಜ್ಞಾನ ಆಗಿದೆ.
6	**ಶೇ. 2ರ ಸುಣ್ಣದ ಕ್ಲೋರೈಡ್‌ದಿಂದ ಬೀಜ ಕಠಿಣಗೊಳಿಸುವುದು (50):** ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ 400 ಕ್ಕೂ ಹೆಚ್ಚು ರೈತರು ಅಳವಡಿಸಿಕೊಂಡಿರುವರು.

4.2.3 ಕ್ಷೇತ್ರ ಪದ್ಧತಿ ಪ್ರಾತ್ಯಕ್ಷಿಕೆಗಳು / ಸಂಪೂರ್ಣ ಕ್ಷೇತ್ರ ಪದ್ಧತಿ ಪ್ರಾತ್ಯಕ್ಷಿಕೆಗಳು

ಕ್ರ. ಸಂ	ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳು ಮತ್ತು ಪರಿಣಾಮ
1	**ಅಧಿಕ ಇಳುವರಿ ಮತ್ತು ಲಾಭಕ್ಕಾಗಿ ಸೋಯಾಅವರೆ ಡಿಎಸ್‌ಬಿ–21 ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 20ಎಕರೆ ಮತ್ತು ರೈತರು 40):** ಸೋಯಾಅವರೆಯ ಡಿಎಸ್‌ಬಿ–21 ತಳಿಯ ಅಳವಡಿಕೆ ಮತ್ತು ಸಮಗ್ರ ಬೆಳೆ ನಿರ್ವಹಣಾ ಪದ್ಧತಿಯಿಂದ ರೈತರ ಪದ್ಧತಿಗೆ (17.00 ಕ್ವಿ./ಹೆ) ಹೋಲಿಸಿದಾಗ 16.32% ಅಧಿಕ ಇಳುವರಿ (19.77 ಕ್ವಿ./ಹೆ) ಪಡೆಯಲಾಗಿದೆ.
2	**ಶೇಂಗಾ ಬೆಳೆಯಲ್ಲಿ ಸುಧಾರಿತ ಜಿ2–52 ತಳಿ ಪರಿಚಯ ಹಾಗೂ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 50):** ಅಧಿಕ ಇಳುವರಿ ಕೊಡುವ ಜಿ2–52 ಶೇಂಗಾ ತಳಿ ಬಳಕೆ ಹಾಗು ಸಮಗ್ರ ಬೆಳೆ ನಿರ್ವಹಣೆಯ ಪ್ರಾತ್ಯಕ್ಷಿಕೆ ಕೈಗೊಂಡಿದ್ದರಿಂದ ರೈತರ ಪದ್ಧತಿಗೆ (19.50 ಕ್ವಿ./ಹೆ) ಹೋಲಿಸಿದಾಗ 26.87% ಅಧಿಕ ಇಳುವರಿ (24.74 ಕ್ವಿ./ಹೆ) ಪಡೆಯಲಾಗಿದೆ.

3	**ಹೆಸರು ಬೆಳೆಯಲ್ಲಿ ಸುಧಾರಿತ ಡಿಜಿಜಿವಿ–2 ತಳಿ ಪರಿಚಯ ಹಾಗೂ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 40):** ಸುಧಾರಿತ ಹೆಸರಿನ ಡಿಜಿಜಿವಿ–2 ತಳಿಯ ಅಳವಡಿಕೆ ಮತ್ತು ಸಮಗ್ರ ಬೆಳೆ ನಿರ್ವಹಣಾ ಪದ್ಧತಿಯಿಂದ ರೈತರ ಪದ್ಧತಿಗೆ (7.29 ಕ್ವಿಂ./ಹೆ) ಹೋಲಿಸಿದಾಗ 10.66% ಅಧಿಕ ಇಳುವರಿ (8.17 ಕ್ವಿಂ./ಹೆ) ಪಡೆಯಲಾಗಿದೆ.
4	**ಉದ್ದಿನಲ್ಲಿ (ತಳಿ ಡಿಯು–1) ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 65):** ಸುಧಾರಿತ ಉದ್ದಿನ ಡಿಯು–1 ತಳಿಯ ಅಳವಡಿಕೆ ಮತ್ತು ಸಮಗ್ರ ಬೆಳೆ ನಿರ್ವಹಣಾ ಪದ್ಧತಿಯಿಂದ ರೈತರ ಪದ್ಧತಿಗೆ (8.2 ಕ್ವಿಂ./ಹೆ) ಹೋಲಿಸಿದಾಗ 8.54% ಅಧಿಕ ಇಳುವರಿ (8.9 ಕ್ವಿಂ./ಹೆ) ಪಡೆಯಲಾಗಿದೆ.
5	**ಹೆಸರು ಬೆಳೆಯಲ್ಲಿ ಸುಧಾರಿತ ಐಪಿಎಮ್–02–14/ಶ್ರೇಯಾ ತಳಿ ಪರಿಚಯ ಹಾಗೂ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 50):** ಹಿಂಗಾರು ಹಂಗಾಮಿನ ಭತ್ತದ ಗದ್ದೆಗಳಲ್ಲಿ ಹೆಸರಿನ ನೂತನ ತಳಿ (ಐಪಿಎಂ–02–14 (ಶ್ರೇಯಾ) ಅಳವಡಿಕೆ ಹಾಗೂ ಸಮಗ್ರ ಬೆಳೆ ನಿರ್ವಹಣೆಯಿಂದ ರೈತರ ಪದ್ಧತಿಗೆ (6.8 ಕ್ವಿಂ./ಹೆ) ಹೋಲಿಸಿದಾಗ 6.03% ಅಧಿಕ ಇಳುವರಿ (7.21 ಕ್ವಿಂ./ಹೆ) ಪಡೆಯಲಾಗಿದೆ.
6	**ಸುಧಾರಿತ ಕಡಲೆ ತಳಿ ಜಾಕಿ–9218 ಮತ್ತು ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 75):** ಕಡಲೆಯಲ್ಲಿ ಜಾಕಿ–9218 ಸುಧಾರಿತ ತಳಿ ಅಳವಡಿಕೆ ಹಾಗೂ ಸಮಗ್ರ ಬೆಳೆ ನಿರ್ವಹಣೆಯಿಂದ ರೈತರ ಪದ್ಧತಿಗೆ (17.37 ಕ್ವಿಂ./ಹೆ) ಹೋಲಿಸಿದಾಗ 6.73% ಅಧಿಕ ಇಳುವರಿ (18.54 ಕ್ವಿಂ./ಹೆ) ಪಡೆಯಲಾಗಿದೆ.
7	**ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 75):** 12.5% ಹೆಚ್ಚಿನ ಇಳುವರಿ ಮತ್ತು ಕಡಿಮೆ ಉತ್ಪಾದನಾ ವೆಚ್ಚ
8	**ಕಡಲೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 75):** 12.54% ಹೆಚ್ಚಿನ ಇಳುವರಿ ಮತ್ತು ಉತ್ಪಾದನಾ ವೆಚ್ಚ ಕಡಿಮೆ.
9	**ಸೂರ್ಯಕಾಂತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 10ಎಕರೆ ಮತ್ತು ರೈತರು 25):** ಕಡಿಮೆ ರೋಗ ಭಾದೆಯಿಂದ 11.8% ಹೆಚ್ಚಿನ ಇಳುವರಿ ಪಡೆಯಲಾಯಿತು.
10	**ಅಗಸೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 50):** 16.6% ಹೆಚ್ಚಿನ ಇಳುವರಿ ಪಡೆಯಲಾಯಿತು.
11	**ಶೇಂಗಾದಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 54ಎಕರೆ ಮತ್ತು ರೈತರು 135):** 19.8% ಹೆಚ್ಚಿನ ಇಳುವರಿ ಮತ್ತು ಹೆಚ್ಚಿನ ಎಣ್ಣಿ ಅಂಶ ಕಂಡುಬಂದಿದೆ.
12	**ಹೆಸರಿನಲ್ಲಿ ಸಮಗ್ರ ಬೆಳೆ ನಿರ್ವಹಣೆ (ಡಿಜಿಜಿವಿ–2) (ಕ್ಷೇತ್ರ 30ಎಕರೆ ಮತ್ತು ರೈತರು 86):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗೆ ಹೋಲಿಸಿದಾಗ 46.92% ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
13	**ಉದ್ದಿನಲ್ಲಿ ಸಮಗ್ರ ಬೆಳೆ ನಿರ್ವಹಣೆ (ಡಿಯು–1) (ಕ್ಷೇತ್ರ 30ಎಕರೆ ಮತ್ತು ರೈತರು 84):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗೆ ಹೋಲಿಸಿದಾಗ 42.6% ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
14	**ಶೇಂಗಾ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಜಿ–2–52) (ಕ್ಷೇತ್ರ 30ಎಕರೆ ಮತ್ತು ರೈತರು 84):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗೆ ಹೋಲಿಸಿದಾಗ 36.78 % ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
15	**ಕಡಲೆ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 75):** ಜಾಕಿ–9218 ತಳಿಯು ರೈತರ ಪದ್ಧತಿಗಿಂತ ಒಟ್ಟಾರೆ ಶೇಕಡ 17.77 ರಷ್ಟು ಇಳುವರಿ ಹೆಚ್ಚಾಗಿದೆ.
16	**ಹೆಸರು ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 50):** ಹೆಸರು ಡಿ.ಜಿ.ಜಿ.ವಿ–2 ತಳಿಯು ರೈತರ ಪದ್ಧತಿಗಿಂತ (ಸೆಲೆಕ್ಷನ್ 4 ತಳಿಗೆ) ಹೋಲಿಸಿದಾಗ ಒಟ್ಟಾರೆ ಶೇಕಡ 28.88 ರಷ್ಟು ಇಳುವರಿ ಹೆಚ್ಚಾಗಿದೆ.
17	**ತೊಗರಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 30ಎಕರೆ ಮತ್ತು ರೈತರು 75):** ಟಿಎಸ್3ಆರ್ ತಳಿಯು ಸ್ಥಳೀಯ ತಳಿಗಿಂತ 15.79 ಪ್ರತಿಶತ ಹೆಚ್ಚಿನ ಇಳುವರಿ ಪಡೆಯಲಾಗಿದೆ.
18	**ಶೇಂಗಾ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 20ಎಕರೆ ಮತ್ತು ರೈತರು 100):** ಸಮಗ್ರ ಬೆಳೆ ನಿರ್ವಹಣೆಯೊಂದಿಗೆ ಜಿ–2–52 ಶೇಂಗಾ ತಳಿಯು ರೈತರ ಪದ್ಧತಿಗಿಂತ ಶೇಕಡ 18.58 ರಷ್ಟು ಹೆಚ್ಚಿನ ಇಳುವರಿ ಕಂಡುಬಂದಿದೆ.
19	**ಅಧಿಕ ಇಳುವರಿ ನೀಡುವ ಅಗಸೆ ತಳಿ ಪಿ.ಕೆ.ವಿ. ಎನ್.ಎಲ್–260 ಪರಿಚಯಿಸುವಿಕೆ (ಕ್ಷೇತ್ರ 40ಎಕರೆ ಮತ್ತು ರೈತರು 100):** ಪಿಕೆವಿಎನ್ಎಲ್–260 ತಳಿಯು ಸ್ಥಳೀಯ ತಳಿಗಿಂತ ಒಟ್ಟಾರೆ ಪ್ರತಿಶತ ಇಳುವರಿ 22.19 ರಷ್ಟು ಹೆಚ್ಚಾಗಿದೆ.

4.2.4 ಮುಂಚೂಣಿ ಪ್ರಾತ್ಯಕ್ಷಿಕೆಗಳು

ಕ್ರ. ಸಂ	ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳು ಮತ್ತು ಪರಿಣಾಮ (ಕೃಷಿ ವಿಜ್ಞಾನ ಕೇಂದ್ರ)
1	**ಸಾವಯವ ಪದ್ಧತಿಯಲ್ಲಿ ಭತ್ತದ (ತಳಿ ಮುಗದ ಸಿರಿ) ಕೃಷಿ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಭತ್ತದ (ತಳಿ ಮುಗದ ಸಿರಿ) ಬೆಳೆಯಲ್ಲಿ ಸಾವಯವ ಪದ್ಧತಿಯನ್ನು ರೈತರ ಪದ್ಧತಿಗೆ ಹೋಲಿಸಿದಾಗ 9.75% ಕಡಿಮೆ ಇಳುವರಿ ಪಡೆಯಲಾಗಿದೆ.
2	**ನಾಟಿ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸಮಗ್ರ ಬೆಳೆ ನಿರ್ವಹಣೆಯು ರೈತರ ಪದ್ಧತಿಗಿಂತ ಶೇ. 20.97 ರಿಂದ ಶೇ. 27ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
3	**ಗೋವಿನಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಗೋವಿನಜೋಳದಲ್ಲಿ ಸಮಗ್ರ ಬೆಳೆ ಪದ್ಧತಿ ಅಳವಡಿಕೆಯಿಂದ ರೈತರ ಪದ್ಧತಿಗೆ ಹೋಲಿಸಿದಾಗ ಶೇ. 9.97 ರಿಂದ 13.04% ಅಧಿಕ ಇಳುವರಿ ಪಡೆಯಲಾಗಿದೆ.
4	**ಗೋದಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸಮಗ್ರ ಬೆಳೆ ನಿರ್ವಹಣೆಯೊಂದಿಗೆ ಯುಎಎಸ್–446 ತಳಿ ಅಳವಡಿಕೆಯಿಂದ ರೈತರ ಪದ್ಧತಿಗೆ ಹೊಲಿಸಿದಾಗ 14.3% ಅಧಿಕ ಇಳುವರಿ ಪಡೆಯಲಾಗಿದೆ.

5	**ಹಿಂಗಾರು ಜೋಳದ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಅಧಿಕ ಇಳುವರಿ ಕೊಡುವ ಹಾಗು ಕಪ್ಪು ಕಾಂಡ ಕೊಳೆ ರೋಗ ನಿರೋಧಕ ಎಸ್.ಪಿ.ವಿ.–2217 ಜೋಳದ ತಳಿಯು ಸ್ಥಳೀಯ ತಳಿಗೆ ಹೋಲಿಸಿದಾಗ 9.65% ಅಧಿಕ ಇಳುವರಿ ನೀಡಿದೆ.
6	**ಸಾವೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಹೆಚ್ಚಿನ ಮೇವು ಕೊಡುವ ಸಾವೆಯ ನೂತನ ಡಿ.ಎಚ್.ಎಲ್.ಎಮ್.–36–3 ತಳಿಯು ಸ್ಥಳೀಯ ತಳಿಗೆ ಹೋಲಿಸಿದಾಗ 23.16% ಅಧಿಕ ಇಳುವರಿ ನೀಡಿದೆ.
7	**ಬರಗು (ತಳಿ ಡಿಎಚ್ಪಿಎಮ್–2769) ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 4):** ಹೆಚ್ಚಿನ ಮೇವು ಕೊಡುವ ಬರಗಿನ ನೂತನ ಡಿಎಚ್ಪಿಎಮ್–2769 ತಳಿಯು ಸ್ಥಳೀಯ ತಳಿಗೆ ಹೋಲಿಸಿದಾಗ 29.24% ಅಧಿಕ ಇಳುವರಿ ನೀಡಿದೆ.
8	**ಬಿ.ಟಿ.ಹತ್ತಿಯಲ್ಲಿ ಗುಲಾಬಿ ಕಾಯಿಕೊರಕದ ಸಮಗ್ರ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಸಕಾಲದಲ್ಲಿ ಗುಲಾಬಿ ಕಾಯಿಕೊರಕದ ನಿರ್ವಹಣೆಯಿಂದ ರೈತರ ಪದ್ಧತಿಗೆ ಹೋಲಿಸಿದಾಗ 42.8% ಅಧಿಕ ಇಳುವರಿ ಪಡೆಯಲಾಗಿದೆ.
9	**ಭೀಮಾ ಸುಪರ್ ಈರುಳ್ಳಿ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಭೀಮಾ ಸೂಪರ್ ತಳಿಯು ತಡವಾದ ಮುಂಗಾರು ಹಂಗಾಮಿಗೆ ಸೂಕ್ತವಾಗಿದ್ದು, ರೈತರ ಪದ್ಧತಿಗೆ ಹೋಲಿಸಿದಾಗ 20.97% ಅಧಿಕ ಇಳುವರಿ ನೀಡಿದೆ.
9	**ಟೊಮ್ಯಾಟೊ ಬೆಳೆಯಲ್ಲಿ ವೆಜಿಟೆಬಲ್ ಸ್ಪೇಷಲ್‌ನ ಪ್ರಾತ್ಯಕ್ಷಿಕೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಟೊಮ್ಯಾಟೊ ಬೆಳೆಯ ನಿರ್ವಹಣೆ ಹಾಗೂ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ವೆಜಿಟೆಬಲ್ ಸ್ಪೇಷಲ್‌ನ ಬಳಕೆಯಿಂದ ರೈತರ ಪದ್ಧತಿಗೆ ಹೋಲಿಸಿದಾಗ 13.24% ಅಧಿಕ ಇಳುವರಿ ನೀಡಿದೆ.
10	**ಮಾವು ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಮಾವು ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಅಳವಡಿಕೆಯಿಂದ ರೈತರ ಪದ್ಧತಿಗೆ ಹೋಲಿಸಿದಾಗ 23.7% ಅಧಿಕ ಇಳುವರಿ ಪಡೆಯಲಾಗಿದೆ.
11	**ಪೇರು ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಪೇರು ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಅಳವಡಿಕೆಯಿಂದ ರೈತರ ಪದ್ಧತಿಗೆ ಹೋಲಿಸಿದಾಗ 10.95% ಅಧಿಕ ಇಳುವರಿ ಪಡೆಯಲಾಗಿದೆ.
12	**ವಿವಿಧ ಹುಲ್ಲಿನ ತಳಿಗಳ ಪ್ರಾತ್ಯಕ್ಷಿಕೆ (ಕ್ಷೇತ್ರ 0.5 ಎಕರೆ ಮತ್ತು ರೈತರು 5):** ಏಕದಳ ಮತ್ತು ದ್ವಿದಳ ಮೇವಿನ ಬೆಳೆಗಳನ್ನು (3:1) ಜಾನುವಾರುಗಳಿಗೆ ಕೊಡುವುದರಿಂದ ಹಾಲಿನ ಇಳುವರಿಯು ಶೇ. 10 ರಷ್ಟು ಹೆಚ್ಚಾಗುವುದು ಮತ್ತು ಕುರಿ/ಮೇಕೆಗಳಿಗೆ ಕೊಡುವುದರಿಂದ ಮಾಂಸದ ಇಳುವರಿಯು ಶೇ. 20.26 ರಷ್ಟು ಹೆಚ್ಚಾಗುವುದು.
13	**ಹೈನುಗಾರಿಕೆ ಜಾನುವಾರುಗಳಲ್ಲಿ ಹೊರ ಪರಾವಲಂಬಿ ಜೀವಿಗಳ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಹೈನು ರಾಸುಗಳಿಗೆ ಪೋರಾನ್ ದ್ರಾವಣ ಲೇಪನದಿಂದಾಗಿ ಶೇ. 100 ರಷ್ಟು ಹೊರಪರಾವಲಂಬಿ ಜೀವಿಗಳ ನಿಯಂತ್ರಣ ಮಾಡಲಾಗಿದೆ.
14	**ಕುರಿ/ ಮೇಕೆಗಳಿಗೆ ಇಮ್ಯೂನೊ ಬೂಸ್ಟರನ್ನು ಪೂರೈಸುವುದು (ಕ್ಷೇತ್ರ 2ಎಕರೆ ಮತ್ತು ರೈತರು 5):** 50 ರೈತರು ಇಮ್ಯೂನೊ ಬೂಸ್ಟರನ್ನು ಕುರಿ ಮತ್ತು ಮೇಕೆಗಳಿಗೆ ಉಪಯೋಗಿಸುತ್ತಿದ್ದು, ಇದರಿಂದ ಶೇ.60 ರಷ್ಟು ಸಾವಿನ ಪ್ರಮಾಣವನ್ನು ತಗ್ಗಿಸಲಾಗಿದೆ.
15	**ಕೃಷಿ ಹೊಂಡದಲ್ಲಿ ಮೀನುಗಾರಿಕೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಕೃಷಿ ಹೊಂಡದಲ್ಲಿ ಮೀನು ಪಾಲನೆಯಿಂದ 8 ರೈತರು ತಮ್ಮಲ್ಲಿರುವ ಸಂಪನ್ಮೂಲಗಳ ಉತ್ತಮ ಸದ್ಬಳಕೆ ಮಾಡಿರುತ್ತಾರೆ.
16	**ಕೃಷಿ ಕುಟುಂಬಗಳಿಗೆ ವರ್ಷಪೂರ್ತಿ ಪೌಷ್ಠಿಕ ಭದ್ರತೆಗಾಗಿ ಪೌಷ್ಠಿಕ ಕೈತೋಟದ ಪ್ರಾತ್ಯಕ್ಷಿಕೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಧಾರವಾಡ ತಾಲೂಕಿನ 10 ರೈತ ಕುಟುಂಬಗಳಿಗೆ ತರಕಾರಿ ಬೆಳೆಯುವ ಕುರಿತು ಜ್ಞಾನಭಿವೃದ್ಧಿ, ಪೌಷ್ಠಿಕ ಭದ್ರತೆಗಾಗಿ ಪೋಷಕಾಂಶಭರಿತ ಆಹಾರ ಹಾಗೂ ಪೌಷ್ಠಿಕ ಭದ್ರತೆಯ ಕುರಿತು ಮಹಿಳೆಯರಲ್ಲಿ ಅರಿವು ಮೂಡಿಸಲಾಗಿದೆ. ರೈತರ ಪದ್ಧತಿಗೆ ಹೋಲಿಸಿದಾಗ 100% ಇಳುವರಿ ನೀಡಿದೆ.
17	**ಮೆಕ್ಕೆಜೋಳದ ಬೆಳೆಯಲ್ಲಿ ಸಮಗ್ರ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಗೋವಿನ ಜೋಳದಲ್ಲಿ ಸಮಗ್ರ ಬೆಳೆ ಪದ್ಧತಿ ಅನುಸರಿಸುವುದರಿಂದ ರೈತರ ಪದ್ಧತಿಗಿಂತ ಶೇ. 9.97 ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು
18	**ಹಿಂಗಾರು ಹಂಗಾಮಿನಲ್ಲಿ ಜೋಳದ ಬೆಳೆಯಲ್ಲಿ ತಳಿ ಎಸ್.ಪಿ.ವಿ–2217 ರ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10): ಎಸ್.ಪಿ.ವಿ–2217** ತಳಿಯು ಸ್ಥಳೀಯ ತಳಿಗಿಂತ ಶೇ. 20.97 ರಷ್ಟು ಅಧಿಕ ಇಳುವರಿ ಕಂಡು ಬಂದಿದೆ.
19	**ನವಣೆ ಬೆಳೆಯ ತಳಿಯಾದ ಡಿ.ಹೆಚ್.ಎಫ್.ಟಿ–109–3 ರ ಪ್ರಾತ್ಯಕ್ಷಿಕೆ (ಕ್ಷೇತ್ರ 6 ಎಕರೆ ಮತ್ತು ರೈತರು 15):** ಡಿ.ಹೆಚ್.ಎಫ್.ಟಿ–109–3 ತಳಿಯು ಸ್ಥಳೀಯ ತಳಿಗಿಂತ ಶೇ. 37 ರಷ್ಟು ಹೆಚ್ಚಿನ ಇಳುವರಿ ಕಂಡು ಬಂದಿರುತ್ತದೆ.
20	**ಸಾಮೆ ಬೆಳೆಯ ತಳಿಯಾದ ಡಿ.ಹೆಚ್.ಎಲ್.ಎಮ್–36–3 ರ ಪ್ರಾತ್ಯಕ್ಷಿಕೆ (ಕ್ಷೇತ್ರ 4ಎಕರೆ ಮತ್ತು ರೈತರು 10):** ಡಿ.ಹೆಚ್.ಎಲ್.ಎಮ್–36–3 ತಳಿಯು ಸ್ಥಳೀಯ ತಳಿಗಿಂತ ಶೇ. 18.7 ರಷ್ಟು ಹೆಚ್ಚಿನ ಇಳುವರಿ ಕಂಡು ಬಂದಿರುತ್ತದೆ.
21	**ಈರುಳ್ಳಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸಮಗ್ರ ಬೆಳೆ ನಿರ್ವಹಣೆ ಜೊತೆಗೆ ಈರುಳ್ಳಿಯ ಸುಧಾರಿತ ತಳಿಯಾದ ಭೀಮಾ ಸೂಪರ್ ತಳಿಯು ಸ್ಥಳಿಯ ತಳಿಗಿಂತ ಶೇ. 23.9 ರಷ್ಟು ಅಧಿಕ ಇಳುವರಿ ನೀಡಿದೆ.
22	**ಎಲೆಕೋಸಿನ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಎಲೆಕೋಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ ಪದ್ಧತಿ ಆಳವಡಿಸುವುದರಿಂದ ರೈತರ ಪದ್ಧತಿಗಿಂತ 12.73% ಹೆಚ್ಚಿನ ಇಳುವರಿ ಪಡೆಯಲಾಗಿದೆ.
23	**ಮೆಣಸಿನಕಾಯಿಯ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2ಎಕರೆ ಮತ್ತು ರೈತರು 5):** ಸಮಗ್ರ ಬೆಳೆ ನಿರ್ವಹಣೆ ತಾಂತ್ರಿಕತೆಯು ಮೆಣಸಿನಕಾಯಿಯಲ್ಲಿ ಸ್ಥಳೀಯ ತಾಂತ್ರಿಕತೆಗಿಂತ ಶೇ. 28.51 ರಷ್ಟು ಅಧಿಕ ಇಳುವರಿ ಪಡೆಯಲಾಗಿದೆ
24	**ಎಲೆ ಬಳ್ಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10): ಸಮಗ್ರ ಬೆಳೆ ನಿರ್ವಹಣೆ** ತಾಂತ್ರಿಕತೆಯು ವಿಳ್ಯೆದೆಲೆಯಲ್ಲಿ ಸ್ಥಳೀಯ ತಾಂತ್ರಿಕತೆಗಿಂತ ಶೇ. 17.83 ಅಧಿಕ ಇಳುವರಿ ಪಡೆಯಲಾಗಿದೆ.
25	**ಮಾವಿನ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಮಾವಿನಲ್ಲಿ ಸಮಗ್ರ ಬೆಳೆ ಪದ್ಧತಿ ಅನುಸರಿಸುವುದರಿಂದ ಉತ್ತಮ ಗುಣಮಟ್ಟದ ಹಣ್ಣುಗಳು ಹಾಗೂ ಶೇ. 28 ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದಾಗಿದೆ.
26	**ಸೋಯಾ ಅವರೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸೋಯಾಅವರೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪದ್ಧತಿ ಆಳವಡಿಸುವುದರಿಂದ ರೈತರ ಪದ್ಧತಿಗಿಂತ 9.09% ಹೆಚ್ಚಿನ ಇಳುವರಿ ಪಡೆಯಲಾಗಿದೆ.

27	**ಬಾಳೆ ಬೆಳೆಯಲ್ಲಿ ಬನಾನ ಸ್ಪೆಷಲ್ ಬಳಕೆ ಬಗ್ಗೆ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಲಘು ಪೋಷಕಾಂಶಗಳ ಸೂಕ್ತ ನಿರ್ವಹಣಾ ಕ್ರಮದಿಂದಾಗಿ ಪ್ರಾತ್ಯಕ್ಷಿಕೆಯಲ್ಲಿ ಲಾಭ:ಖರ್ಚು ಅನುಪಾತ, 6.6 ರಷ್ಟಿದ್ದು, ಸ್ಥಳೀಯ ಪದ್ಧತಿಯಲ್ಲಿ 5.7 ರಷ್ಟು ಕಂಡು ಬಂದಿದೆ.
28	**ಟೊಮ್ಯಾಟೋ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಲಘು ಪೋಷಕಾಂಶಗಳ ಸೂಕ್ತ ನಿರ್ವಹಣಾ ಕ್ರಮದಿಂದಾಗಿ ಪ್ರಾತ್ಯಕ್ಷಿಕೆಯಲ್ಲಿ ಲಾಭ:ಖರ್ಚು ಅನುಪಾತ, 5.3 ರಷ್ಟಿದ್ದು, ಸ್ಥಳೀಯ ಪದ್ಧತಿಯಲ್ಲಿ 4.4 ರಷ್ಟು ಕಂಡು ಬಂದಿದೆ.
29	**ಮೇವಿನ ಬೆಳೆಗಳ ಪ್ರಾತ್ಯಕ್ಷಿಕೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಏಕದಳ ವಾರ್ಷಿಕ ಮತ್ತು ಬಹುವಾರ್ಷಿಕ ಏಕದಳ ಹಾಗೂ ದ್ವಿದಳ ಮೇವುಗಳನ್ನು ಬೆಳೆಯುವುದರಿಂದ ಇಡೀ ವರ್ಷ ಹಸಿರು ಮೇವಿನ ಲಭ್ಯತೆ ಇರುವುದರಿಂದ ಹಸುಗಳಲ್ಲಿ ಹಾಲಿನ ಇಳುವರಿ ಹೆಚ್ಚುತ್ತದೆ. ಪ್ರಾತ್ಯಕ್ಷಿಕೆಯಲ್ಲಿ ಲಾಭ ನಷ್ಟದ ಅನುಪಾತ 2.0 ಮತ್ತು ರೈತರ ಪದ್ಧತಿಯಲ್ಲಿ 1.6 ಇರುತ್ತದೆ.
30	**ಹಸುಗಳಲ್ಲಿ ನೆಕ್ಕು ಬಿಲ್ಲೆಗಳನ್ನು ಶಕ್ತಿ ಮತ್ತು ಸಾರಜನಕದ ಮೂಲವಾಗಿ ಬಳಕೆ (ರೈತರು 10):** ಹೈನು ಜಾನುವಾರುಗಳಿಗೆ ನೆಕ್ಕು ಬಿಲ್ಲೆ ಇಡುವುದರಿಂದ ಪ್ರಾತ್ಯಕ್ಷಿಕೆಯಲ್ಲಿ ಹಾಲಿನ ಸರಾಸರಿ 8.5 ಲೀಟರ್ ಪ್ರತಿ ದಿನ ಇದ್ದು ರೈತರ ಪದ್ಧತಿಯಲ್ಲಿ 6.5 ಇರುತ್ತದೆ. ನೆಕ್ಕು ಬಿಲ್ಲೆ ಪ್ರಾತ್ಯಕ್ಷಿಕೆಯಲ್ಲಿ ಲಾಭ ನಷ್ಟದ ಅನುಪಾತ 2.18 ಮತ್ತು ರೈತರ ಪದ್ಧತಿಯಲ್ಲಿ 1.74 ಇರುತ್ತದೆ.
31	**ಶುದ್ಧ ಹಾಲು ಉತ್ಪಾದನೆ ಬಗ್ಗೆ ಪ್ರಾತ್ಯಕ್ಷಿಕೆ (ರೈತರು 5):** ಶುದ್ಧ ಹಾಲಿನ ಉತ್ಪಾದನೆಯಿಂದ ಪ್ರತಿಶತ 22% ರಷ್ಟು ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳವಾಗುತ್ತದೆ. ಮತ್ತು ಕೆಚ್ಚಲ ಬಾವು ರೋಗ ನಿಯಂತ್ರಣವಾಗುತ್ತದೆ.
32	**ಡೈರಿ ಹಸುಗಳಲ್ಲಿ ಆನ್ ಅಯಾನಿಕ ಕಣಜಗಳ ಬಳಕೆ (ರೈತರು 5):** ಅಯಾನಿಕ ಕಣಜಗಳನ್ನು ಗರ್ಭದ ಹಸುವಿನಲ್ಲಿ ಕೊನೆಯ ಮೂರು ವಾರಗಳಲ್ಲಿ ಬಳಕೆ ಮಾಡುವುದರಿಂದ ಕರು ಹಾಕಿದ ನಂತರ ಹಸುಗಳು ಹಾಲು ಜ್ವರಕ್ಕೆ ತುತ್ತಾಗುವುದಿಲ್ಲ ಮತ್ತು ಹಾಲಿನ ಇಳುವರಿ ಹೆಚ್ಚುತ್ತದೆ.
33	**ಉತ್ತಮ ಧಾನ್ಯ ಸಂಗ್ರಹಣಾ ಚಿಲದ (ಸೂಪರ್ ಗ್ರೇನ್ ಬ್ಯಾಗ್ಸ್) ಪ್ರಾತ್ಯಕ್ಷಿಕೆ (ರೈತರು 10):** ಧಾನ್ಯಗಳನ್ನು ಸೂಪರ್ ಗ್ರೇನ್ ಬ್ಯಾಗ್ ಬಳಸಿ ಸಂಗ್ರಹಿಸಿಡುವಿದರಿಂದ ಕೀಟಬಾದೆಯಿಂದ ಯಾವುದೇ ಹಾನಿ ಕಂಡುಬಂದಿಲ್ಲ ಆದರೆ ಸಂಪ್ರದಾಯಿಕ ಪದ್ಧತಿಯಲ್ಲಿ 12.35% ರಷ್ಟು ಕೀಟದಿಂದ ಹಾನಿ ಕಂಡುಬಂದಿದೆ.
34	**ಅಂತರ ಬೆಳೆಯಾಗಿ ತೊಗರಿಯಲ್ಲಿ ಹೆಸರು (1:2) (ಕ್ಷೇತ್ರ 4 ಎಕರೆ ಮತ್ತು ರೈತರು 10):** ಇಡೀ ತೊಗರಿ ಬೆಳೆಗೆ ಹೋಲಿಸಿದರೆ (11 ಕ್ವಿಂ./ಹೆ) ಅಂತರ ಬೇಳೆಯಾಗಿ ಹೆಸರು(3.75 ಕ್ವಿಂ./ಹೆ) ಮತ್ತು ತೊಗರಿ(10.62 ಕ್ವಿಂ./ಹೆ) ಬೆಳೆಯುವದರಿಂದ ಶೇ.18 ಹೆಚ್ಚಿನ ಇಳುವರಿ ಕಂಡುಬಂದಿದೆ.
35	**ಗೋಧಿಯ ಹೊಸತಳಿ ಯು.ಎ.ಎಸ್–415 ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಡಿ.ಡಬ್ಲೂ.ಆರ್–152 (22.15 ಕ್ವಿಂ./ಹೆ) ಹೋಲಿಸಿದರೆ ಹೊಸ ತಳಿ ಯು.ಎ.ಎಸ್–415 (24.0 ಕ್ವಿಂ./ಹೆ.) ತಳಿಯು ಪ್ರತಿಶತ 9.0 ರಷ್ಟು ಹೆಚ್ಚಿನ ಇಳುವರಿ ಕೊಟ್ಟಿರುವದು.
36	**ಹಿಂಗಾರಿಯಲ್ಲಿ ಈರುಳ್ಳಿ ಭೀಮಾಸುಪರ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 6 ಎಕರೆ ಮತ್ತು ರೈತರು 10):** ಜಿಂದಾಲ ತಳಿಗೆ (45.60 ಟನ್/ಹೆ) ಹೋಲಿಸಿದರೆ ಹೊಸ ತಳಿ ಭೀಮಾಸುಪರ್ (50.20 ಟನ್/ಹೆ.) ತಳಿಯು ಪ್ರತಿಶತ 6.60 ರಿಂದ 10.09 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
37	**ಟೋಮ್ಯಾಟೊ ಅರ್ಕಾ ರಕ್ಷಕ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಮೈಕೊ–10 ತಳಿಗೆ (11.64 ಟನ್/ಹೆ) ಹೋಲಿಸಿದರೆ ಹೊಸ ತಳಿ ಅರ್ಕಾರಕ್ಷಕ (12.18 ಟನ್/ಹೆ.) ತಳಿಯು ಪ್ರತಿಶತ 4.60 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
39	**ಬಾಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಬನಾನಾ ಸ್ಪೆಷಲ್ (2 ಕಿ.ಗ್ರಾಂ/ಎಕರೆ) ಉಪಯೋಗಿಸುವದರಿಂದ ಸುಮಾರು 8% ಇಳುವರಿ ಹೆಚ್ಚುತ್ತದೆ ಮತ್ತು ಹಣ್ಣಿನ ಗಾತ್ರ ಹಾಗೂ ಹಣ್ಣುಗಳ ಸಂಖ್ಯೆ ಕೂಡಾ ಹೆಚ್ಚಾಗುತ್ತದೆ.
40	**ದ್ರಾಕ್ಷಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಗ್ರೇಪ್ ಸ್ಪೇಷಲ್ ಉಪಯೋಗಿಸುವದರಿಂದ ಹಣ್ಣುಗಳ ಸಂಖ್ಯೆ ಹೆಚ್ಚಾಗುತ್ತದೆ ಮತ್ತು ರೋಗ ನಿರೋಧಕತೆ ಹೆಚ್ಚಾಗುತ್ತದೆ ರೈತರ ಪದ್ಧತಿಗೆ ಹೋಲಿಸಿದರೆ ಪ್ರಾತ್ಯಕ್ಷಿಕೆಯ ತಾಕಿನಲ್ಲಿ ಶೇ.9.2% ಹೆಚ್ಚಿಗೆ ಇಳುವರಿ ಬಂದಿರುತ್ತದೆ.
41	**ಮೆಕ್ಕೆಜೋಳದಲ್ಲಿ ಗೊಣ್ಣೆ ಹುಳುವಿನ ನಿರ್ವಹಣೆ (ಕ್ಷೇತ್ರ 4.8 ಎಕರೆ ಮತ್ತು ರೈತರು 10):** ಮೇಥಾರೈಜಿಯಂ ಉಪಯೋಗಿಸುವದರಿಂದ ಶೇ. 8% ಗೊಣ್ಣೆ ಹುಳುವಿನ ಭಾದೆಯನ್ನು ಕಡಿಮೆ ಮಾಡಬಹುದು ಮತ್ತು ಇಳುವರಿಯಲ್ಲಿ ರೈತರ ಪದ್ಧತಿಗಿಂತ 12% ಹೆಚ್ಚಾಗಿರುವುದು ಕಂಡು ಬಂದಿದೆ.
42	**ದಾಳಿಂಬೆಯಲ್ಲಿ ದುಂಡಾಣು ಅಂಗಮಾರಿ ರೋಗದ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ದಾಳಿಂಬೆ ರೈತರ ಪದ್ಧತಿ ತಾಕಿಗೆ ಹೋಲಿಸಿದರೆ ಪ್ರಾತ್ಯಕ್ಷಿಕೆಯಲ್ಲಿ ಪ್ರತಿಶತ 18 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಯಿತು.
43	**ಲಿಂಬೆಯಲ್ಲಿ ಸಮಗ್ರ ಕೀಟ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ರೈತರ ಪದ್ಧತಿಯಲ್ಲಿ ಬೆಳೆದ ಲಿಂಬೆ ಕಾಗ್ಜಿ ತಳಿಗೆ ಹೋಲಿಸಿದರೆ ಪ್ರಾತ್ಯಕ್ಷಿಕೆ ಪದ್ಧತಿಯಲ್ಲಿ ಬೆಳೆದ ಲಿಂಬೆ ಕಾಗ್ಜಿ ತಳಿಯಿಂದ ಪ್ರತಿಶತ 9.9 ರಷ್ಟು ಹೆಚ್ಚಿನ ಇಳುವರಿ ಪಡೆಯಲಾಯಿತು.
44	**ಕಬ್ಬಿನಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 5 ಎಕರೆ ಮತ್ತು ರೈತರು 10):** ಮೈಕೋರೈಜಾ ಮತ್ತು ಮೆಥಾರೈಜಿಯಂ ಶಿಲೀಂಧ್ರನಾಶಕಗಳಿಂದ ಕಬ್ಬಿನಲ್ಲಿ ಬಿಳಿಕಸ ಮತ್ತು ಗೊಣ್ಣೆಹುಳುವಿನ ಬಾದೆ ಕಡಿಮೆ ಆಗಿದ್ದು ರೈತರ ತಾಕುಗಳಿಗೆ ಹೊಲಿಸಿದರೆ ಪ್ರಾತ್ಯಕ್ಷಿಕೆಯಲ್ಲಿ ಪ್ರತಿ ಶತ 7.16% ರಷ್ಟು ಹೆಚ್ಚಿನ ಇಳುವರಿ ಕಂಡು ಬಂದಿದೆ.
45	**ಸಜ್ಜೆಯಲ್ಲಿ ಅಗಲ ಸಾಲು ಪದ್ಧತಿ (120x15) (ಕ್ಷೇತ್ರ 6 ಎಕರೆ ಮತ್ತು ರೈತರು 5):** ರೈತರ ಪದ್ಧತಿಯಲ್ಲಿ 45x10 ಸೆಂ.ಮಿ ಅಂತರದಲ್ಲಿ ಬೆಳೆದ ಸಜ್ಜೆ ಅಗಲ ಸಾಲು ಪದ್ಧತಿಯಲ್ಲಿ (120 x 50 ಸೆಂ.ಮೀ.) ಬೆಳೆದ ಸಜ್ಜೆ ಗಿಂತ ಪ್ರತಿಶತ 23.05 ರಷ್ಟು ಹೆಚ್ಚಿನ ಇಳುವರಿ ಕಂಡು ಬಂದಿದೆ.
46	**ಸೂರ್ಯಕಾಂತಿಯಲ್ಲಿ ಅಗಲ ಸಾಲು ಪದ್ಧತಿ (120x15) (ಕ್ಷೇತ್ರ 4 ಎಕರೆ ಮತ್ತು ರೈತರು 10):** ರೈತರ ಪದ್ಧತಿಯಲ್ಲಿ 45 x 10 ಸೆಂ.ಮಿ ಅಂತರದಲ್ಲಿ ಬೆಳೆದ ಸೂರ್ಯಕಾಂತಿಗಿಂತ ಅಗಲ ಸಾಲು ಪದ್ಧತಿಯಲ್ಲಿ (120 x 05 ಸೆಂ.ಮೀ.) ಬೆಳೆದ ಸೂರ್ಯಕಾಂತಿ (ಪ್ರತಿಶತ 11.80 ರಷ್ಟು ಇಳುವರಿ ಕಂಡು ಬಂದಿದೆ.
47	**ಹೆಚ್ಚಿನ ಇಳುವರಿ ಕೊಡುವ ತಳಿ ಸಿ.ಎಸ್.ಫ್ಹಿ–29ಆರ್ ಮುಂಗಾರಿನಲ್ಲಿ ಬದುಗಳ ನಿರ್ಮಾಣ ಹಾಗೂ ಹಿಂಗಾರಿನಲ್ಲಿ ಜೋಳ ಬಿತ್ತನೆಮಾಡುವುದು (ಕ್ಷೇತ್ರ 6 ಎಕರೆ ಮತ್ತು ರೈತರು 15):** ಮುಂಗಾರಿಯಲ್ಲಿ ಚೌಕು ಮಡಿಮಾಡಿ ಹಿಂಗಾರಿನಲ್ಲಿ ಜೋಳದ ತಳಿ ಸಿ.ಎಸ್.ಫ್ಹಿ–29 ಆರ್. ಬೆಳೆಯುವದರಿಂದ ರೈತರ ಪದ್ಧತಿಯಲ್ಲಿ ಬೆಳೆಯುವ ಜೋಳ ಹೋಲಿಸಿದರೆ ಪ್ರಾತ್ಯಕ್ಷಿಕೆಯಲ್ಲಿ ಜೋಳದ ಇಳುವರಿ ಪ್ರತಿ ಶತ 11.80ರಷ್ಟು ಹೆಚ್ಚಾಗಿರುವದು ಕಂಡುಬಂದಿದೆ.
48	**ವಿವಿಧ ಮೇವಿನ ಬೆಳೆಗಳ ಪ್ರಾತ್ಯಕ್ಷಿಕೆ (ಕ್ಷೇತ್ರ 0.4 ಎಕರೆ ಮತ್ತು ರೈತರು 10):** ಸುಮಾರು 25 ಜನ ರೈತರು ನಿರಂತರವಾಗಿ ಬಹುವಾರ್ಷಿಕ ಮೇವಿನ ಬೆಳೆಗಳನ್ನು ಬೆಳೆಯುತ್ತಿದ್ದು ಬೀಜೋತ್ಪಾದನೆಯನ್ನು ಕೂಡಾ ಕೈಗೊಂಡು ಅಕ್ಕ ಪಕ್ಕದ ರೈತರಿಗೆ ಮಾರಾಟಮಾಡುತ್ತಿದ್ದಾರೆ.

49	**ಹೈನು ರಾಸುಗಳಿಗೆ ಜಂತು ನಾಶಕ ಹಾಗು ಖನಿಜ ಲವಣಾಂಶಗಳ ಪೂರೈಕೆ (ರೈತರು 5):** ಪ್ರತಿಶತ 80 ರಷ್ಟು ಜಾನುವಾರುಗಳು ನಿರ್ದಿಷ್ಟ ಸಮಯದಲ್ಲಿ ಬೆದೆಗೆ ಬಂದು ಗರ್ಭಧರಿಸಿರುತ್ತವೆ.
50	**ಆಡು ಮತ್ತು ಕುರಿಗಳಿಗೆ ಜಂತು ನಾಶಕ ಹಾಗೂ ಶಕ್ತಿವರ್ಧಕಗಳ ಪೂರೈಕೆ (ರೈತರು 5):** ಈ ತಾಂತ್ರಿಕತೆಯಿಂದ ತೂಕದಲ್ಲಿ ಶೇಕಡಾ 21 ರಷ್ಟು ಹೆಚ್ಚಳ ಕಂಡು ಬಂದಿದೆ.
51	**ಹೊಂಡಗಳಲ್ಲಿ ಮೀನು ಸಾಕಾಣಿಕೆ (ರೈತರು 10):** ಸುಮಾರು 30 ಜನ ರೈತರು ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆ ಮಾಡಲು ಪ್ರಾರಂಭಿಸಿದ್ದಾರೆ.
52	**ಸೀತನಿ ಜೋಳ – ಘುಲೆಮಧುರ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 0.4 ಎಕರೆ ಮತ್ತು ರೈತರು 10):** ಮೌಲ್ಯವರ್ಧನೆಯಿಂದ ಉದ್ಯಮವನ್ನು ಸ್ಥಾಪಿಸಲು ಸಹಾಯವಾಗುತ್ತಿದೆ.
53	**ವರ್ಷಪೂರ್ತಿ ಕೃಷಿ ಕುಟುಂಬಗಳಿಗೆ ಪೌಷ್ಟಿಕಾಂಶದ ಲಭ್ಯತೆ ಬಗ್ಗೆ ಪ್ರಾತ್ಯಕ್ಷಿಕೆ (ರೈತರು 10):** ಕೃಷಿ ಕುಟುಂಬಗಳಿಗೆ ಸಮತೋಲನ ಆಹಾರ ಸೇವಿಸುವಲ್ಲಿ ಸಹಾಯಕವಾಗಿದೆ.
54	**ಲಾಭದಾಯಕ ಭತ್ತದ ಕೃಷಿಗಾಗಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು (ಕ್ಷೇತ್ರ 4 ಎಕರೆ ಮತ್ತು ರೈತರು 10):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗೆ ಹೋಲಿಸಿದಾಗ 27.0% ಇಳುವರಿ ಕಂಡುಬಂದಿದೆ.
55	**ಕಳೆ ನಿರ್ವಹಣೆ ವಿಶೇಷ ಒತ್ತಿನೊಂದಿಗೆ ಮುಸುಕಿನ ಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗೆ ಹೋಲಿಸಿದಾಗ 33.26 % ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ. ಕಳೆ ನಿರ್ವಹಣೆಗೆ ಪ್ರಾತ್ಯಕ್ಷಿಕೆ ತಾಕಿನಲ್ಲಿ 88.57% ರಷ್ಟು ಆಳುಗಳ ಉಳಿತಾಯ ಕಂಡುಬಂದಿದೆ.
56	**ಪೌಷ್ಟಿಕ ಕೈತೋಟ (ಕ್ಷೇತ್ರ 0.01 ಎಕರೆ ಮತ್ತು ರೈತರು 10):** ಪ್ರಾತ್ಯಕ್ಷಿಕೆಯಲ್ಲಿ 2.57 ಆದಾಯ: ಖರ್ಚು ಅನುಪಾತ ದಾಖಲಾಗಿದೆ. ಪೌಷ್ಟಿಕಾಂಶಗಳ ಮಹತ್ವದ ಕುರಿತು ಜ್ಞಾನದಲ್ಲಿ ಬದಲಾವಣೆ 69% (ಪೂರ್ವ ಪರೀಕ್ಷೆ) ಹಾಗೂ 85% (ಪೋಸ್ಟ ಪರೀಕ್ಷೆ). ಕುಟುಂಬಕ್ಕೆ ವಿವಿಧ ಹಾಗೂ ತಾಜಾ ತರಕಾರಿಗಳ ಲಭ್ಯತೆ.
57	**ಮಲ್ಲಿಗೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 1 ಎಕರೆ ಮತ್ತು ರೈತರು 5):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಯಿಂದ 16.36% ಮಲ್ಲಿಗೆಯ ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
58	**ಕಲ್ಲಂಗಡಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ 20.08 % ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
59	**ಕಾಳುಮೆಣಸಿನಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 1 ಎಕರೆ ಮತ್ತು ರೈತರು 10):** ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ 23.52 % ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
60	**ಗೋಡಂಬಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸಮಗ್ರ ಪೀಡೆ ನಿರ್ವಹಣೆ ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ 43.42% ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
61	**ರಾಸುಗಳಿಗೆ ಮೇವಾಗಿ ಉಪಯೋಗಿಸಲು ಒಣ ಅಡಿಕೆ ಹಾಳೆ/ಒಣ ಮೇವಿನ ಪೌಷ್ಠೀಕರಣ (ರೈತರು 5):** 3 ತಿಂಗಳುಗಳ ಹಾಲಿನ ಇಳುವರಿ ಪ್ರಾತ್ಯಕ್ಷಿಕೆಯು ರೈತರ ಪದ್ಧತಿಗಿಂತ 13.3% ಹಾಲಿನ ಇಳುವರಿಯಲ್ಲಿ ವೃದ್ಧಿಕಂಡುಬಂದಿದೆ.
62	**ಸಿ.ಒ.ಎಫ್.ಐಸ್–31 ಹಾಗೂ ಸೈಲೋಸ್ಯಾಂಥಸ್ ಹೆಮಟ ಹುಲ್ಲಿನ ಬೆಳಗಳ ಪ್ರಚಾರ ಪಡಿಸುವಿಕೆ (ಕ್ಷೇತ್ರ 0.9 ಎಕರೆ ಮತ್ತು ರೈತರು 9):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಗಿಂತ 65% ಮೇವಿನ ಇಳುವರಿಯಲ್ಲಿ ವೃದ್ಧಿ ಕಂಡುಬಂದಿದು 12% ಹಾಲಿನ ಉತ್ಪಾದನೆ ಹೆಚ್ಚಾಗಿದ್ದು ಕಂಡುಬಂದಿದೆ.
63	**ಬಿಟಿ ಹತ್ತಿಯಲ್ಲಿ ಸಮಗ್ರ ಕೀಟ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಪ್ರಾತ್ಯಕ್ಷಿಕೆಯಲ್ಲಿ ರೈತರ ಪದ್ಧತಿಯಿಂದ 15.49% ಹತ್ತಿ ಇಳುವರಿಯಲ್ಲಿ ವೃದ್ಧಿ ಕಂಡುಬಂದಿದೆ.
64	**ಸುಧಾರಿತ ಪಿ. ಜಿ. (ಪ್ರೋಸ್ಟಾ ಗ್ಲ್ಯಾಂಡಿನ್) ಪ್ರೋಟೋಕಾಲ್ ಬಳಸಿ ಪುನಾರಾವರ್ತಿತ ಬೆದೆಯುಳ್ಳ ಹಸುಗಳ ನಿರ್ವಹಣೆ (ರೈತರು 14):** ಚಿಕಿತ್ಸೆ ಪಡೆದ ರಾಸುಗಳಲ್ಲಿ ಗರ್ಭಧಾರಣೆಯ ಪ್ರಮಾಣ 85.70% ಕಂಡುಬಂದಿದೆ.
65	**ಬೆದೆಗೆ ಬಾರದೆ ಇರುವ ಹಸು/ಎಮ್ಮೆ ಗಳ ನಿರ್ವಹಣೆಗೆ CIDR Synch ಪ್ರೋಟೋಕಾಲ್ ಬಳಕೆ (ರೈತರು 10):** ಚಿಕಿತ್ಸೆಗೊಳಪಟ್ಟ ರಾಸುಗಳಲ್ಲಿ 60% ಗರ್ಭದಾರಣೆ ಪ್ರಮಾಣ ಕಂಡುಬಂದಿದ್ದು ರೈತರ ಪದ್ಧತಿಯಲ್ಲಿ 10% ಗರ್ಭದಾರಣೆ ಪ್ರಮಾಣ ಕಂಡುಬಂದಿದೆ.
67	**ಸಿರಿಧಾನ್ಯ ತಳಿಗಳ ಪರಿಚಯ (ನವಣೆ, ಸಾವೆ ಮತ್ತು ಊದಲು) (ಕ್ಷೇತ್ರ 4 ಎಕರೆ ಮತ್ತು ರೈತರು 10):** ನವಣೆ ತಳಿ ಡಿಹೆಚ್ಎಫ್ಟಿ–109–3 ಇತರೆ ಸಿರಿಧಾನ್ಯಗಳಾದ ಸಾವೆ ಡಿಹೆಚ್ಎಲ್ ಎಂ.–14–1, ಬರಗು ಡಿಹೆಚ್ಬಿಎಂ–93–2 ತಳಿಗಳು ಮತ್ತು ಸ್ಥಳೀಯ ತಳಿಗಳಿಗೆ ಹೋಲಿಸಿದಲ್ಲಿ ಶೇ.23.72 ಹೆಚ್ಚುವರಿ ಇಳುವರಿ ಕಂಡುಬಂದಿದೆ.
68	**ಸ್ಥಾನಿಕ ಎರೆಹುಳು ಕೃಷಿಯನ್ನು ಬಳಸಿ ಕಬ್ಬಿನರವದಿಯನ್ನು ಕಳೆಯುಸುವಿಕೆ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸ್ಥಾನಿಕ ಎರೆಹುಳು ಕೃಷಿಯಿಂದ ಕಬ್ಬಿನ ಇಳುವರಿಯು ರೈತರ ಪದ್ಧತಿಗಿಂತ ಶೇ.25.76 ಹೆಚ್ಚುವರಿ ಇಳುವರಿ ಕಂಡುಬಂದಿದೆ.
69	**ಕಬ್ಬಿನಲ್ಲಿ ಬೇರು ಹೇನಿನ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಬೇರು ಹೇನಿನ ಬಾಧೆಯಿರುವ ಕ್ಷೇತ್ರದಲ್ಲಿ ಪ್ರಾತ್ಯಕ್ಷಿಕೆಯ ತಾಕಿನಲ್ಲಿ ರೈತರ ಪದ್ಧತಿಗಿಂತ ಶೇಕಡ 13.24 ಪ್ರತಿಶತದಷ್ಟಿತ್ತು. ಸ್ಥಳೀಯ ಪದ್ಧತಿಗೆ ಹೋಲಿಸಿದಲ್ಲಿ ಶೇ. 15.91 ಹೆಚ್ಚುವರಿ ಇಳುವರಿ ಕಂಡುಬಂದಿದೆ.
70	**ಕಬ್ಬಿನ ಆರಂಭಿಕ ಬೆಳವಣಿಗೆ ಹಂತದಲ್ಲಿ ಲಘು ಪೋಷಕಾಂಶಗಳ ಅಳವಡಿಕೆಯ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಕಬ್ಬಿನ ಪ್ರಾರಂಭಿಕ ಹಂತದಲ್ಲಿ ಸೂಕ್ಷ್ಮ ಪೋಷಕಾಂಶಗಳ ಬಳಕೆಯಿಂದ ಪ್ರತಿ ಹೆಕ್ಟೇರಿಗೆ 135.4 ಟನ್ ಇಳುವರಿ ಬಂದಿದ್ದು ರೈತರ ಪದ್ದತಿಯಲ್ಲಿ 128.0 ಟನ್ ಪ್ರತಿ ಹೆಕ್ಟೇರಿಗೆ ಇಳುವರಿ ಬಂದಿದೆ.
71	**ಮುಂಗಾರು ಹಂಗಾಮಿಗೆ ಸೂಕ್ತವಾದ ಈರುಳ್ಳಿ ಭೀಮಾಸೂಪರ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಮುಂಗಾರಿನಲ್ಲಿ ಭೀಮಾ ಸೂಪರ್ ತಳಿಯು ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ.30.23 ಹೆಚ್ಚುವರಿ ಇಳುವರಿ ಕಂಡುಬಂದಿದೆ.

72	**ಹಿಂಗಾರು ಹಂಗಾಮಿಗೆ ಸೂಕ್ತವಾದ ಈರುಳ್ಳಿ ಭೀಮಾ ಶಕ್ತಿ ತಳಿಯ ಪ್ರಾತ್ಯಕ್ಷಿಕೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಹಿಂಗಾರಿನಲ್ಲಿ ಭೀಮಾ ಶಕ್ತಿ ತಳಿಯು ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ.12.57 ಹೆಚ್ಚುವರಿ ಇಳುವರಿ ಕಂಡುಬಂದಿದೆ.
73	**ದಾಳಿಂಬೆಯಲ್ಲಿ ಆಕರ್ಷಕ ಬೆಳಕಿನ ಬಲೆ ಸಹಾಯದಿಂದ ಹಣ್ಣಿನ ರಸ ಹೀರುವ ಕೀಟದ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸೌರ ದೀಪವನ್ನು ಬಳಸಿ ಪತಂಗಗಳನ್ನು ನಿರ್ವಹಣೆ ಮಾಡಿದ ದಾಳಿಂಬೆ ತಾಕುಗಳಲ್ಲಿ ರೈತರ ಪ್ರಾತ್ಯಕ್ಷಿಕೆಯು ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ. 24.14 ಹೆಚ್ಚುವರಿ ಇಳುವರಿ ಕಂಡುಬಂದಿದೆ.
74	**ಬಾಳೆಯಲ್ಲಿ ಬನಾನಾ ಸ್ಪೇಷಲ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಬನಾನಾ ಸ್ಪೇಷಲ ಪ್ರಾತ್ಯಕ್ಷಿಕೆ ಸ್ಥಳೀಯ ಪದ್ಧತಿಗೆ ಹೋಲಿಸಿದಲ್ಲಿ ಶೇ.28.25 ಹೆಚ್ಚುವರಿ ಇಳುವರಿ ಕಂಡುಬಂದಿದೆ.
75	**ಅಧಿಕ ಇಳುವರಿ ನೀಡುವ ಹೊಸ ಹೀರೆಕಾಯಿ ತಳಿಯ ಪರಿಚಯ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ.56.78 ಹೆಚ್ಚುವರಿ ಇಳುವರಿ ಕಂಡುಬಂದಿದೆ.
76	**ಅಧಿಕ ಇಳುವರಿ ನೀಡುವ ಹೊಸ ಟೊಮೆಟೊ ಸಂಕರಣ ತಳಿ ಪರಿಚಯ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ.62.49 ಹೆಚ್ಚುವರಿ ಇಳುವರಿ ಕಂಡುಬಂದಿದೆ.
77	**ಬಹು ಕಟಾವಿನ ಪಾಲಕ ತಳಿಯ: ಆರ್ಕಾ ಅನುಪಮಾದ ಪರಿಚಯ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಆರ್ಕಾ ಅನುಪಮಾ ದಿಂದ ಶೇ.15.70 ಹೆಚ್ಚುವರಿ ಇಳುವರಿ ಕಂಡುಬಂದಿದೆ.
78	**ಹನಿ ನೀರಾವರಿ ಅಡಿಯಲ್ಲಿ ಮೆಣಸಿನಕಾಯಿ ಬೆಳೆಯಲ್ಲಿ ಸಮಗ್ರ ಬೇಸಾಯ ಪದ್ಧತಿ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಹನಿ ನೀರಾವರಿ ಅಡಿಯಲ್ಲಿ ಮೆಣಸಿನಕಾಯಿ ಬೆಳೆಯಲ್ಲಿ ಸಮಗ್ರ ಬೇಸಾಯ ಪದ್ಧತಿ **ಅಳವಡಿಸಿದಾಗ** ಸ್ಥಳೀಯ ಪದ್ಧತಿಗೆ ಹೋಲಿಸಿದಲ್ಲಿ ಶೇ.53.17 ಹೆಚ್ಚುವರಿ ಇಳುವರಿ ಕಂಡುಬಂದಿದೆ.
79	**ಹಿಂಗಾರು ಏಕದಳ ಬೆಳೆಗಳಲ್ಲಿ ಸೈನಿಕ ಹುಳುವಿನ ನಿಯಂತ್ರಣ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಸೈನಿಕ ಹುಳುವಿನ ನಿಯಂತ್ರಣ ಸ್ಥಳೀಯ ಪದ್ಧತಿಗೆ ಹೋಲಿಸಿದಲ್ಲಿ ಶೇ.16.45 ಹೆಚ್ಚುವರಿ ಇಳುವರಿ ಕಂಡುಬಂದಿದೆ.
80	**ಬೇಸಿಗೆಗೆ ಸೂಕ್ತವಾವ ಹೊಸ ಅಲಸಂದಿ ತಳಿ (ಡಿ.ಪಿ.–15)ನ ಪ್ರಾತ್ಯಕ್ಷಿಕೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಅಲಸಂದಿ ತಳಿ (ಡಿ.ಪಿ.–15) ಸ್ಥಳೀಯ ತಳಿಗೆ ಹೋಲಿಸಿದಲ್ಲಿ ಶೇ.42.62 ಹೆಚ್ಚುವರಿ ಇಳುವರಿ ಕಂಡುಬಂದಿದೆ.
81	**ಗೋಧಿ ಬೆಳೆಯ (ತಳಿ ಯುಎಎಸ್–334) ಸಮಗ್ರ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಯುಎಎಸ್–334 ಅಧಿಕ ಇಳುವರಿಯಾಗಿದ್ದು ರೈತರ ತಳಿಗೆ ಹೊಲಿಸಿದರೆ ಯುಎಎಸ–334 ತಳಿಯಿಂದ ನಿವ್ವಳ ಮೊತ್ತವು ರೂ. 80,986 ಬಂದಿದೆ.
82	**ಜವೆಗೋಧಿಯಲ್ಲಿ ಡಿಡಿಕೆ–1029 ಜೈವಿಕ ಗೊಬ್ಬರದಿಂದ ಬೀಜೋಪಚಾರ ಮತ್ತು ತುಕ್ಕುರೋಗ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ರೈತರ ಪದ್ಧತಿಗೆ ಹೊಲಿಸಿದರೆ ಡಿಡಿಕೆ–1029 ಶೇ. 18.92% ಹೆಚ್ಚುವರಿ ಇಳುವರಿ ಕಂಡುಬಂದಿದೆ.
83	**ಮೆಕ್ಕೆಜೋಳದಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ (ಕ್ಷೇತ್ರ 2.8 ಎಕರೆ ಮತ್ತು ರೈತರು 7):** ಮೆಕ್ಕೆಜೋಳದಲ್ಲಿ ಲಘು ಪೋಷಕಾಂಶಗಳ ಬಳಕೆಯಿಂದ 18 ರಿಂದ 20 % ರಷ್ಟು ಇಳುವರಿಯಲ್ಲಿ ಹೆಚ್ಚಳವಾಗಿದೆ.
84	**ತೇವಾಂಶ ಸಂರಕ್ಷಣೆಯೊಂದಿಗೆ ಜೋಳದ ತಳಿ ಪಿ.ಎಸ್.ವಿ 29ಆರ್ /ಬಿಜೆವಿ–44 (ಕ್ಷೇತ್ರ 8 ಎಕರೆ ಮತ್ತು ರೈತರು 20):** ಜವಾರಿ ತಳಿಗೆ ಹೋಲಿಸಿದರೆ, ಬಿ.ಜೆ.ವಿ.–44 ತಳಿಯು ಶೇ. 20.62 ರಷ್ಟು ಅಧಿಕ ಇಳುವರಿ ನೀಡಿದೆ.
85	**ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 6 ಎಕರೆ ಮತ್ತು ರೈತರು 15):** ಸಮಗ್ರ ಬೆಳೆ ನಿರ್ವಹಣೆ ಟಿ.ಎಸ್.3–ಆರ್ ತಳಿಯು ಗುಳ್ಯಾಳ ತಳಿಗಿಂತ ಹೆಚ್ಚಿನ ಇಳುವರಿ ನೀಡಿದ್ದು ಲಾಭದಾಯಕವೆಂದು ಕಂಡುಬಂದಿದೆ.
86	**ಕಡಲೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಜಾಕಿ–9218 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮಾಡಿದಾಗ ಸ್ಥಳೀಯ ಪದ್ಧತಿಗಿಂತ ಪ್ರತಿಶತ 20.18% ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
87	**ಶೇಂಗಾ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ಕ್ಷೇತ್ರ 2 ಎಕರೆ ಮತ್ತು ರೈತರು 5):** ಜಿ2–52 ತಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮಾಡಿದಾಗ ಸ್ಥಳೀಯ ಪದ್ಧತಿಗಿಂತ ಪ್ರತಿಶತ 16.06% ರಷ್ಟು ಹೆಚ್ಚಿನ ಇಳುವರಿ ಪಡೆಯಲಾಗಿದೆ.
88	**ಹತ್ತಿಯಲ್ಲಿ ಸಸ್ಯ ಶಾರೀರಕ ನ್ಯೂನತೆಗಳ ನಿರ್ವಹಣೆ (ಕ್ಷೇತ್ರ 4 ಎಕರೆ ಮತ್ತು ರೈತರು 10):** ಹತ್ತಿಯಲ್ಲಿ ಮ್ಯಾಗ್ನಿಶಿಯಂ ಸಲ್ಫೇಟ್, ಸಾರಜನಕ/ಪ್ಲ್ಯಾನೊಪಿಕ್ಸ್ ಬಳಕೆಯಿಂದ ಸಸ್ಯ ಶಾರೀರಕ ನ್ಯೂನತೆಗಳಾದ ಎಲೆ ಕೆಂಪಾಗುವಿಕೆ ಹಾಗೂ ಹೂ ಉದುರುವಿಕೆ ಗುಣಗಳು ಕಡಿಮೆಯಾಗಿ, ಹತ್ತಿಯಲ್ಲಿ ಪ್ರತಿಶತ 20.73 ರಷ್ಟು ಹೆಚ್ಚಿನ ಇಳುವರಿ ದೊರೆತಿದೆ.

4.2.5 ಕ್ಷೇತ್ರ ಪ್ರಯೋಗಗಳು (ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ)

2018–19ನೇ ಸಾಲಿನಲ್ಲಿ (ಮುಂಗಾರು, ಹಿಂಗಾರು ಮತ್ತು ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ) 54 ಕ್ಷೇತ್ರ ಪ್ರಯೋಗಗಳನ್ನು ವಲಯ 3 ಮತ್ತು ವಲಯ 8 ರಲ್ಲಿ ಬರುವ ವಿವಿಧ ಸ್ಥಳಿಗಳಲ್ಲಿ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳಿಂದ ಕೈಗೊಳ್ಳಲಾಗಿದೆ. ಕ್ಷೇತ್ರ ಪ್ರಯೋಗಗಳ ಶೀರ್ಷಿಕೆಗಳನ್ನು ಮತ್ತು ಪರಿಣಾಮಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ಕ್ರ ಸಂ	ಕ್ಷೇತ್ರ ಪ್ರಯೋಗಗಳ ಶೀರ್ಷಿಕೆ ಹಾಗೂ ಫಲಿತಾಂಶಗಳು
1	**ಸೋಯಾ ಅವರೆ:** ಡಿಎಸ್‌ಬಿ–31 ಹಾಗೂ ಡಿಎಸ್‌ಬಿ–21 ತಳಿಗಳು ತುಕ್ಕು ನಿರೋಧಕತೆಯನ್ನು ಹೊಂದಿದ್ದು, ಡಿಎಸ್‌ಬಿ–21 ತಳಿಗಿಂತ ಡಿಎಸ್‌ಬಿ–31 ತಳಿಯು ಶೇ. 4.25 ರಿಂದ ಶೇ. 26 ರಷ್ಟು ಅಧಿಕ ಇಳುವರಿ ನೀಡಿದೆ.
2	**ಶೇಂಗಾ:** ಜಿಪಿಬಿಡಿ–4 ತಳಿಗೆ ಹೋಲಿಕೆ ಮಾಡಿದಾಗ ಡಿಎಚ್–256 ತಳಿಯಲ್ಲಿ ಶೇ. 8.67 ರಿಂದ ಶೇ. 17.3 ರಷ್ಟು ಅಧಿಕ ಇಳುವರಿಯನ್ನು ಪಡೆಯಲಾಗಿದೆ.

3	**ಉದ್ದು:** ಡಿಬಿಜಿವಿ–5 ತಳಿಗೆ ಹೋಲಿಕೆ ಮಾಡಿದಾಗ ಡಿಬಿಜಿವಿ–16 ತಳಿಯಲ್ಲಿ ಶೇ. 8.12 ರಿಂದ ಶೇ. 14.39 ರಷ್ಟು ಅಧಿಕ ಇಳುವರಿಯನ್ನು ಪಡೆಯಲಾಗಿದೆ.
4	**ನೇಪಿಯರ್ ಬಾಜ್ರಾ ಹೈಬ್ರಿಡ್:** ಡಿಎಚ್ಎನ್–15 ಹೈಬ್ರಿಡ್ ಮೇವು ಶೇ. 8.06 ಮತ್ತು 8.25 ರಷ್ಟು ಅಧಿಕ ಹಸಿರು ಮತ್ತು ಒಣ ಮೇವಿನ ಇಳುವರಿಯನ್ನು ನೀಡಿದೆ. ಡಿಎಚ್ಎನ್–6 ಹೈಬ್ರಿಡ್‌ಕ್ಕಿಂತ ಡಿಎಚ್ಎನ್–15 ಹೈಬ್ರಿಡ್ ಮೇವು ಕಡಿಮೆ ಸುಂಕು ಮತ್ತು ಉತ್ತಮ ರುಚಿಯನ್ನು ಹೊಂದಿದೆ.
5	**ಗೋವಿನಜೋಳ:** ಟ್ರೋಪಾಮೆಜೋನ್ + ಅಟ್ರಾಜಿನ್ (ತಯಾರಿಸಿದ ಮಿಶ್ರಣ) (ಬಿಎಎಸ್ 765 ಒಒಎಚ್ ಎಸ್‌ಸಿ) 775 ಗ್ರಾಂ ಎ.ಐ ಪ್ರತಿ ಹೆಕ್ಟೇರಿಗೆ ಬಳಸಿದಾಗ ಶೇ, 11.20 ರಿಂದ ಶೇ. 17.78 ಅಧಿಕ ಇಳುವರಿ ಪಡೆಯಲಾಗಿದೆ.
6	**ನವಣೆ + ಸೋಯಾಅವರೆ:** ಏಕ ಬೆಳೆ ಸೋಯಾಅವರೆಗೆ ಹೋಲಿಸಿದಾಗ ಸೋಯಾಅವರೆ + ನವಣೆ (4:2) ಅಂತರ ಬೆಳೆ ಪದ್ಧತಿಯಲ್ಲಿ 16.88% ರಷ್ಟು ಅಧಿಕ ಇಳುವರಿಯನ್ನು ಪಡೆಯಲಾಗಿದೆ.
7	**ಗೋವಿನ–ಜೋಳ:** ಪ್ರತಿ ಹೆಕ್ಟೇರಿಗೆ 15 ಕೆಜಿ ಸತುವಿನ ಸಲ್ಫೇಟ್ ಮತ್ತು ಕಬ್ಬಿಣದ ಸಲ್ಫೇಟ್‌ದಿಂದ ಪುಷ್ಟೀಕರಿಸಿದ ಕೊಟ್ಟಿಗೆ ಗೊಬ್ಬರ ಹಾಗು ಬಿತ್ತನೆ ಮಾಡಿದ 40 ದಿನಗಳ ನಂತರ ಶೇ. 0.5 ರ ದ್ರಾವಣದಿಂದ ಸಸ್ಯ ಸಿಂಪರಣೆ ಮಾಡುವುದರಿಂದ ಅಧಿಕ ಇಳುವರಿ ಪಡೆಯಲಾಗಿದೆ.
8	**ಹತ್ತಿ:** ಸ್ಪೈನೊಟುರಾಮ್ 12% ಎಸ್.ಸಿ. @ 1.2 ಮಿಲಿ/ಲೀ ಬಳಸಿದಾಗ ಗುಲಾಬಿ ಕಾಯಿಕೊರಕದ ಬಾಧೆ ಕಡಿಮೆಯಾಗಿ ಶೇ. 6.30 ರಿಂದ ಶೇ. 12.50 ಅಧಿಕ ಇಳುವರಿ ಪಡೆಯಲಾಗಿದೆ.
9	**ಗೋವಿನ–ಜೋಳ:** ಅಝೋಕ್ಸಿಸ್ಟ್ರೋಬಿನ್ ಶೆ. 18.2 + ಡೈಫೆನ್‌ಕೊನಾಜೋಲ್ ಶೇ. 11.4 @ 1 ಮಿಲಿ/ಲೀ. ಬಿತ್ತನೆ ಮಾಡಿದ 35 ಮತ್ತು 50 ದಿನಗಳ ನಂತರ ಸಿಂಪರಣೆ ಮಾಡಿದಾಗ ಟರ್ಸಿಕಮ್ ಎಲೆ ಚುಕ್ಕೆ ರೋಗ ಬಾಧೆ ಕಡಿಮೆಯಾಗಿ ಶೇ. 11.42 ರಿಂದ ಶೇ. 20.79 ಅಧಿಕ ಇಳುವರಿ ಪಡೆಯಲಾಗಿದೆ.
10	**ಶೇಂಗಾ:** ಶಿಫಾರಸ್ಸು ಮಾಡಿದ ರಸಗೊಬ್ಬರ ಹಾಗೂ ಪಿಜಿಪಿಎ1 (ಎ34+ಪಿಎಸ್ಎ5+ಪಿಎಸ್ಎ7) ಬಳಕೆ ಮಾಡಿದಾಗ ಶೇ.9.07 ಅಧಿಕ ಇಳುವರಿ ಪಡೆಯಲಾಗಿದೆ.
11	**ಶೇಂಗಾ:** ಶಿಫಾರಿತ ಪದ್ಧತಿ ರೈಜೋಸ್ಪಿಯರ್ ಕನ್ಸೋರ್ಶಿಯಮ್ 2 + ಪೀಲ್ಲೋಸ್ಪಿಯರ್ ಕನ್ಸೋರ್ಶಿಯಾದಿಂದ ಉಪಚರಿಸಿದ್ದರಿಂದ ಶಿಫಾರಿತ ಪದ್ಧತಿಗಿಂತ ಶೇ. 10.46 ರಷ್ಟು ಅಧಿಕ ಇಳುವರಿ ಪಡೆಯಲಾಗಿದೆ.
12	**ಸೋಯಾ–ಅವರೆ:** ಬಿತ್ತಿದ 15 ಮತ್ತು 30 ದಿನಗಳ ನಂತರ ಶಿಫಾರಿತ ಪದ್ಧತಿ + ಪಿಪಿಎಫ್ಎಮ್ (18+23+27) ನ ಬಳಕೆಯಿಂದ ಶಿಫಾರಿತ ಪದ್ಧತಿಗಿಂತ ಶೇ. 7.50 ಅಧಿಕ ಇಳುವರಿ ಪಡೆಯಲಾಗಿದೆ.
13	**ಸೋಯಾ–ಅವರೆ:** ಪ್ರತಿ ಕೆಜಿ ಬೀಜಕ್ಕೆ ದ್ರವ ರೂಪದ 8 ಮಿಲಿ ರೈಜೋಬಿಯಂ ಎಸ್‌ಬಿ120 + 4 ಮಿಲಿ ರಂಜಕ ಕರಗಿಸುವ ಬ್ಯಾಕ್ಟೀರಿಯಾದಿಂದ ಉಪಚರಿಸಿದ್ದರಿಂದ ಶಿಫಾರಿತ ಪದ್ಧತಿಗಿಂತ (ಪುಡಿರೂಪದ) ಶೇ. 7 ರಿಂದ ಶೇ. 7.97 ಅಧಿಕ ಇಳುವರಿ ಪಡೆಯಲಾಗಿದೆ.
14	**ಗೋವಿನ–ಜೋಳ:** ಶಿಫಾರಸ್ಸು ಮಾಡಿದ ರಸಗೊಬ್ಬರ + ಶೇ. 75 ಜೈವಿಕ ವಸ್ತುಗಳಿಂದ ಪೌಷ್ಟೀಕರಿಸಿದ ಎರೆಹುಳುಗೊಬ್ಬರ II ನೀಡುವುದರಿಂದ ಶೇ. 6.29 ರಿಂದ ಶೇ. 14.21 ಅಧಿಕ ಇಳುವರಿ ಪಡೆಯಲಾಗಿದೆ.
15	**ಹಿಂಗಾರಿ ಜೋಳ:** ಶಿಫಾರಸ್ಸು ಮಾಡಿದ ರಸಗೊಬ್ಬರ + 3 ಟ/ಹೆ ಕೊಟ್ಟಿಗೆ ಗೊಬ್ಬರ + ಪೌಷ್ಟೀಕರಿಸಿದ ಕೊಟ್ಟಿಗೆ ಗೊಬ್ಬರದ ಬಳಕೆಯಿಂದ ಶಿಫಾರಿತ ಪದ್ಧತಿಗಿಂತ ಶೇ. 5.79 ರಿಂದ ಶೇ. 10.00 ಅಧಿಕ ಇಳುವರಿ ಪಡೆಯಲಾಗಿದೆ.
16	**ಗೋದಿ ಒಣ ಬೇಸಾಯ:** ಪ್ರತಿ ಕೆಜಿ ಬೀಜಕ್ಕೆ ಶಿಫಾರಿತ ಗೊಬ್ಬರ + 4 ಮಿಲಿ ದ್ರವರೂಪದ ಅಝೋಸ್ಪಿರಿಲಂ ಬೀಜೋಪಚಾರ + 4 ಮಿಲಿ ರಂಜಕ ಕರಗಿಸುವ ಬ್ಯಾಕ್ಟೀರಿಯಾದ ಉಪಚರಣೆಯಿಂದ ಶಿಫಾರಿತ ಪದ್ಧತಿಗಿಂತ ಶೇ. 7.41 ರಿಂದ ಶೇ. 8.63 ಅಧಿಕ ಇಳುವರಿ ಪಡೆಯಲಾಗಿದೆ.
17	**ಗೋದಿ – ನೀರಾವರಿ:** ಪ್ರತಿ ಕೆಜಿ ಬೀಜಕ್ಕೆ ಶಿಫಾರಿತ ಗೊಬ್ಬರ + @ 4 ಮಿಲಿ ದ್ರವರೂಪದ ಅಝೋಸ್ಪಿರಿಲಂ ಬೀಜೋಪಚಾರ + ಪ್ರತಿ ಕೆಜಿ ಬೀಜಕ್ಕೆ 4 ಮಿಲಿ ರಂಜಕ ಕರಗಿಸುವ ಬ್ಯಾಕ್ಟೀರಿಯಾದ ಬೀಜೋಪಚಾರದಿಂದ ಶಿಫಾರಿತ ಪದ್ಧತಿಗಿಂತ (ಪುಡಿರೂಪದ) ಶೇ. 1.81 ರಿಂದ ಶೇ. 6.31 ಅಧಿಕ ಇಳುವರಿ ಪಡೆಯಲಾಗಿದೆ.
18	**ಕಡಲೆ:** ಶಿಫಾರಿತ ಪದ್ಧತಿ + ರೈಜೋಸ್ಪಿಯರ್ ಕನ್ಸೋರ್ಶಿಯಮ್ 2 + ಪೀಲ್ಲೋಸ್ಪಿಯರ್ ಕನ್ಸೋರ್ಶಿಯಾದ ಬಳಕೆ ಮಾಡಿದ್ದರಿಂದ ಶಿಫಾರಿತ ಪದ್ಧತಿಗಿಂತ ಶೇ 5.26 ರಿಂದ ಶೇ. 15.29 ಅಧಿಕ ಇಳುವರಿ ಪಡೆಯಲಾಗಿದೆ.
19	**ಕಡಲೆ:** ಪ್ರತಿ ಕೆಜಿ ಬೀಜಕ್ಕೆ ದ್ರವ ರೂಪದ 4 ಮಿಲಿ ರೈಜೋಬಿಯಂ ಜಿಆರ್2 + 4 ಮಿಲಿ ರಂಜಕ ಕರಗಿಸುವ ಬ್ಯಾಕ್ಟೀರಿಯಾದ ಬೀಜೋಪಚಾರದಿಂದ ಶಿಫಾರಿತ ಪದ್ಧತಿಗಿಂತ (ಪುಡಿ ರೂಪದ) ಶೇ. 5.06 ರಿಂದ ಶೇ. 7.20 ಅಧಿಕ ಇಳುವರಿ ಪಡೆಯಲಾಗಿದೆ.
20	**ಜೋಳ:** ಪ್ರತಿ ಕೆಜಿ ಬೀಜಕ್ಕೆ ದ್ರವ ರೂಪದ 4 ಮಿಲಿ ಅಜೋಸ್ಪಿರಿಲಂ + 4 ಮಿಲಿ ರಂಜಕ ಕರಗಿಸುವ ಬ್ಯಾಕ್ಟೀರಿಯಾದ ಬೀಜೋಪಚಾರದಿಂದ ಶಿಫಾರಿತ ಪದ್ಧತಿಗಿಂತ (ಪುಡಿ ರೂಪದ) ಶೇ. 7.84 ರಿಂದ ಶೇ. 13.00 ಅಧಿಕ ಇಳುವರಿ ಪಡೆಯಲಾಗಿದೆ.
21	**ಜೋಳ:** ಶಿಫಾರಿತ ಪದ್ಧತಿ + ರೈಜೋಸ್ಪಿಯರ್ ಕನ್ಸೋರ್ಶಿಯಮ್ 2 + ಪೀಲ್ಲೋಸ್ಪಿಯರ್ ಕನ್ಸೋರ್ಶಿಯಾದ ಬಳಕೆಯಿಂದ ಶೇ. 10.82 ರಿಂದ ಶೇ. 12.17 ಅಧಿಕ ಇಳುವರಿ ಪಡೆಯಲಾಗಿದೆ.
22	**ಬಳ್ಳೊಳ್ಳಿ:** ಪ್ರತಿ ಹೆಕ್ಟೇರಿಗೆ 1 ಕೆಜಿ ಬ್ಯೂಟಾಕ್ಲೋರ್ 50 ಇಸಿ + 1 ಕೈಕಳೆ ತೆಗೆಯುವಿಕೆ + ಬಿತ್ತಿದ 30 ದಿನಗಳ ನಂತರ ಎರಡನೆ ಸಿಂಪರಣೆಯು ಶಿಫಾರಿತ ಪದ್ಧತಿಗಿಂತ (ಪ್ರತಿ ಹೆಕ್ಟೇರಿಗೆ 1 ಕೆಜಿ ಬ್ಯೂಟಾಕ್ಲೋರ್ 50 ಇಸಿ + ಶಿಫಾರಿತ ಪದ್ಧತಿ) ಶೇ. 12.17 ರಿಂದ ಶೇ. 13.84 ಅಧಿಕ ಇಳುವರಿ ಪಡೆಯಲಾಗಿದೆ.
23	**ಮೆಣಸಿನ–ಕಾಯಿ:** 15 ದಿನಗಳ ಅಂತರದಲ್ಲಿ ಪ್ರತಿ ಕೆಜಿ ಬೀಜಕ್ಕೆ 10 ಗ್ರಾಂ ಟ್ರೈಕೋಡರ್ಮಾ + ಪ್ರತಿ ಲೀಟರ್ ನೀರಿಗೆ 10 ಗ್ರಾಂ ಸುಡೋಮೋನಾಸ್ ಫ್ಲೂರೆಸೆನ್ಸ್ + 15 ದಿನಗಳ ಅಂತರದಲ್ಲಿ ಪ್ರತಿ ಲೀಟರ್ ನೀರಿಗೆ 0.5 ಗ್ರಾಂ ನೆಟವೋ (ಟ್ರೈಫ್ಲೋಕ್ಸಿಸ್ಟ್ರೋಬಿನ್ 25% + ಟೆಬುಕೊನಾಜೋಲ್ 50%) ದಿಂದ ಬೀಜೋಪಚಾರ ಮಾಡಿದ್ದರಿಂದ ಶಿಫಾರಿತ ಪದ್ಧತಿಗಿಂತ (15 ದಿನಗಳ ಅಂತರದಲ್ಲಿ ಪ್ರತಿ ಕೆಜಿ ಬೀಜಕ್ಕೆ 3 ಗ್ರಾಂ ಕಾರ್ಬನ್‌ಡೆಜಿಮ್ + ಪ್ರತಿ ಲೀಟರ್ ನೀರಿಗೆ 1 ಮಿಲಿ ಡೈಫೆನ್‌ಕೊನಾಜೋಲ್‌ದಿಂದ ಬೀಜೋಪಚಾರ) ಶೇ. 19 ರಿಂದ ಶೇ. 23.8 ಅಧಿಕ ಇಳುವರಿ ಪಡೆಯಲಾಗಿದೆ.

24	**ಕಡಲೆ:** ಕಡಲೆಯ ಹೊಸ ತಳಿಯು ಡಿ.ಬಿ.ಜಿ.ವಿ–204 ತಳಿಯು ಜೆಜೆ–11 ತಳಿಗಿಂತ ಶೇ. 9.12 ರಿಂದ ಶೇ. 23.00 ಅಧಿಕ ಇಳುವರಿ ಪಡೆಯಲಾಗಿದೆ. ಬೇಗನೆ ಕೊಯ್ಲಿಗೆ ಬರುತ್ತದೆ. ಮತ್ತು ಉತ್ತಮ ಗುಣಮಟ್ಟದ ಕಾಳುಗಳನ್ನು ನೀಡಿದೆ.
25	**ಸೊಯಾ–ಅವರೆ:** ವಿವಿಧ ತಳಿಗಳಲ್ಲಿ ಡಿ.ಎಸ್.ಬಿ.–31 ತಳಿಯಲ್ಲಿ ಜೆಎಸ್ 335 ಗಿಂತ 26% ಹೆಚ್ಚಿನ ಇಳುವರಿ ಪಡೆಯಲಾಗಿದೆ.
26	**ಮೆಣಸಿನ–ಕಾಯಿ:** ಮೆಣಸಿನಕಾಯಿ ಬೆಳೆಯಲ್ಲಿ ಸಮಗ್ರ ರೋಗ ನಿರ್ವಹಣೆ ಪದ್ಧತಿಯಲ್ಲಿ ನೆಟವೊ ಶಿಲೀಂಧ್ರನಾಶಕ ಬಳಸುವುದರಿಂದ ಉತ್ತಮ ಇಳುವರಿ ಪಡೆಯಲಾಗಿದೆ.
27	**ಬಿ.ಟಿ. ಹತ್ತಿ:** ಹತ್ತಿಯಲ್ಲಿ ಸ್ಪೈನೋಟೋರಮ್ 12% ಎಸ್.ಸಿ. @ ಒಂದು ಮಿ.ಲಿ./ಲೀಟರ್ ನೀರಿಗೆ ಬಳಸಿ ಸರ್ಮಪಕವಾಗಿ ಗುಲಾಬಿ ಕಾಯಿಕೊರಕ ಕೀಟವನ್ನು ಹತೋಟಿ ಮಾಡಿ ಹೆಚ್ಚಿನ ಇಳುವರಿ ಪಡೆಯಲಾಯಿತು.
28	**ಸೋಯಾ–ಅವರೆ:** ರೈಜೊಬಿಯಮ್ ಎಸ್ ಬಿ 120 @ 8 ಮಿ.ಲೀ. + ಪಿ ಎಸ್ ಬಿ @ 4 ಎಮ್ ಎಲ್ ನಂತೆ ಬಳಸಿ ಪ್ರತಿ ಕೆಜಿ ಬೀಜಕ್ಕೆ ಬೀಜೋಪಚಾರ ಮಾಡಿ 7% ಹೆಚ್ಚು ಇಳುವರಿ ಪಡೆಯಲಾಗಿದೆ.
29	**ಗೋವಿನ ಜೋಳ:** ಅಜಾಕ್ಸಿಸ್ಟ್ರೊಬಿನ್ 18.2% + ಡೈಪನ್‌ಕೊನಾಜೋಲ್ 11.4% @ 1 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬಳಸಿ ಬಿತ್ತಿದ 35 ಮತ್ತು 50 ದಿನಗಳ ನಂತರ ಸಿಂಪರಣೆ ಮಾಡಿದ ತಾಕಿನಲ್ಲಿ ಹೆಕ್ಸಾಕೊನಜೊಲ್ 5 ಇ ಸಿ @ 1 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬಳಸಿ ಬಿತ್ತಿದ 35 ಮತ್ತು 50 ದಿನಗಳ ನಂತರ ಸಿಂಪರಣೆ ಮಾಡಿದ ತಾಕಿಗಿಂತ ಅಧಿಕ ಇಳುವರಿ ಪಡೆಯಲಾಗಿದೆ.
